
## ಶ್ರದ್ಧಾಂಜಲಿ



## ಶ್ರೀ ಬಿ.ವಿ. ಕಾರಂತರಿಗೆ

(೧೯೨೮ – ೨೦೦೨)

*ನೀನು ಒಲಿದುದು ದಿಟ ನಾವು ನಲಿದುದು ದಿಟ*
*ಬಹ ನೆಚ್ಚು ದಿಟ*
*ಕೊಳಲೇ ಕೊಳಲೇ*
*(ಪುತಿನ 'ಗೋಕುಲ ನಿರ್ಗಮನ' ದ ಸಾಲುಗಳನ್ನು ಮರುದನಿಸಿ)*

# ಶಾಪಗ್ರಸ್ತ ಗಂಧರ್ವ
# ಬಿ.ವಿ. ಕಾರಂತ ಸಂಸ್ಮರಣೆ

ಕೀರ್ತಿನಾಥ ಕುರ್ತಕೋಟಿ

೧೯೬೨-೬೩ ರಲ್ಲಿ ನಾನು ಬಿ.ವಿ. ಕಾರಂತರನ್ನು ಮೊದಲು ನೋಡಿದ್ದು. ಆಗ ನಾನು ಗುಜರಾತದ ಆನಂದದಲ್ಲಿದ್ದೆ. 'ನಡೆದು ಬಂದ ದಾರಿ' ಯ ಸಂಪುಟಗಳು ಪ್ರಕಟವಾಗಿದ್ದ ಕಾಲ ಅದು. ಅವುಗಳನ್ನು ಓದಿದ್ದ ಕಾರಂತರು ದಿಲ್ಲಿಯಿಂದ ನನ್ನನ್ನು ಹುಡುಕಿಕೊಂಡು ಆನಂದದವರೆಗೆ ಬಂದಿದ್ದರು. ಅವರು ಆಗ ಹಿಂದಿ ನಾಟಕಗಳ ಬಗ್ಗೆ ಪಿಎಚ್‌ಡಿ ಮಾಡುತ್ತಿದ್ದರು. ತಮ್ಮ ಸಂಪ್ರಬಂಧಕ್ಕೆ ಸ್ವಲ್ಪ ಸಲಹೆ ಕೇಳಲು ಬಂದಿದ್ದರು. ನಮ್ಮ ಮನೆಯಲ್ಲಿ ನಾಲ್ಕೈದು ದಿನ ಕಳೆದರು. ನನ್ನ ಪರಿಚಯವಾದ ಮೇಲೆ ಅವರಿಗೆ ಕರ್ನಾಟಕಕ್ಕೆ ತಿರುಗಿ ಬಂದು ಹೊಸ ರಂಗಭೂಮಿಯನ್ನು ಕಟ್ಟಬೇಕೆಂಬ ಆಲೋಚನೆ ಅವರ ಮನಸ್ಸಿನಲ್ಲಿ ಮೊಳೆಯತೊಡಗಿತು. ಆದರೂ ಅದಕ್ಕೆ ಕಾಲ ಕೂಡಿ ಬಂದಿರಲಿಲ್ಲ. ದಿಲ್ಲಿಯಿಂದ ಮೇ ತಿಂಗಳ ಸೂಟಿಯಲ್ಲಿ ಧಾರವಾಡಕ್ಕೆ ಬಂದು ದಿ। ಜಿ.ಬಿ. ಜೋಶಿಯವರ ಸಹವಾಸ ದೊರಕಿಸಿದರು. ಅವರಿಂದ 'ಸತ್ತವರ ನೆರಳು' ನಾಟಕವನ್ನು ಬರೆಯಿಸಿದರು. ಬರೆದಾದ ಮೇಲೆ ನಾನು ಆ ನಾಟಕವನ್ನು ಐವತ್ತು ಅರವತ್ತು ಜನರೆದುರು ಓದಿ ತೋರಿಸಿದಾಗ ಗಿರೀಶ ಕಾರ್ನಾಡರ ಜೊತೆಗೆ ಕಾರಂತರೂ ಇದ್ದರು.

ಆಡಾಡುತ್ತ ಅವರ ಸ್ನೇಹಿತರ ವಲಯ ವಿಸ್ತಾರವಾಗತೊಡಗಿತು. ಬೆಂಗಳೂರಿನ ತುಂಬ ಅವರಿಗೆ ಸ್ನೇಹಿತರು. ಎಪ್ಪತ್ತರ ದಶಕದಲ್ಲಿ ಅವರ ಮೂರು ನಾಟಕಗಳು – ಈಡಿಪಸ್, ಸಂಕ್ರಾಂತಿ, ಜೋಕುಮಾರಸ್ವಾಮಿ – ಹೊಸ ರಂಗಭೂಮಿಯನ್ನು ಕನ್ನಡ ನಾಡು ಮರೆಯದಂತೆ ಸೃಷ್ಟಿಸಿದವು. ನಾಟಕದ ಭಾಷೆಯೊಂದೇ ಅಲ್ಲ, ರಂಗಭೂಮಿಗೆ ಹಲವಾರು ಭಾಷೆಗಳಿವೆ ಎಂದು ನಮಗೆ ತೋರಿಸಿಕೊಟ್ಟವರೇ ಕಾರಂತರು.

ಅಂದು 'ಜೋಕುಮಾರಸ್ವಾಮಿ'ಯ ಪ್ರಯೋಗ ಅಕ್ಷರಶಃ ಬೆಂಗಳೂರಿಗೆ ಹುಚ್ಚು ಹಿಡಿಸಿತ್ತು. ಪ್ರಯೋಗದಲ್ಲಿ ತಪ್ಪು ಇರಲಿಲ್ಲವೆಂದಲ್ಲ. ಕಾರಂತರು ಮತ್ತು ಕಂಬಾರರು ಭಿನ್ನ ಶ್ರುತಿಗಳಲ್ಲಿ ಹಾಡಿದಾಗ ಹರಳು ಕಡಿದಂತಾಗುತ್ತಿತ್ತು. ಆದರೆ ಕಾರಂತರ

ನಿರ್ದೇಶನದ ಪ್ರತಿಭೆಯಿಂದ ಶ್ರಾವ್ಯವಿದ್ದದ್ದೆಲ್ಲ ದೃಶ್ಯವಾಗಿ ಪರಿಣಮಿಸಿತ್ತು. ನಾಟಕವನ್ನು ದೃಶ್ಯಕಾವ್ಯವೆಂದು ಕರೆದು ಸಾವಿರಾರು ವರ್ಷಗಳಾಯಿತು. ಆದರೂ ದೃಶ್ಯತೆ ನಾಟಕದ ಒಂದು ನಿಯಾಮಕ ತತ್ವವಾದದ್ದು ಕಾರಂತರ ನಿರ್ದೇಶನದಲ್ಲಿ ಮಾತ್ರ. ಕಾರಂತರ ಕಂಪನಿ ನಾಟಕಗಳ ಸಂಸ್ಕಾರ ಅದಕ್ಕೆ ಕಾರಣವಾಗಿರಬಹುದು. ಆದರೆ ಕಂಪನಿ ನಾಟಕಗಳ ದೃಶ್ಯತೆಗೂ ಕಾರಂತರ ನಾಟಕಗಳ ದೃಶ್ಯತೆಗೂ ಅಜಗಜಾಂತರವಿದೆ. ಕಂಪನಿ ನಾಟಕಗಳ ದೃಶ್ಯತೆ ಹೊರಗಿನಿಂದ ತಂದು ನಾಟಕದ ಮೇಲೆ ಹೇರಿದ್ದು. ಗುಬ್ಬಿ ಕಂಪನಿಯ 'ಕುರುಕ್ಷೇತ್ರ' ದಂಥ ನಾಟಕಗಳಲ್ಲಿ ದೃಶ್ಯತೆ ನಾಟಕದ ಜೊತೆಗೆ ಸ್ಪರ್ಧೆಹೂಡಿ ನಾಟಕವನ್ನು ಸೋಲಿಸುವಂತಾಗಿತ್ತು. ಕಾರಂತರ ನಾಟಕಗಳಲ್ಲಿ ದೃಶ್ಯತೆ ನಾಟಕದ ಒಳಗಿಂದ ನಟರ ಮೂಲಕವಾಗಿಯೇ ಹುಟ್ಟಿ ಬರುತ್ತಿತ್ತು.

'ಸಂಕ್ರಾಂತಿ' ನಾಟಕದಲ್ಲಿ ಕಾರಂತರು ಉಜ್ಜನ ಪಾತ್ರ ವಹಿಸುತ್ತಿದ್ದರು. ಅದಾಗಲೇ ಮತಾಂತರ ಹೊಂದಿದ್ದ ಉಜ್ಜ ಮತ್ತು ಅವನ ಅನುಯಾಯಿಗಳು ಮತ್ತೆ ಕುಡಿತವನ್ನು ಪ್ರಾರಂಭಿಸಿದ ಒಂದು ಸನ್ನಿವೇಶ. ಉಜ್ಜ ಕುಡಿಯುತ್ತ ಕೂತಿದ್ದಾಗ ಒಬ್ಬ ಹುಡುಗ ಓಡಿ ಬಂದು ಬಸವಣ್ಣನವರು ಬರುತ್ತಿದ್ದಾರೆ ಎಂದು ಹೇಳುತ್ತಾನೆ. ಉಜ್ಜ ಗುಡಿಸಲಿನೊಳಗೆ ಹೋಗಿ ತನ್ನ ತೆಕ್ಕೆ ತುಂಬ ಕಾವಿ ಬಟ್ಟೆಗಳನ್ನು ತಂದು ರಂಗದಲ್ಲಿ ತೂರುತ್ತಾನೆ. ಪರಿಣಾಮವೆಂದರೆ ಕೆಂಪು ಮೋಡವೊಂದು ಪ್ರೇಕ್ಷಕರ ಕಣ್ಣಿಗೆ ಕಾಣುತ್ತದೆ. ಕ್ರಮೇಣ ಎಲ್ಲರೂ ಕಾವಿಬಟ್ಟೆಗಳನ್ನುಟ್ಟು ಶರಣರಾದಾಗ, ಕೆಂಪು ಗೊಂದಲದೊಳಗಿಂದ ಒಂದು ವ್ಯವಸ್ಥೆ ಸೃಷ್ಟಿಯಾಗುತ್ತದೆ. ಇದು ಅರ್ಥಪೂರ್ಣವಾದ, ಆದರೆ ವ್ಯಂಗ್ಯದಿಂದ ಕೂಡಿದ ರೂಪಾಂತರ. ವೇಷಾಂತರ ಮತಾಂತರದ ಅಸ್ಥಿರ ಸಂಜ್ಞೆಯಾಗಿ ಕಣ್ಣೆದುರು ಬಂದು ನಿಲ್ಲುತ್ತದೆ. ಸ್ವಭಾವ ಮತ್ತು ಸಂಸ್ಕಾರಗಳ ಈ ಅದಲು ಬದಲು ನಾಟಕೀಯವಾಗುತ್ತದೆ.

ಇದಕ್ಕೆ ಇನ್ನೊಂದು ಉದಾಹರಣೆಯೆಂದರೆ 'ಗೋಕುಲ ನಿರ್ಗಮನ'ದಲ್ಲಿ ಕಾರಂತರು ಅಗರಬತ್ತಿಗಳನ್ನು ಉಪಯೋಗಿಸಿದ ವಿಧಾನ. ಸಂಪೂರ್ಣವಾಗಿ ಕತ್ತಲೆ ಆವರಿಸಿದ ರಂಗಭೂಮಿಯಲ್ಲಿ ಮಿಣುಕುಹುಳಗಳಂತೆ ಅಗರಬತ್ತಿಯ ಕಿಡಿಗಳು ಕಣ್ಣನ್ನು ಸೆರೆಹಿಡಿಯುತ್ತವೆ. ನೂರಾರು ಕಿಡಿಗಳ ಬೆಳಕಿನಲ್ಲಿ ಪ್ರತ್ಯಕ್ಷವಾಗುವುದು ಕತ್ತಲೆಯೇ ಹೊರತು ಬೇರೆ ಯಾವ ವಸ್ತುವೂ ಅಲ್ಲ. ಬೆಳಕಿನಿಂದ ಕತ್ತಲೆ ಇಲ್ಲವಾಗುವುದಿಲ್ಲ, ಬದಲಾಗಿ ಕಣ್ಣುತುಂಬಿ ನಿಲ್ಲುತ್ತದೆ. 'ಗೋಕುಲ ನಿರ್ಗಮನ' ದ ಪ್ರಣಯ ನಡೆಯುವುದು ಇಂಥ ರಹಸ್ಯಮಯವಾದ ಕತ್ತಲೆಯಲ್ಲಿ. 'ಯಮುನಾಕೂಲೇ ರಹಃಕೇಲಯಃ'. ಕಾರಂತರು ಜಯದೇವನ 'ಗೀತಗೋವಿಂದ'ವನ್ನು ಓದಿದ್ದರೋ



ಇಲ್ಲವೋ ಗೊತ್ತಿಲ್ಲ. ಆದರೆ 'ಗೀತಗೋವಿಂದ'ದ ಮೊದಲ ಪದ್ಯದ ಸಾಕ್ಷಾತ್ಕಾರ ವಾಗುವುದು 'ಗೋಕುಲ ನಿರ್ಗಮನ' ದ ಈ ದೃಶ್ಯದಲ್ಲಿ ಎಂದು ಹೇಳಬಹುದು. ಪ್ರಣಯದ ಅನುಭವ ಅನುಭಾವವಾಗಬೇಕಾದರೆ ಇಂಥ ಕತ್ತಲೆಯೇ ಬೇಕು. ಬಹುಶಃ ಕದಳಿಯ ಕತ್ತಲೆಯಲ್ಲಿ ಅಕ್ಕ ಕಂಡ, ಅಲ್ಲಮ ಕಂಡ ಬೆಳಕು ಇದೇ ಇರಬೇಕು. ಅಥವಾ ಪುತಿನ ಅವರ ಕಾವ್ಯಭಾಷೆಯಲ್ಲಿಯ ಕತ್ತಲೆ ಮತ್ತು ಬೆಳಕು ಇಂಥದಾಗಿರಬೇಕು. ಅಗರ ಬತ್ತಿಯ ಪ್ರತಿಯೊಂದು ಕಿಡಿ ಇಂಥ ಕತ್ತಲೆಗಾಗಿ ಹಾತೊರೆಯುತ್ತದೆ, ತನ್ನ ಕ್ಷಣಿಕವಾದ ಬೆಳಕನ್ನು ಕತ್ತಲೆಯಲ್ಲಿ ಮುಳುಗಿಸಲು ಬಯಸುತ್ತದೆ.

'ಸತ್ತವರ ನೆರಳು' ನಾಟಕವನ್ನು ಬರೆದವರು ದಿ| ಜಿ.ಬಿ. ಜೋಶಿ. ಆದರೆ ಅದು ಕಾರಂತರದೇ ನಾಟಕ. ಹಾಗೆ ನೋಡಿದರೆ 'ಸತ್ತವರ ನೆರಳು' ನಾಟಕ ತಯಾರಾದದ್ದೇ ಹಾಗೆ. ಅದರಲ್ಲಿ ವಾಕ್ಯಾರ್ಥದ ಸಂಸ್ಕೃತ ಸಂವಾದವನ್ನು ಬರೆದುಕೊಟ್ಟವರು ಬನ್ನಂಜೆ ಗೋವಿಂದಾಚಾರ್ಯರು. ಹಾಡುಗಳೆಲ್ಲ ಪುರಂದರದಾಸರವು. ಮೂಲ ಪರಿಕಲ್ಪನೆ ಜೋಶಿಯವರದು. ನಿರ್ದೇಶನ ಕಾರಂತರದು. ಇಷ್ಟೆಲ್ಲ ಕೈಗಳಿದ್ದರೂ ಅದು ಒಂದು ನಾಟಕ. ಬಹುಶಃ ರಂಗಭೂಮಿಯ ಮೇಲೆ ತಾನಾಗಿ ಸ್ವತಂತ್ರವಾಗಿ ರೂಪುತಳೆಯುವ ನಾಟಕ. ಅದರಲ್ಲಿಯ ಪಾತ್ರಗಳು ಪರಾಧೀನ ವ್ಯಕ್ತಿಗಳು, ತಮಗೇ ಗೊತ್ತಿಲ್ಲದ ಅದೃಶ್ಯ ಸೂತ್ರಗಳಿಂದ ಬಿಗಿದುಕೊಂಡು ನಟಿಸುವ ವ್ಯಕ್ತಿಗಳು. ವ್ಯಕ್ತಿಗಳಿಲ್ಲದಿದ್ದರೂ ಕಣ್ಣೆದುರು ಸಾಕಾರವಾಗಿ ನಿಂತಿರುವ ಮಠ. ಅದರ ಕ್ಷಣಕ್ಷಣಕ್ಕೂ ರೂಪಾಂತರ ಪಡೆದು ಚಲಿಸುತ್ತಿರುವ ಇತಿಹಾಸ. ಯಾವುದು ಚಲಿಸಬೇಕೋ ಅದು ನಿಶ್ಚಲ, ಯಾವುದು ನಿಶ್ಚಲವಾಗಿರಬೇಕೋ ಅದು ಚಲನಶೀಲ. ಇಂಥ ವಿಪರೀತ ಲೋಕವನ್ನು ಹತ್ತು ಬಗೆಯ ಬಂಧನಗಳ ಮೂಲಕವೇ ಸ್ವತಂತ್ರವಾಗಿ ರೂಪಿಸುವ ನಾಟಕ. ಇಂಥ ನಾಟಕ ಒಡಮೂಡಿದ್ದು ಕಾರಂತರ ನಿರ್ದೇಶನದ ಮೂಲಕವಾಗಿಯೇ ಎಂದರೆ ತಪ್ಪಾಗ ಲಾರದು. ಬಹುತೇಕವಾಗಿ ನಮ್ಮ ಜಾನಪದ ರೂಪಕಗಳೆಲ್ಲ ರೂಪುಗೊಳ್ಳುವುದು ಹೀಗೆಯೇ ಎಂದು ಕಾಣುತ್ತದೆ. ಶುದ್ಧ ನಾಟಕಕ್ಕೆ ಕರ್ತೃ ಬೇಕಾಗಿಲ್ಲವೋ ಏನೋ!

ಕಾರಂತರು ನಿರ್ದೇಶಿಸಿರುವ ಎಲ್ಲ ನಾಟಕಗಳನ್ನೂ ನಾನು ನೋಡಿಲ್ಲ. ನೋಡಿದ್ದರೆ ಅವುಗಳ ಬಗ್ಗೆ ಬರೆಯಬಹುದಿತ್ತೋ ಏನೋ! ಅವರ ನಿರ್ದೇಶನ ಕಲೆಯ ಬಗ್ಗೆ ಖಚಿತವಾದ ಕೆಲವು ಮಾತುಗಳನ್ನು ಹೇಳಬಹುದಿತ್ತು. ದೊರೆತ ಪರಿಮಿತವಾದ ಅನುಭವದ ಮೇಲಿಂದ ಹೇಳುವುದಾದರೆ ಕೆಲವು ಮಾತುಗಳನ್ನು ಹೇಳಬಹುದು. ನಟನೇ ರಂಗಭೂಮಿಯ ಮೇಲೆ ಮುಖ್ಯ ಎಂದು ಹೇಳುತ್ತಿದ್ದರೂ ಅವರು ಸತ್ಯದೇವ ದುಬೆಯವರಂತೆ ನಟನ ಮೈಯಲ್ಲಿ ಪಾತ್ರವನ್ನು ಕಡೆದು ತೆಗೆಯುತ್ತಿರಲಿಲ್ಲ. ಅವರಿಗೆ ನಟರು ಕೂಡ ನಾಟಕದಲ್ಲಿ ಉಪಯೋಗಿಸಲೇಬೇಕಾದ ದೃಶ್ಯವಸ್ತುಗಳಾಗಿದ್ದರು.

ಒಂದು ಮಕ್ಕಳ ನಾಟಕದಲ್ಲಿ – 'ಕೃತಘ್ನ' ಇರಬೇಕು – ಮಕ್ಕಳನ್ನು ಉಪಯೋಗಿಸಿ ಗುಡ್ಡ, ನದಿ, ಗಿಡಗಳನ್ನು ಸೃಷ್ಟಿಸಿದ್ದರು. ಕಥಕ್ಕಳಿಯಲ್ಲಿ ಹಸ್ತಮುದ್ರೆಗಳಿಂದ ವಸ್ತುಗಳನ್ನು ಸೃಷ್ಟಿಸುವ ನಟ ನಟನಾಗಿಯೇ ಉಳಿಯುತ್ತಾನೆ. ಅವನ ಕೈ ಒಂದೇ ಅಸ್ವತಂತ್ರ, ಅವನು ಸ್ವತಂತ್ರನೇ. ಆದರೆ ಕಾರಂತರಲ್ಲಿ ಅವನೂ ಕೆಲವು ಸಾರೆ ಅಸ್ವತಂತ್ರ. ನಾಟಕವೊಂದೇ ಸ್ವತಂತ್ರ. ಕಾರಂತರು ನಟರನ್ನು ತಯಾರು ಮಾಡುತ್ತಿದ್ದದ್ದೇ ಹಾಗೆ. ಅವರು ತರಬೇತಿ ಕೊಡುತ್ತಿದ್ದದ್ದು ನಟಸಮುದಾಯಕ್ಕೆ ಹೊರತು ವ್ಯಕ್ತಿಶಃ ನಟನಿಗಲ್ಲ. ನಟರು ಕಂಬಗಳಾಗಬೇಕು, ಗಿಡಮರಗಳಾಗಬೇಕು, ಮನುಷ್ಯರೂ ಆಗಬೇಕು. ಕಾರಂತರು ರಂಗದ ಮೇಲೆ ಕಟ್ಟುವ ನಾಟಕದ ರೀತಿಯಿದು.

ದೃಶ್ಯಸೃಷ್ಟಿಯ ಜೊತೆಗೆ ಕಾರಂತರು ನಾಟಕದ ಸಂಗೀತವನ್ನೂ ಹೊಸದಾಗಿ ಸೃಷ್ಟಿಸಿದರು. 'ಸತ್ತವರ ನೆರಳು' ನಾಟಕದ ಹಾಡುಗಳು ನಾಟಕದ ಸಂದರ್ಭವನ್ನು ತಪ್ಪಿಸಿಕೊಂಡು ಸ್ವತಂತ್ರವಾಗಿ ಆಕರ್ಷಿಸುವುದಕ್ಕೆ ಹೊಣೆ ಕಾರಂತರಲ್ಲ. ಆ ಹಾಡುಗಳಿಗೆ ಪುರಂದರದಾಸರು ನೆನೆಯದಿದ್ದ ಅರ್ಥ ನಾಟಕದ ಸಂದರ್ಭದಲ್ಲಿ ಬರುತ್ತದೆ. ಮಠದ ಸ್ವಾಮಿಗಳು ಸತ್ತಾಗ ಹಾಡುವ ಹಾಡು ಒಂದು ಜೋಗುಳ ಪದ. ಈ ವಿರೋಧ ಅರ್ಥಪೂರ್ಣವಾಗಿದೆ. ಸ್ವಾಮಿ ಸತ್ತು ಇನ್ನೊಬ್ಬ ಸ್ವಾಮಿ ಹುಟ್ಟಿಬರಲು ಅದು ಸಹಾಯ ಮಾಡುತ್ತದೆ. ನಡುವಿನ ಅಂತರದಲ್ಲಿ ಕರುಳಿರಿಯುವ ಕರುಣವನ್ನು ಹಾಡು ಹುಟ್ಟಿಸುತ್ತದೆ. ನಾಟಕ ಸಂಗೀತ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದು 'ಗೋಕುಲ ನಿರ್ಗಮನ'ದಲ್ಲಿ ಎಂದು ಕಾಣುತ್ತದೆ. ಪುತಿನ ಅವರ ಹಾಡುಗಳಲ್ಲಿ ಸ್ಥಾಯಿಯಾಗಿರುವ ಭಕ್ತಿಯನ್ನು ಕಾರಂತರು ವಿಲಕ್ಷಣವಾಗಿ ಆ ನಾಟಕದಲ್ಲಿ ಉಪಯೋಗಿಸಿದ್ದಾರೆ. 'ಗೋಕುಲ ನಿರ್ಗಮನ'ದ ಹಾಡುಗಳೆಲ್ಲ ಶಾಸ್ತ್ರೀಯ ಸಂಗೀತದ ಧಾಟಿಯವು. ಆದರೆ ಕಾರಂತರು ಉಪಯೋಗಿಸಿದ್ದೆಲ್ಲ ಜಾನಪದ ಧಾಟಿಗಳನ್ನು. ಭಕ್ತಿ ಮೂಲತಃ ಜನಪದವಾಗಿರುವುದರಿಂದ ಕಾರಂತರು ಉಪಯೋಗಿಸಿದ ಧಾಟಿಗಳು ಆಭಾಸವೆನಿಸಲಿಲ್ಲ.

ನಮ್ಮ ಕಂಪನಿನಾಟಕಗಳೂ ಸಂಗೀತನಾಟಕಗಳೇ ಆಗಿವೆ. ಆದರೆ ಕಂಪನಿ ನಾಟಕಗಳಲ್ಲಿ ಸಂಗೀತ ಮಾಧ್ಯಮವಲ್ಲ. ನಾಟಕ ನಡೆಯುವುದು ಸಂಭಾಷಣೆಯ ಮೂಲಕವಾಗಿಯೇ. ಆದರೆ ನಡುನಡುವೆ ಬರುವ ಹಾಡುಗಳು ನಾಟಕಕ್ಕೆ ಸಂಗೀತದ ಮೆರುಗು ನೀಡುತ್ತವೆ. ಕಾರಂತರ ಸಂಗೀತ ನಾಟಕದ ಹಲವಾರು ಮಾಧ್ಯಮಗಳಲ್ಲಿ ಒಂದಾಗುತ್ತದೆ. ಅವರ 'ಜೋಕುಮಾರ ಸ್ವಾಮಿ' ಮತ್ತು 'ಗೋಕುಲ ನಿರ್ಗಮನ' ಇವೆರಡೂ ಅಂಥ ನಾಟಕಕ್ಕೆ ಶ್ರೇಷ್ಠ ಉದಾಹರಣೆಗಳಾಗಿವೆ. ಕಾರಂತರು ನಾಟಕದ ಅನೇಕ ಭಾಷೆಗಳನ್ನು ಕುರಿತು ಆಳವಾದ ಚಿಂತನೆ ನಡೆಸಿದ್ದರು. ಅವನ್ನೆಲ್ಲ ಈಗ ಮತ್ತೊಮ್ಮೆ ಅಭ್ಯಾಸಮಾಡುವ ಕಾಲ ಈಗ ಬಂದಿದೆ.



ಕಳೆದ ಫೆಬ್ರುವರಿಯಲ್ಲಿ ಕಾರಂತರು ಧಾರವಾಡಕ್ಕೆ ಇಲ್ಲಿಯ ನಾಟಕಶಾಲೆಯ ಉದ್ಘಾಟನೆಗಾಗಿ ಬಂದಿದ್ದರು. ಆಗ ಅವರನ್ನು ಕಂಡಿದ್ದೆ. ಮತ್ತೆ ಬರುವುದಾಗಿ ಮಾತು ಕೊಟ್ಟಿದ್ದರು. ಕುಮಾರವ್ಯಾಸನ ಭಾರತ ಕಥೆಯನ್ನು ರಂಗದ ಮೇಲೆ ತರಬೇಕೆಂದು ಆಸೆ ಇದೆ ಎಂದಿದ್ದರು. ಆದರೆ ನಮ್ಮ ಎಲ್ಲ ಆಸೆಗಳೂ ಪೂರ್ಣವಾಗುವುದಿಲ್ಲ.

ಇದನ್ನೆಲ್ಲ ನೆನೆದಾಗ ಕಾರಂತರೇ ಒಂದು ಆಸೆಯಂತೆ ನನಗೆ ಕಾಣುತ್ತಾರೆ. ಅದು ಒಬ್ಬ ವ್ಯಕ್ತಿಯ ಆಸೆಯಲ್ಲ. ಕಾರಂತರೆಂದರೆ ಕನ್ನಡ ರಂಗಭೂಮಿ ಕಂಡ ಒಂದು ಕನಸು. ಅವರ ನಿಧನದಿಂದ ಈಗ ನಮಗೆ ಎಚ್ಚರವಾಗಿದೆ. ರಂಗಭೂಮಿ ಖಾಲಿಯಾಗಿದೆ. ಅವರು ಒಬ್ಬ ವ್ಯಕ್ತಿ ಎಂದು ನನಗೆ ಅನಿಸಲೇ ಇಲ್ಲ. ಒಬ್ಬ ಶಾಪಗ್ರಸ್ತ ಗಂಧರ್ವ ಬಂದು ನಾಲ್ಕುದಿನ ನಮ್ಮೊಡನೆ ಇದ್ದು ಹೋದ ಹಾಗಾಗಿದೆ. ಈ ಗಂಧರ್ವನ ಸಂದೇಶ ಏನಿರಬಹುದು ಎಂದು ತಿಳಿದುಕೊಳ್ಳುವ ಮೊದಲೇ ಅವನು ಮಾಯವಾಗಿ ಬಿಟ್ಟಂತಾಗಿದೆ. ಬೇಂದ್ರೆಯವರ 'ಸ್ವಪ್ನ ನೌಕೆ' ಎಂಬ ಕವಿತೆಯ ಕೊನೆಯ ಸಾಲು ನೆನಪಾಗುತ್ತದೆ.

'ಹೋಯ್ತೋ ಹಡಗಾ ಬಂಗಾರದ ಹುಡುಗಾ'.

### ನೀನಾಸಮ್ ರಂಗಶಿಕ್ಷಣ ಕೇಂದ್ರ – ಚಟುವಟಿಕೆಗಳು

ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಉಡುಪಿಯ ಯಕ್ಷಗಾನ ಕೇಂದ್ರದ ಕಲಾವಿದರು ಆಗಸ್ಟ್ ೧೭ರಂದು 'ಧ್ರುವಚರಿತ್ರೆ' ಎಂಬ ಯಕ್ಷಗಾನ ಪ್ರದರ್ಶನವನ್ನು ಹಾಗೂ ಆಗಸ್ಟ್ ೧೮ರಂದು ಯಕ್ಷಗಾನದ ಪ್ರಾತ್ಯಕ್ಷಿಕೆ ಮತ್ತು ತಾಳಮದ್ದಲೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿವಮೊಗ್ಗ ಇವರ 'ಸಾಂಸ್ಕೃತಿಕ ಸೌರಭ' ಕಾರ್ಯಕ್ರಮದ ಅಂಗವಾಗಿ ಇವು ನಡೆದವು. ಆಗಸ್ಟ್‌ನಿಂದ ಅಕ್ಟೋಬರ್ ಅವಧಿಯಲ್ಲಿ ವಿದ್ಯಾರ್ಥಿಗಳಿಗಾಗಿ ಶ್ರೀ ನೀ. ನಾ.ಮಧ್ಯಸ್ಥರಿಂದ ಕಾವ್ಯಸಹೃದಯತೆಯ ಕಮ್ಮಟ, ಶ್ರೀ ಪೇತ್ರಿ ಮಾಧವ ನಾಯಕರಿಂದ ಯಕ್ಷಗಾನ ಮುಖವರ್ಣಿಕೆಯ ಕಾರ್ಯಾಗಾರ ಮತ್ತು ಶ್ರೀ ಬಿ.ಎನ್. ನಾರಾಯಣ (ನಾಣಿ) ಯವರಿಂದ ವಾಸ್ತವಶೈಲಿ ಪ್ರಸಾಧನ ಕಾರ್ಯಾಗಾರಗಳು ನಡೆದವು. ಆಗಸ್ಟ್ ೨೫ರಂದು ಸಂಜೆ ವಿದ್ಯಾರ್ಥಿಗಳು ಗಿರೀಶ್ ಕಾಸರವಳ್ಳಿಯವರೊಂದಿಗೆ ಸಂವಾದ ನಡೆಸಿದರು. ಅಕ್ಟೋಬರ್‌ನಲ್ಲಿ ನಡೆದ ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡರು. ನವೆಂಬರ್ ೧೧ರಿಂದ೧೪ರವರೆಗೆ ಟಾಲ್‌ಸ್ಟಾಯ್‌ನ 'ಕಾರ್ಮುಗಿಲ ಮಿಂಚು' (ಅನುಃ ವೆಂಕಟರಮಣ ಐತಾಳ, ನಿರ್ದೇಶನ : ಚಿದಂಬರರಾವ್ ಜಂಬೆ) ನಾಟಕದ ಪ್ರದರ್ಶನಗಳು ನಡೆದವು.

# ಜಾಗತೀಕರಣ ಮತ್ತು ಭಾರತ: ಸೈದ್ಧಾಂತಿಕ ನೆಲೆಗಳು ಹಾಗೂ ಐತಿಹಾಸಿಕ ವಿಪರ್ಯಾಸಗಳು

ಎನ್. ಮನು ಚಕ್ರವರ್ತಿ

*ಕರ್ನಾಟಕ ಸಾಹಿತ್ಯ ಅಕಾಡೆಮಿ, ಕುವೆಂಪು ವಿಶ್ವವಿದ್ಯಾಲಯ ಮತ್ತು ಶಿವಮೊಗ್ಗ ಕರ್ನಾಟಕ ಸಂಘಗಳು ಜಂಟಿಯಾಗಿ ಶಿವಮೊಗ್ಗದಲ್ಲಿ ೨೦೦೨ರ ಜೂನ್ ೮-೯ರಂದು ಹಮ್ಮಿಕೊಂಡ ಎರಡು ದಿನಗಳ 'ಜಾಗತೀಕರಣ:ಸಮಗ್ರ ಮಂಥನ' ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ*

ಈ ಪ್ರಬಂಧದಲ್ಲಿ ನಾನು ಜಾಗತೀಕರಣಕ್ಕೆ ಇದುವರೆಗೆ ವಿಭಿನ್ನ ನೆಲೆಗಳಿಂದ ಬಂದಿರುವ ಪ್ರತಿಕ್ರಿಯೆಗಳನ್ನು ಅರಿಯುವ ಮತ್ತು ಜಾಗತೀಕರಣಕ್ಕೆ ವ್ಯಾಖ್ಯಾನವಾಗಿ ಉದ್ಭವಿಸಿರುವ ಬೇರೆಬೇರೆ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಇದುವರೆಗಿನ ಅಂಥ ಪ್ರತಿಕ್ರಿಯೆ ಮತ್ತು ಸಿದ್ಧಾಂತಗಳು ಜಾಗತೀಕರಣವನ್ನು – ಆರ್ಥಿಕ ಚೌಕಟ್ಟಿನಿಂದಲೂ, ರಾಷ್ಟ್ರೀಯತೆಯ ಪರಿಕಲ್ಪನೆಯ ಮೂಲಕವೂ, ಆಧುನಿಕತೆ ಮತ್ತು ಪರಂಪರೆಯ ವಿಶ್ಲೇಷಣೆಯಿಂದಲೂ, ಸಂಸ್ಕೃತಿಯ ಸ್ವರೂಪವನ್ನು ಅರ್ಥೈಸುವ ಕ್ರಮದ ಮೂಲಕವೂ ನಮ್ಮ ಮುಂದೆ ವಿಶ್ಲೇಷಿಸಿಟ್ಟಿವೆ. ಹೀಗೆ, ನಾನಾ ಕೇಂದ್ರಗಳಿಂದ, ದೃಷ್ಟಿಕೋನಗಳಿಂದ ಜಾಗತೀಕರಣದ ವ್ಯಾಖ್ಯಾನ ಆಗಿರುವುದರಿಂದ ಅದರ ಅರ್ಥ-ವ್ಯಾಪ್ತಿ-ಪ್ರಭಾವಗಳನ್ನು ನಾವಿವತ್ತು ಕೇವಲ ತಾತ್ವಿಕವಾಗಿ ಅಥವಾ ಅಮೂರ್ತವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಬದಲು, ಈ ಪ್ರತಿಕ್ರಿಯೆಗಳನ್ನೂ ಸೈದ್ಧಾಂತಿಕ ನಿಲುವುಗಳನ್ನೂ ನಮ್ಮ ಸಂದರ್ಭಕ್ಕೆ ಅನ್ವಯವಾಡಿಕೊಳ್ಳುವ ಮೂಲಕವೇ ನಾವಿವತ್ತು ಜಾಗತೀಕರಣವು ಹುಟ್ಟುಹಾಕಿರುವ ಪ್ರಕ್ರಿಯೆಗಳ ಸಂಕೀರ್ಣತೆಯನ್ನು ಗ್ರಹಿಸಬೇಕಾಗಿದೆ. ಮತ್ತು, ಆ ಮೂಲಕ ತಾತ್ವಿಕವಾಗಿ ಮತ್ತು ವ್ಯಾವಹಾರಿಕವಾಗಿ ಜಾಗತೀಕರಣವನ್ನು ಅನುಸಂಧಾನ ಮಾಡಿರುವ ಕ್ರಮಗಳನ್ನು ವಿಶ್ಲೇಷಿಸಬೇಕಾಗಿದೆ.

ನನ್ನ ಪ್ರಕಾರ, ಮೇಲೆ ಉಲ್ಲೇಖಿಸಿದ ಎಲ್ಲ ಪೂರ್ವಪಕ್ಷಗಳನ್ನು ಮುಕ್ತವಾಗಿ



ಚರ್ಚಿಸದೆಯೇ ನಾವು ಜಾಗತೀಕರಣದ ಬಗ್ಗೆ ಯಾವ ನಿಲುವನ್ನೂ ತೆಗೆದುಕೊಳ್ಳಲಾಗುವುದಿಲ್ಲ. ಅಂಥ ಚರ್ಚೆಯಿಲ್ಲದ ಸರಳೀಕೃತ ವ್ಯಾಖ್ಯಾನ-ನಿಲುವುಗಳಿಂದ ಯಾರಿಗೂ ಪ್ರಯೋಜನವಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜಾಗತೀಕರಣವನ್ನು ಸುಲಭವಾಗಿ 'ಬೇಕು-ಬೇಡ', 'ಒಳ್ಳೆಯದನ್ನು ಒಪ್ಪೋಣ-ಕೆಟ್ಟದ್ದನ್ನು ತಿರಸ್ಕರಿಸೋಣ' ಎಂಬ ಸರಳ ಆಯ್ಕೆಗಳ ಮೂಲಕ ಅನುಸಂಧಾನ ಮಾಡಲಾಗುವುದಿಲ್ಲ. ಅಂದರೆ, ವೈಯಕ್ತಿಕವಾಗಿಯೇ ಆಗಲಿ ಸಾಮಾಜಿಕವಾಗಿಯೇ ಆಗಲಿ ಜಾಗತೀಕರಣಕ್ಕೆ 'ಒಪ್ಪಿಗೆಯ-ತಿರಸ್ಕಾರದ' ಪ್ರತಿಕ್ರಿಯೆ ಅಸಾಧ್ಯ. ಜಾಗತೀಕರಣವನ್ನು ಹಾಗೆ ಕೇವಲ ಒಪ್ಪಿಗೆ-ತಿರಸ್ಕಾರದ ನೆಲೆಯಿಂದ ನೋಡುವ ವ್ಯಕ್ತಿಯಾ ಸಮುದಾಯಗಳು ಇವತ್ತು ನಮ್ಮ ಸಂದರ್ಭದ ಸಂಕೀರ್ಣತೆಯಿಂದಾಗಿ ಒದಗಿ ಬರುವ ಹಲವಾರು ವಿಪರ್ಯಾಸ-ತೊಡಕು-ದ್ವಂದ್ವಗಳಲ್ಲಿ ಸಿಲುಕಲೇಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ನಾನು ಇಲ್ಲಿ ಸೂಚಿಸುತ್ತಿದ್ದೇನೆ. ಇಂಥ ವಿಪರ್ಯಾಸ-ತೊಡಕು-ದ್ವಂದ್ವಗಳು ಯಾರನ್ನೂ ಹಂಗಿಸುವ, ಅವಮಾನಿಸುವ ವಿಷಯಗಳಲ್ಲವೆಂಬುದನ್ನು ಇತಿಹಾಸದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ತೊಡಗುವ ಎಲ್ಲರೂ ಅರ್ಥಮಾಡಿಕೊಳ್ಳಬಲ್ಲರು; ಸುಲಭವಾಗಿ ವ್ಯಕ್ತಿ ಮತ್ತು ಸಮುದಾಯಗಳನ್ನು ಅನುಮಾನ ಮತ್ತು ಸಿನಿಕತನದಿಂದ ನೋಡುವ ಹಾಗೂ ವಿಷಯವನ್ನು ಸರಳೀಕರಿಸುವ ಜನರಿಗೆ ಮಾತ್ರ ಈ ಸಂಕೀರ್ಣತೆ ಅರ್ಥವಾಗುವುದಿಲ್ಲ. ಅಂಥವರಿಗೆ ಅದು ಅರ್ಥವಾಗಬೇಕೆಂಬ ಬಯಕೆಯೂ ಇರುವುದಿಲ್ಲವೆಂಬುದು ಬೇರೆ ಮಾತು.

ಈ ಕಾರಣದಿಂದಲೇ ನನ್ನ ಈ ಮಂಡನೆಯಲ್ಲಿ – ನಾನು ಚರ್ಚಿಸುವ ಪ್ರತಿಕ್ರಿಯೆಗಳ ಸೈದ್ಧಾಂತಿಕ ನೆಲೆಗಳೊಡನೆ ನನ್ನ ನಿಲುವುಗಳು ಬೆಸೆದುಕೊಂಡಿರುತ್ತವೆ; ಪ್ರತಿಕ್ರಿಯೆಗಳನ್ನು ಗಮನಿಸುತ್ತ, ಆ ಮೂಲಕ ಸೈದ್ಧಾಂತಿಕ ತಳಹದಿಯನ್ನು ಅರ್ಥಮಾಡಿಕೊಳ್ಳುವ ಮೂಲಕವೇ ನಾನಿಲ್ಲಿ ನನ್ನ ನಿಲುವುಗಳನ್ನು ಮುಂದಿಡುತ್ತ ಹೋಗುತ್ತೇನೆ. ಹೀಗೆ ಮಾಡುವುದರಿಂದ ಮಾತ್ರ ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಈ ಎಲ್ಲ ವಿಷಯಗಳಿಗೆ ನಿಜವಾಗಿಯೂ ನಿಷ್ಠುರನಾಗಿ ಸ್ಪಂದಿಸಲು ಸಾಧ್ಯ ಎಂಬುದು ನನ್ನ ನಂಬಿಕೆ.

ನನ್ನ ಈ ಮಂಡನೆಯನ್ನು ಐದು ಭಾಗಗಳಲ್ಲಿ ನಿಮ್ಮ ಮುಂದಿಡಬಯಸುತ್ತೇನೆ. ಪ್ರತಿ ಭಾಗದಲ್ಲೂ ಒಂದೊಂದು ವಿಷಯ ಕೇಂದ್ರವಾಗಿದ್ದರೂ ಈ ಎಲ್ಲ ಭಾಗಗಳ ನಡುವೆ ಪರಸ್ಪರ ಸಂಬಂಧ ಸ್ಪಷ್ಟವಾಗಿಯೇ ಇರುತ್ತದೆಯೆಂಬುದನ್ನು ಕೂಡಾ ಮೊದಲಿಗೇ ಸೂಚಿಸಬಯಸುತ್ತೇನೆ.

## ೧
## ರಾಷ್ಟ್ರೀಯತೆ - ರಾಷ್ಟ್ರಪ್ರಭುತ್ವ- ಜನಾಂದೋಲನಗಳು ಮತ್ತು ಜಾಗತೀಕರಣ

ರಾಷ್ಟ್ರೀಯತೆ ಮತ್ತು ರಾಷ್ಟ್ರಪ್ರಭುತ್ವದ ವಿರುದ್ಧ ಈಗಾಗಲೇ ಹಲವಾರು ರೀತಿಯ ತಾತ್ವಿಕ ವಿರೋಧಗಳು ರೂಪಿತವಾಗಿರುವುದು ಎಲ್ಲರಿಗೂ ತಿಳಿದ ಸಂಗತಿಯೇ. ಪಶ್ಚಿಮದಲ್ಲಿ ಬಕುನಿನ್, ಪ್ರೌಢ್ವನ್, ಮಾರ್ಕ್ಸ್ ಮತ್ತು ಭಾರತದಲ್ಲಿ ಟಾಗೋರ್, ಗಾಂಧಿ – ಈ ರೀತಿಯ ವಿರೋಧವನ್ನು ತೋರಿದವರಲ್ಲಿ ಪ್ರಮುಖರು. ಇನ್ನು, ಇವತ್ತಿನ ಅನೇಕ ಚಿಂತಕರು ಕೂಡಾ ಪ್ರಭುತ್ವದ ದಮನಕಾರಿ ಅಂಶವನ್ನು ಎತ್ತಿ ತೋರಿಸತೊಡಗಿದ್ದಾರೆ. ಕೆಲವು ಚಿಂತಕರಂತೂ ಆಧುನಿಕತೆಯು ರಾಷ್ಟ್ರಪ್ರಜ್ಞೆಯನ್ನೂ ರಾಷ್ಟ್ರಪ್ರಭುತ್ವವನ್ನೂ ಪವಿತ್ರವಾದೊಂದು ಚೌಕಟ್ಟಿನಲ್ಲಿ ನಮ್ಮ ಮುಂದೆ ಇಟ್ಟು ನಾವದನ್ನು ಒಪ್ಪಿಕೊಳ್ಳಲೇಬೇಕಾದಂಥ ಅನಿವಾರ್ಯತೆಯನ್ನು ಸೃಷ್ಟಿಸಿತೆಂದೂ ವಾದಿಸುತ್ತಾರೆ. ಇವರುಗಳ ಪ್ರಕಾರ ಜನಸಮುದಾಯಗಳಿಗೆ ರಾಷ್ಟ್ರಪ್ರಭುತ್ವವನ್ನು ನೈತಿಕ ದೃಷ್ಟಿಯಿಂದ ನೋಡುವ ತಿಳುವಳಿಕೆ ಕೊಟ್ಟಿದ್ದು ಆಧುನಿಕತೆಯೇ. ಇದು ರಾಷ್ಟ್ರಪ್ರಭುತ್ವವನ್ನು ಗ್ರಹಿಸುವ ಒಂದು ಹೊಸ ತಾತ್ವಿಕ ನೆಲೆಯಾಗಿದ್ದು ಇದೇ ಹೇಗೆ ತೊಡಕುಗಳನ್ನೂ ವಿಪರ್ಯಾಸಗಳನ್ನೂ ಉಂಟುಮಾಡುತ್ತದೆಯೆಂಬುದನ್ನು ಅನಂತರ ಚರ್ಚಿಸುತ್ತೇನೆ.

ಜಾಗತೀಕರಣವನ್ನು ವ್ಯಾಖ್ಯಾನಿಸುವವರು, ಸಾಂಪ್ರದಾಯಕವಾಗಿ ನಾವು 'ಆಧುನಿಕತೆ' ಎಂದು ಕರೆಯುವ ಘಟ್ಟವನ್ನು ಜಾಗತೀಕರಣದ ಪ್ರಕ್ರಿಯೆಯಿಂದ ಬೇರ್ಪಡಿಸಿ ಗುರುತಿಸುತ್ತಾರೆ; ಇವರ ಪ್ರಕಾರ ಆಧುನಿಕತೆ ಮತ್ತು ಜಾಗತೀಕರಣಗಳೆರಡೂ ವಿಭಿನ್ನ ಪ್ರಕ್ರಿಯೆಗಳು. (ಇದರ ವಿವರವಾದ ಚರ್ಚೆಯನ್ನು ಅರ್ಜುನ ಅಪ್ಪಾದುರೈ ಅವರ 'ಮಾಡರ್ನಿಟಿ ಎಟ್ ಲಾರ್ಜ್' ಮತ್ತು ಮ್ಯಾಲ್ಕಂ ವಾಟರ್ಸ್ ಅವರ 'ಗ್ಲೋಬಲೈಸೇಷನ್' ಪಠ್ಯಗಳಲ್ಲಿ ನೋಡಬಹುದು). ಈ ರೀತಿಯ ಹೊಸ ವ್ಯಾಖ್ಯಾನದಲ್ಲಿ ಜಾಗತೀಕರಣವು ಪರ್ಯಾಯ ರಾಜಕೀಯ ಪ್ರಜ್ಞೆಯನ್ನು ಹುಟ್ಟಿಸುವ ಶಕ್ತಿಯಾಗಿಯೂ ಮತ್ತು ಸಮಾನತೆ, ನ್ಯಾಯ, ರಾಜಕೀಯ ಸ್ವಾಯತ್ತತೆಯ ಹೋರಾಟಗಳಲ್ಲಿ ತೊಡಗಿರುವ ಸಮುದಾಯಗಳ ಪರವಾಗಿರುವ ಹೊಸ ವಿದ್ಯಮಾನವಾಗಿಯೂ ಗೋಚರವಾಗುತ್ತದೆ. ಒಟ್ಟಿನಲ್ಲಿ ಜಾಗತೀಕರಣವು ರಾಷ್ಟ್ರ ಪ್ರಭುತ್ವದ ಗೆರೆ-ಗಡಿಗಳು ಮಾಯವಾಗುವ ಹಂತವನ್ನು ಸೃಷ್ಟಿಸಿದೆ – ಎಂಬುದೇ ಈ ವಾದದ ತಿರುಳು. ಅಂದರೆ, ಆಕ್ರಮಣಕಾರಿಯೂ ದಮನಕಾರಿಯೂ ಆದ ರಾಷ್ಟ್ರಪ್ರಭುತ್ವದ ರೇಖೆಯನ್ನು ದಾಟುವ ದಾರಿ ಮತ್ತು ಉಪಾಯಗಳನ್ನು ಜಾಗತೀಕರಣವು ಸೂಚಿಸುತ್ತದೆ ಎಂಬ ನಂಬಿಕೆ ಈ ವಾದದ ಹಿಂದೆ ಇದೆ.



ಆದ್ದರಿಂದಲೇ ಸ್ಥಳೀಯವಾಗಿ ನಡೆಯುವ ನ್ಯಾಯದ, ಸಮಾನತೆಯ ಮತ್ತು ರಾಜಕೀಯ ಸ್ವಾಯತ್ತತೆಯ ಪರವಾದ ಹೋರಾಟಗಳು ಜಾಗತಿಕ-ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮನ್ನು ಪ್ರಕಟಗೊಳಿಸಿಕೊಳ್ಳಲು ಜಾಗತೀಕರಣವನ್ನು ಬಳಸಿಕೊಳ್ಳುತ್ತವೆ – ಎಂದು ಈ ವಾದಗಳು ಹೇಳುತ್ತ, ಇದರ ಹಿನ್ನೆಲೆಯಲ್ಲಿರುವ ಹೊಸ ರಾಜಕೀಯ ಅರ್ಥವನ್ನು ನಮ್ಮ ಮುಂದೆ ತೆರೆದಿಡುತ್ತವೆ. ಅರ್ಥಾತ್, ಪ್ಯಾಲೆಸ್ಟೈನ್ -ಕಾಶ್ಮೀರ-ಅಸ್ಸಾಮ್-ಪೂರ್ವ ತೈಮೂರ್‌ಗಳ ರಾಜಕೀಯ ಸ್ವಾಯತ್ತತೆಯ ಹೋರಾಟಗಳೂ, ದಲಿತ-ಆದಿವಾಸಿಗಳ ಯಾ ಪರಿಸರವಾದಿಗಳ ಹೋರಾಟಗಳೂ ಜಾಗತೀಕರಣದ ಬಲದಿಂದ ಅಂತರರಾಷ್ಟ್ರೀಯ ಗಮನವನ್ನು ಸೆಳೆಯಲು ಸಾಧ್ಯ ಎಂಬ ವಾದ ಇಲ್ಲಿದೆ. ಇದು ಜಾಗತೀಕರಣದ ವ್ಯಾಖ್ಯಾನ ಮಾತ್ರವೇ ಆಗಿರದೆ ರಾಷ್ಟ್ರಪ್ರಭುತ್ವದ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆಯನ್ನೇ ಪ್ರಶ್ನಿಸುವ ತಿಳುವಳಿಕೆಯೂ ಆಗಿದೆಯೆಂಬ ಸಂಗತಿಯನ್ನು ನಾವಿಲ್ಲಿ ಗಮನಿಸಬೇಕು. ಜತೆಗೆ, ಪ್ರಭುತ್ವವಿರೋಧಿಗಳು ತಾತ್ವಿಕವಾಗಿ ಚರ್ಚೆಮಾಡಿದ ವಿಷಯವು ಇಂದು ವರ್ತಮಾನದ ರಾಜಕೀಯ ಸ್ಥಿತಿಯ ವಿವರಣೆಯೂ ಆಗುವುದನ್ನು ಈ ವಾದದಲ್ಲಿ ನಾವು ಕಾಣಬಹುದು.

ಇನ್ನೊಂದು ವಾದವನ್ನೂ ನಾವಿಲ್ಲಿ ಗಮನಿಸಬೇಕು. ಆ ವಾದದ ಪ್ರಕಾರ – ಎಲ್ಲ ಕಾಲಗಳಲ್ಲೂ, ಆಳುತ್ತಿರುವ ಪ್ರಭುತ್ವವು ಕೆಲವರಿಗೆ ಮಾತ್ರ ಆಧುನಿಕತೆಯ ಲಾಭಗಳು ಲಭ್ಯವಾಗುವಂತೆ ಮಾಡುತ್ತಿತ್ತು. ಆದ್ದರಿಂದ ಆಧುನಿಕತೆಯು ಪ್ರಭುತ್ವಕ್ಕೆ ಬೇಕಿರುವವರಿಗೆ ಮಾತ್ರ ದಕ್ಕುತ್ತಿತ್ತು; ಅದರ ಪ್ರಯೋಜನ ಕೆಲವರಿಗೆ ಮಾತ್ರ ಮೀಸಲಾಗಿತ್ತು. ಆದರೆ ಇಂದು ಜಾಗತೀಕರಣವು 'ನವ-ಆಧುನಿಕತೆ'ಯೊಂದನ್ನು ಸೃಷ್ಟಿಸಿ ಆ ಮೂಲಕ ಎಲ್ಲ ಸಮುದಾಯಗಳಿಗೂ ಆಧುನಿಕತೆಯ ಎಲ್ಲ ಅಂಶಗಳನ್ನು ಕೊಟ್ಟುಬಿಡುತ್ತದೆ. ಹಾಗಾಗಿ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಆಧುನಿಕತೆಯ ಅಂಶಗಳನ್ನು ಇಂದು ಎಲ್ಲರೂ ಪಡೆದುಕೊಳ್ಳಬಹುದು. ಅಂದರೆ, ಪ್ರಭುತ್ವ ಮತ್ತು ಆಧುನಿಕತೆಗಳ ನಡುವೆ ಹಿಂದಿದ್ದ ಸಂಬಂಧವನ್ನು ಜಾಗತೀಕರಣವು ಕಡಿದು ಹಾಕಿದೆ – ಎಂದು ಈ ವಾದದ ಸೂಚನೆ.

ಇವತ್ತು ವಿದ್ಯುನ್ಮಾನ ಮಾಧ್ಯಮಗಳು ಇಂಥ ಒಂದು ಹೊಸ ಸಾಧ್ಯತೆಯನ್ನು ಸತ್ಯಗೊಳಿಸಿರುವ ಸಂಗತಿಯನ್ನು ನಾವು ಮರೆಯಬಾರದು – ಎಂದು ಈ ವಾದ ಹೇಳುತ್ತದೆ. ಉದಾಹರಣೆಗೆ, ಎಲ್ಲೋ ಮೂಲೆಯಲ್ಲಿರುವ ಹೋರಾಟಗಾರರು – ಅವರು ಕಾಡಿನಲ್ಲಿರುವ ತಮಿಳರಾಗಿರಬಹುದು, ಆದಿವಾಸಿಗಳಿರಬಹುದು, ದೂರ ಈಶಾನ್ಯದಲ್ಲಿರುವ ಜನರಿರಬಹುದು ಅಥವಾ ಪರಿಸರವಾದಿಗಳಿರಬಹುದು –

ಅವರೆಲ್ಲರೂ ಈ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ತಮ್ಮ ಹೋರಾಟಗಳನ್ನು ಇಡಿಯ ಜಗತ್ತಿನ ಮುಂದೆ ಪ್ರಸ್ತುತಪಡಿಸಬಹುದಾದ ಅನುಕೂಲವನ್ನು ಜಾಗತೀಕರಣವು ಒದಗಿಸಿದೆ ಎಂಬುದು ಈ ವಾದದ ಸೂಚನೆ.

ಇಷ್ಟೇ ಅಲ್ಲದೆ, ಈ ಬೆಳವಣಿಗೆಗಳ ಕಾರಣದಿಂದಲೇ ಇವತ್ತು ಬೇರೆಬೇರೆ ಸಮುದಾಯಗಳಿಗೆ ತಮ್ಮ ತಮ್ಮ ಕಲ್ಪನೆಯ ರಾಷ್ಟ್ರಗಳನ್ನು ಕಟ್ಟಿಕೊಳ್ಳುವ ಸಾಧ್ಯತೆಯೂ ಉದ್ಭವಗೊಂಡಿದೆ; ಒಂದು ರಾಷ್ಟ್ರದ ರೇಖೆಯನ್ನು ಮೀರಿ ನಾನಾ ರಾಷ್ಟ್ರಗಳ ಕಲ್ಪನೆಗಳು ಮೇಲೆದ್ದು ಬರುವುದು ಸಾಧ್ಯವಾಗಿದೆ. ಜತೆಗೆ, ನಾನಾ ಸಮುದಾಯಗಳು ಭೌತಿಕವಾಗಿ ದೂರದಲ್ಲಿದ್ದೂ 'ಸಾಮೂಹಿಕ ಕಲ್ಪನೆ'ಯೊಂದನ್ನು ಕಟ್ಟಿಕೊಂಡು 'ಸಾಮೂಹಿಕ ಕ್ರಿಯೆ'ಯಲ್ಲಿ ತೊಡಗುವ ಅವಕಾಶವನ್ನು ಜಾಗತೀಕರಣವು ಕಲ್ಪಿಸುತ್ತದೆ. ಒಟ್ಟಿನಲ್ಲಿ ಜನಾಂದೋಲನಗಳು ಸ್ಥಳೀಯತೆಯಿಂದ ವಿಶ್ವವ್ಯಾಪಿ ಆಗುವ ಸದವಕಾಶ ಇದು; ಸಂಪರ್ಕ, ಸಂವಹನದಿಂದ ಇದು ಸಾಧ್ಯ — ಎಂಬ ಈ ವಾದಸರಣಿಯ ಕಡೆಗೆ ನಾನಿಲ್ಲಿ ನಿಮ್ಮ ಗಮನ ಸೆಳೆಯುತ್ತಿದ್ದೇನೆ.

ಈ ವಾದದಲ್ಲೇ ಅಡಕವಾಗಿರುವ ಮತ್ತೊಂದು ಅಂಶವನ್ನು ಕೂಡಾ ನಾವು ಗಮನಿಸಬೇಕಾದ ಅಗತ್ಯ ಇದೆ — ಜಾಗತೀಕರಣದಿಂದ ರಾಷ್ಟ್ರಪ್ರಭುತ್ವಗಳು ಹೆಚ್ಚು ಜವಾಬ್ದಾರಿಯಿಂದ ಇರಲೇಬೇಕಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಆಂದೋಲನಗಳೂ ಪ್ರಚುರವಾಗತೊಡಗಿದಾಗ ರಾಷ್ಟ್ರಪ್ರಭುತ್ವ ತನ್ನ ಇಚ್ಛೆ ಬಂದಂತೆ ನಡೆದುಕೊಳ್ಳಲು ಅದಕ್ಕೆ ಸಾಧ್ಯವಾಗದು; ಹೊರಗಿನ ಒತ್ತಡಗಳಿಂದ ಜನರನ್ನು ಅದು ಹತ್ತಿಕ್ಕಲಾರದು. ಅರ್ಥಾತ್, ಈ ವಾದದ ಪ್ರಕಾರ, ಜಾಗತೀಕರಣವು ರಾಷ್ಟ್ರಪ್ರಭುತ್ವದ ಬರ್ಬರತೆಗೆ ಕಡಿವಾಣ ಹಾಕುತ್ತದೆ.

ಇವೆಲ್ಲವೂ ಈ ವಾದದ ಪೂರ್ವಪಕ್ಷಗಳಾದವು. ಈಗ, ಈ ವ್ಯಾಖ್ಯಾನ ಮಾಲೆಯು ಅನೇಕ ತೊಡಕುಗಳನ್ನೂ ವಿಪರ್ಯಾಸಗಳನ್ನೂ ದ್ವಂದ್ವಗಳನ್ನೂ ಸೃಷ್ಟಿಸುವುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಎಲ್ಲ ವಿಪರ್ಯಾಸ-ತೊಡಕು-ದ್ವಂದ್ವಗಳು ಅನೇಕ ಮಜಲುಗಳನ್ನು ಹೊಂದಿರುವ ಸಂಗತಿಯನ್ನೂ ಮರೆಯುವಂತಿಲ್ಲ.

ಮೊದಲನೆಯದಾಗಿ, ಜನಾಂದೋಲನಗಳು ಜಾಗತಿಕವಾಗುವ ಕ್ರಮವು ಕೇವಲ ನ್ಯಾಯ ಮತ್ತು ಸಮಾನತೆಗೆ ಸಂಬಂಧಪಟ್ಟಿರುವುದಿಲ್ಲ. ಮತ್ತು, ಅದು ರಾಜಕೀಯ ಸ್ವಾಯತ್ತತೆಗೆ ಕೂಡ ಸೀಮಿತವಾದದ್ದಾಗಿರುವುದಿಲ್ಲ. ಬದಲು, ಅದು ಬೇರೆ ಇನ್ನೊಂದು ಬೆಳವಣಿಗೆಯನ್ನೂ ಹುಟ್ಟುಹಾಕುತ್ತದೆ; ಈ ಬೆಳವಣಿಗೆಯ ಕಾರಣ ದಿಂದಲೇ ಸ್ಥಳೀಯವಾದ ಧಾರ್ಮಿಕ ವಿಷಯವೊಂದು ರಾಷ್ಟ್ರೀಯವೂ ಜಾಗತಿಕವೂ



ಆಗಿಬಿಡುತ್ತದೆ. ಉದಾಹರಣೆಗೆ, ಅದುವರೆಗೆ ಯಾರ ಗಮನಕ್ಕೂ ಬಾರದಿದ್ದ ಅಯೋಧ್ಯೆಯ ರಾಮಮಂದಿರ, ಒಮ್ಮೆಲೇ ಇಂಥ ಪ್ರಕ್ರಿಯೆಯ ಮೂಲಕ ಇಡೀ ದೇಶದ ವಿಷಯವಾಗಿ, ಸಾಂಸ್ಕೃತಿಕ-ರಾಜಕೀಯ ಆಂದೋಲನವನ್ನೇ ಸೃಷ್ಟಿಸಿಬಿಡುತ್ತದೆ. ಅಷ್ಟೇ ಅಲ್ಲ, ವಿಶ್ವ ಹಿಂದೂ ಪರಿಷತ್‌ನ್ನೂ ಹುಟ್ಟಿಸಿ ಜಾಗತಿಕ ಮಟ್ಟದಲ್ಲಿ ಹಿಂದೂ ರಾಷ್ಟ್ರದ ಒಂದು ಕಲ್ಪನೆಯನ್ನೇ ರೂಪಿಸಿಬಿಡುತ್ತದೆ. ಈ ಮೂಲಕ, ಎಲ್ಲೋ ಮೂಲೆಯಲ್ಲಿ ತನ್ನ ಧಾರ್ಮಿಕ ವಿಧಿಗಳನ್ನು ಆಚರಿಸಿಕೊಳ್ಳುತ್ತ ಇದ್ದ ಒಂದು ಪ್ರದೇಶವು ಹಾಗಿರುವ ಹಂತದಿಂದ ಬೆಳೆದು ಜಗತ್ತಿನ ಎಲ್ಲರೂ ಆಕ್ರಮಣ ಮಾಡಬಹುದಾದ ಸಂಕೇತವಾಗಿ ಬೆಳೆದುಬಿಡುತ್ತದೆ. ಈ ಸಂಕೇತ ಕೂಡಾ ಆಮೇಲೆ ಕೇವಲ ಸಾಂಸ್ಕೃತಿಕ ಸಂಕೇತವಾಗಿ ಉಳಿಯುವುದಿಲ್ಲ. ಬದಲಾಗಿ ಸಂಸ್ಕೃತಿ ಮತ್ತು ಧರ್ಮದ ವ್ಯಾಪ್ತಿಯನ್ನು ರಾಜಕೀಯಕ್ಕೆ ವಿಸ್ತರಿಸಿ ಆ ಮೂಲಕ ರಾಷ್ಟ್ರೀಯತೆಯ ಆಚರಣೆಗೂ ರಾಷ್ಟ್ರ ಪ್ರಭುತ್ವದ ಸ್ಥಾಪನೆಗೂ ಪೂರಕವಾದ ವಿಷಯವಾಗಿಬಿಡುತ್ತದೆ.

'ಹಿಂದೂ ರಾಷ್ಟ್ರವಾದ'ವೆಂಬುದು, ಹೀಗೆ, ವಿದ್ಯುನ್ಮಾನ ಮಾಧ್ಯಮಗಳೂ ಸೇರಿದಂತೆ ಎಲ್ಲ ಮಾಧ್ಯಮಗಳನ್ನು ಬಳಸಿಕೊಂಡು ಬೆಳೆದು ಅಖಂಡ ಭಾರತದ, ಮಾತ್ರವಲ್ಲ ಅಂತರರಾಷ್ಟ್ರೀಯ ರಾಜಕೀಯದ ವಸ್ತುವೂ ಆಗುವ ವಿಧಾನ ಇದು. ಇದರೊಂದಿಗೆ ಹೆಣೆದುಕೊಂಡಿರುವ ಮತ್ತೊಂದು ವಿಪರ್ಯಾಸವೆಂದರೆ — ಆಂತರಿಕವಾಗಿ ಈ ಹಿಂದೂ ರಾಷ್ಟ್ರದ ಪರಿಕಲ್ಪನೆಯೂ ಮತ್ತು ಈ ಹಿಂದುತ್ವದ ಮಾತನಾಡುವ 'ಸ್ವದೇಶಿಪ್ರಿಯ'ರೂ, ಒಂದು ಕಡೆಗೆ ಪರಂಪರೆ ಸಂಪ್ರದಾಯಗಳ ಬಗ್ಗೆ ಮಾತನಾಡುತ್ತಾರೆ; ಇನ್ನೊಂದೆಡೆ, ಪಶ್ಚಿಮದತ್ತ ಮುಖಮಾಡಿ ಆಧುನಿಕತೆಯ ಸೌಲಭ್ಯಗಳನ್ನು ಎಲ್ಲ ರೀತಿಯಲ್ಲೂ ಬಳಸಿಕೊಳ್ಳುತ್ತಿರುತ್ತಾರೆ. ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಆರಂಭಿಸಿ ಜೈವಿಕ ತಂತ್ರಜ್ಞಾನ, ಜೆನೆಟಿಕ್ ಎಂಜಿನಿಯರಿಂಗ್ ಮತ್ತು ಅಂತರ್ಜಾಲ ಮೊದಲಾದವೆಲ್ಲವನ್ನೂ ಪ್ರೋತ್ಸಾಹಿಸುತ್ತಿರುತ್ತಾರೆ. ವೇದ-ಉಪನಿಷತ್ತುಗಳನ್ನು ವ್ಯಾಖ್ಯಾನ ಮಾಡುವ ಮಠಗಳೇ ಇಲ್ಲಿ ಅಣುಭೌತಶಾಸ್ತ್ರವನ್ನೂ ಕೂಡ ನಿಸ್ಸಂಕೋಚವಾಗಿ, ಮತ್ತು ಮುಜುಗರವಿಲ್ಲದೆ ಎತ್ತಿಹಿಡಿಯುತ್ತಿರುತ್ತವೆ. ಜಾಗತೀಕರಣದ ಬಳಕೆಯನ್ನು, ಈ ರೀತಿ, ಅಸಂಬದ್ಧವಾಗಿ ಕೂಡ ಮಾಡಬಹುದಾದ ವಿಪರ್ಯಾಸ ನಮ್ಮ ಮುಂದಿದೆ. ಈ ಅರ್ಥದಲ್ಲಿ ಜಾಗತೀಕರಣವು ವಿಭಿನ್ನ ನೆಲೆಗಳನ್ನೂ, ಸಂಬಂಧವಿಲ್ಲದ ಕಾಲಘಟ್ಟಗಳನ್ನೂ ಮತ್ತು ಮೇಲ್ನೋಟಕ್ಕೆ ಪರಸ್ಪರ ಏಕಸೂತ್ರತೆಯಿಲ್ಲದ ಇಂಥ ಹಲವಾರು ವಿಷಯಗಳನ್ನು ಕೂಡಾ ಒಂದೇ ಕಡೆಯಲ್ಲಿ ಬೆರೆಸುತ್ತಿರುತ್ತದೆ. ಹೀಗೆ, ಏಕಕಾಲದಲ್ಲಿ ಸಾಂಸ್ಕೃತಿಕವಾಗಿ ಸ್ವದೇಶಿಯೂ ಮತ್ತು ಆರ್ಥಿಕ-ರಾಜಕೀಯವಾಗಿ ವಿದೇಶಿಯೂ ಆಗುವ ವೈಚಿತ್ರ್ಯಗಳನ್ನು ಜಾಗತೀಕರಣವೇ

ಉತ್ಪಾದಿಸುವುದನ್ನು ನಾವು ಮರೆಯುವಂತಿಲ್ಲ. ಜಾಗತೀಕರಣದ ಈ ದ್ವಂದ್ವ ಸ್ವರೂಪವೇ ಇತಿಹಾಸದ ದೊಡ್ಡ ತೊಡಕಾಗಿ ಪರಿಣಮಿಸಿರುವ ಒಂದು ಕಾಲಘಟ್ಟದಲ್ಲಿ ನಾವಿವತ್ತು ನಿಂತಿದ್ದೇವೆ.

ಈ ಹಂತದಲ್ಲೇ ಮತ್ತೊಂದು ವಿಪರ್ಯಾಸವನ್ನೂ ಗಮನಿಸುವ ಅಗತ್ಯವಿದೆ. ಒಂದು ಅರ್ಥದಲ್ಲಿ ಜಾಗತೀಕರಣವು ರಾಷ್ಟ್ರಪ್ರಭುತ್ವದ ಬಲವನ್ನೂ ವ್ಯಾಪ್ತಿಯನ್ನೂ ಮೊಟಕುಗೊಳಿಸಿದರೆ ಇನ್ನೊಂದು ನೆಲೆಯಲ್ಲಿ ಅವನ್ನೇ ಎತ್ತಿಹಿಡಿಯುತ್ತಲೂ ಇರುತ್ತದೆ. ಈ ಹಿನ್ನೆಲೆಯಲ್ಲಿ, ನಾವು ರಾಷ್ಟ್ರಪ್ರಭುತ್ವದ ಬದಲಿಗೆ 'ಜಾಗತಿಕ ಸರ್ಕಾರ', 'ಜಾಗತಿಕ ಆಳ್ವಿಕೆ'ಯ ಪರಿಕಲ್ಪನೆಗಳು ಮೇಲೆದ್ದು ಬರುವ ಪ್ರಕ್ರಿಯೆಯನ್ನು ಗಮನಿಸಬಹುದು; ರಾಷ್ಟ್ರಪ್ರಭುತ್ವವನ್ನೂ ಗೌಣಗೊಳಿಸಿ ಕೇಂದ್ರೀಕೃತ ಆಳ್ವಿಕೆಯು ಅಸ್ತಿತ್ವಕ್ಕೆ ಬರುವ ಕ್ರಮವನ್ನೂ ಕಾಣಬಹುದು. ಈ ದ್ವಂದ್ವದ ಕಾರಣದಿಂದಾಗಿ, ನಮ್ಮಲ್ಲಿಯ ಜನಾಂದೋಲನಗಳು ದೇಶದೊಳಗೆ 'ಹಿಂದುತ್ವ'ವನ್ನೂ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಬಲ ರಾಷ್ಟ್ರದ ಒತ್ತಡಗಳನ್ನೂ ಎದುರಿಸಬೇಕಾಗುವ ತೊಡಕಿಗೆ ಸಿಕ್ಕಿಹಾಕಿಕೊಳ್ಳುತ್ತವೆ. ಈ ವಿಪರ್ಯಾಸವನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಅಗತ್ಯ.

ಮೇಲೆ ಹೇಳಿದ ದ್ವಂದ್ವಗಳ ಕಾರಣದಿಂದಾಗಿಯೇ, ರಾಷ್ಟ್ರಪ್ರಭುತ್ವವನ್ನು ಎದುರಿಸುವ ಮಾರ್ಗೋಪಾಯಗಳು ಜಾಗತೀಕರಣದ ಮೂಲಕ ದೊರೆಯ ಬಹುದಾದರೂ ಅದರಿಂದ ರಾಷ್ಟ್ರಪ್ರಭುತ್ವದ ವಿನಾಶವೇನೂ ಆಗದು. ಯಾಕೆಂದರೆ, ಜಾಗತೀಕರಣದ ಮೂಲಕ ರಾಷ್ಟ್ರಪ್ರಭುತ್ವವನ್ನು ಪ್ರಶ್ನೆ ಮಾಡುವ ಅವಕಾಶ ವಿದೆಯಾದರೂ ಆ ಮೂಲಕವೇ ಅದನ್ನು ಸಂಪೂರ್ಣವಾಗಿ ಸೋಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ರಾಷ್ಟ್ರಪ್ರಭುತ್ವವು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಬಗ್ಗೆ ಮಾತನಾಡುತ್ತ, ಪ್ರಜಾಪ್ರಭುತ್ವದ ಅಂಶಗಳನ್ನು ತಾತ್ವಿಕವಾಗಿ ಎತ್ತಿಹಿಡಿಯುತ್ತದೆ; ಆದರೆ, ದೇಶದ ಮಟ್ಟದಲ್ಲಿ ಜನಪರ ಆಂದೋಲನಗಳನ್ನು ಭೀಕರವಾಗಿ ಹತ್ತಿಕ್ಕುತ್ತಿರುತ್ತದೆ. ಅರ್ಥಾತ್, ಜಾಗತಿಕ-ಅಂತರರಾಷ್ಟ್ರೀಯ ಚೌಕಟ್ಟಿನಲ್ಲಿ ಸಡಿಲವೂ ಮೆತ್ತಗೂ ಆಗುವ ರಾಷ್ಟ್ರಪ್ರಭುತ್ವವು ದೇಶದ ಒಳಗಿನ ಸಂದರ್ಭದಲ್ಲಿ ದಮನ ಮಾಡುವ ಕೇಂದ್ರವೂ ಆಗಿಬಿಡುತ್ತದೆ. ಎಂ.ಎನ್.ಸಿ ಮತ್ತು ಟಿ.ಎನ್.ಸಿಗಳ ಮುಂದೆ ಕುಬ್ಜವಾಗುವ ಸರ್ಕಾರವು ಜನಗಳ ವಿಷಯದಲ್ಲಿ ರಾಕ್ಷಸಾಕಾರ ಪಡೆಯುವ ಇಂಥ ದುರಂತ ವಿಪರ್ಯಾಸವನ್ನು ನಾವು ಈಗಾಗಲೇ ಕಾಣುತ್ತಬಂದಿದ್ದೇವೆ.

ಇಷ್ಟೇ ಅಲ್ಲದೆ, ಜಾಗತೀಕರಣದ ನಿಜ ಸ್ವರೂಪವು ಇನ್ನೂ ನಮ್ಮ ಮುಂದೆ



ಸಂಪೂರ್ಣವಾಗಿ ಬಿಚ್ಚಿಕೊಂಡಿಲ್ಲ — ಎಂಬ ನನ್ನ ನಂಬಿಕೆಗೆ ನಾನೀಗ ಕೆಲವು ನಿದರ್ಶನಗಳನ್ನು ಕೊಡಬಯಸುತ್ತೇನೆ. ಈ ನಿದರ್ಶನಗಳು ಹಲವಾರು ರೀತಿಯ ವಿಪರ್ಯಾಸ-ತೊಡಕು-ದ್ವಂದ್ವಗಳನ್ನು ಹೇಗೆ ಏಕತ್ರಗೊಳಿಸಿ ಪ್ರಸ್ತುತಪಡಿಸುತ್ತವೆ ಎಂಬುದನ್ನೂ ನಾವೀಗ ನೋಡೋಣ.

ಆಧುನಿಕ ಮಾಧ್ಯಮಗಳನ್ನು ಬಳಸಿಕೊಂಡು ವಿಶ್ವದ ಗಮನವನ್ನು ಸೆಳೆಯುವ ಮೂಲಕ ಜನಾಂದೋಲನಗಳು ರಾಷ್ಟ್ರಪ್ರಭುತ್ವವನ್ನು ಮೀರಲು ಮಾಡುವ ಪ್ರಯತ್ನಗಳು ಈಗಾಗಲೇ ನಮ್ಮೆಲ್ಲರ ಅರಿವಿಗೆ ಸ್ಪಷ್ಟವಾಗಿಯೇ ಬರತೊಡಗಿವೆ. ಆದರೆ ಹೀಗೆ, ಸ್ಥಳೀಯ ಸಂಘರ್ಷಗಳು ಜಾಗತಿಕವಾಗುತ್ತಿದ್ದಂತೆಯೇ, ಇನ್ನೊಂದೆಡೆ ಸರ್ಕಾರವು ಆಂತರಂಗಿಕವಾಗಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳತೊಡಗುತ್ತದೆ. ಉದಾಹರಣೆಗೆ, ಕಾಶ್ಮೀರದಲ್ಲಾಗುತ್ತಿರುವ ಜನಾಂದೋಲನವು ತನ್ನ ಅಸ್ತಿತ್ವವನ್ನೇ ಅಲುಗಾಡಿಸಲು ಶುರುಮಾಡಿದಾಗ ಸರ್ಕಾರವು 'ಭಯೋತ್ಪಾದನೆ' ಎಂಬ ಕೂಗು ಹಾಕಿ ಮಾನವ ಹಕ್ಕುಗಳ ಆಯೋಗಕ್ಕೂ ವಿಶ್ವಸಂಸ್ಥೆಗೂ ಹಾಗೂ ಇಡೀ ಪ್ರಪಂಚಕ್ಕೂ ತನ್ನ ಕಷ್ಟವನ್ನು ಸಾರಿಹೇಳತೊಡಗುತ್ತದೆ. ಅಥವಾ ಗುಜರಾತಿನಲ್ಲಿ ಸರ್ಕಾರವೇ ನರಮೇಧಕ್ಕೆ ತೊಡಗಿದಾಗ, ಮತ್ತು ತಾನೇ ಸ್ಥಾಪಿಸಿದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸತ್ಯವನ್ನು ತನ್ನ ಮುಂದಿಟ್ಟಾಗ ಕೂಡಾ, ಪ್ರಭುತ್ವವು ಯಾವ ಕ್ರಮವನ್ನೂ ಜರುಗಿಸುವುದಿಲ್ಲ. ಹಾಗಾಗಿ ಆಯೋಗದ ಅಧ್ಯಕ್ಷರು ಹಿಂಸಾಚಾರದ ತನಿಖೆಗೆ ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಕೇಳಿಕೊಳ್ಳುವ ಸ್ಥಿತಿ ಉದ್ಭವಿಸುತ್ತದೆ. ಅದೇರೀತಿ, ಜಾತಿಯನ್ನು ಡರ್ಬನ್ ಸಮಾವೇಶದಲ್ಲಿ ಅಧಿಕೃತವಾಗಿ ಪ್ರಸ್ತಾಪಿಸ ಬೇಕೆಂದು ದಲಿತ ಸಮುದಾಯವು ಒತ್ತಾಯಿಸಿದಾಗ ಪ್ರಭುತ್ವವು – ಜಾತಿಯೆಂಬುದು ಆಂತರಿಕ ಸಮಸ್ಯೆಯೆಂದೂ ಆದ್ದರಿಂದ ಅದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸುವ ಅಗತ್ಯವಿಲ್ಲವೆಂದೂ ಪಟ್ಟುಹಿಡಿಯುವ ಉದಾಹರಣೆಯನ್ನೂ ನಾವು ಈಚೆಗೆ ಕಂಡಿದ್ದೇವೆ. ಅಂದರೆ, ಪ್ರಭುತ್ವ ತನಗೆ ಬೇಕಾದ ಹಾಗೆ ಜಾಗತೀಕರಣವನ್ನು ಬಳಸಿಕೊಳ್ಳುತ್ತಿದೆ – ಎಂಬೊಂದು ಸಂಗತಿ ನಮಗೆ ಈ ಎಲ್ಲ ವಿದ್ಯಮಾನಗಳಲ್ಲೂ ಸಾರ್ವತ್ರಿಕವಾಗಿ ಗೋಚರವಾಗುತ್ತದೆ.

ಆದ್ದರಿಂದಲೇ, ಜಾಗತೀಕರಣದ ಇಂಥ ದ್ವಂದ್ವಗಳನ್ನು ನಾವು ಆಂಶಿಕವಾಗಿ ಗ್ರಹಿಸದೆ ಪೂರ್ಣ ಪ್ರಮಾಣದಲ್ಲಿ ಎದುರಿಸಬೇಕಾದ್ದು ಅತ್ಯನಿವಾರ್ಯವಾಗಿದೆ.

## ೨

## ‘ವಾಸ್ತವದ’ ಪ್ರತಿಮೆಗಳೂ ‘ಭ್ರಮೆಯ’ ಸಂಕೇತಗಳೂ: ಜಾಗತೀಕರಣ ಮತ್ತು ಮಾಹಿತಿ ತಂತ್ರಜ್ಞಾನ-ದೃಶ್ಯಮಾಧ್ಯಮಗಳ ಸಂಬಂಧ

ಬಹಳ ಹಿಂದೆ, ಮಾರ್ಷಲ್ ಮೆಕ್‌ಲುಹಾನ್ ‘ಜಗತ್ತೇ ಒಂದು ಹಳ್ಳಿ’ಯಾಗುವ ಪ್ರಕ್ರಿಯೆಯ ಬಗ್ಗೆ ಮಾತನಾಡಿದ್ದ; ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಹೊಸ ಸಾಮುದಾಯಿಕ ಪ್ರಜ್ಞೆಯೊಂದನ್ನು ಎಲ್ಲರಲ್ಲೂ ಕಟ್ಟಿಕೊಡುತ್ತವೆಯೆಂದೂ ವಾದಿಸಿದ್ದ. ಮತ್ತು ಈ ಹೊಸ ಮಾಧ್ಯಮಗಳು ಸಮುದಾಯಗಳನ್ನು ಒಂದುಗೂಡಿಸುತ್ತವೆ ಎಂಬೊಂದು ನಂಬಿಕೆ ಕೂಡಾ ಈ ವಾದದ ಹಿಂದಿತ್ತು. ಇವತ್ತಿನ ಸಂದರ್ಭದಲ್ಲಿ ನಾವು ಈ ನಂಬಿಕೆಯನ್ನು ಮರಳಿ ಪ್ರಶ್ನಿಸುವ ಮತ್ತು ಪರಿಶೀಲಿಸುವ ಅಗತ್ಯ ಉಂಟಾಗಿದೆ.

ಈ ದಿಕ್ಕಿನಲ್ಲಿ, ದೃಶ್ಯ ಮಾಧ್ಯಮಗಳು ತಯಾರುಮಾಡುವ ‘ವಾಸ್ತವ’ವನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಂದು ಅಂಶ ನಮಗೆ ಗ್ರಾಹ್ಯವಾಗುತ್ತದೆ. ಅದೇನೆಂದರೆ – ಈ ಮಾಧ್ಯಮಗಳು ಯಾರದೋ ಒಂದು ಜಗತ್ತನ್ನು, ನಾನಾ ಕಾರಣಗಳಿಗಾಗಿ – ಮುಖ್ಯವಾಗಿ ರಾಜಕೀಯ ಮತ್ತು ಆರ್ಥಿಕ ಕಾರಣಗಳಿಗಾಗಿ – ಪ್ರಸಾರ ಮಾಡುವ ಸಂಸ್ಥೆಗಳಾಗಿವೆ. ಮತ್ತು ಅವು ಅಂಥ ಜಗತ್ತುಗಳನ್ನು ತಮ್ಮ ಸೈದ್ಧಾಂತಿಕ ನೆಲೆಗಳ ಮೂಲಕ ಪ್ರಸಾರಮಾಡಿ ಮುಟ್ಟಿಸುತ್ತಿರುವುದು ಆ ಜಾಗಗಳನ್ನು ಕಂಡರಿಯದ, ಕೇಳರಿಯದ ಜನಗಳಿಗೇ ಆಗಿರುತ್ತದೆ. ಈ ರೀತಿಯಲ್ಲಿ, ‘ವಾಸ್ತವದ ಪ್ರತಿಮೆಗಳನ್ನು’ ಮನಸ್ಸಿಗೆ ಬಂದಂತೆ ಎರಚುವ ಶಕ್ತಿ ಈ ಸಂಸ್ಥೆಗಳಿಗೆ ಇದೆ. ಆದ್ದರಿಂದಲೇ ತನ್ನ ಆರ್ಥಿಕ ಒಳಿತನ್ನೂ ರಾಜಕೀಯ ನೆಲೆಯನ್ನೂ ಸೈದ್ಧಾಂತಿಕ ತಳಹದಿಯನ್ನೂ ಮನಸ್ಸಿನೊಳಗೆ ಅಡಗಿಸಿಟ್ಟುಕೊಂಡಿರುವ ಈ ಮಾಧ್ಯಮಗಳನ್ನಾಗಲೀ ಅವನ್ನು ‘ಬಂಡವಾಳವನ್ನಾಗಿ’ ಬಳಸಿಕೊಳ್ಳುವ ಬಂಡವಾಳಶಾಹಿ ಮಾಲೀಕರ ಸಂಸ್ಥೆಗಳನ್ನಾಗಲೀ ಜನಪರ, ಜನಹಿತಪ್ರಜ್ಞೆಯ ಕೇಂದ್ರಗಳೆಂದು ಭಾವಿಸಲಾಗದು.

ತಾನು ದ್ವೇಷಿಸುವ ಧರ್ಮವನ್ನೂ ಸಮುದಾಯವನ್ನೂ ಅಮಾನವೀಯವಾಗಿ ಕಾಣಿಸಿ, ಅನಾಗರಿಕ ಜಂತುಗಳಂತೆ ಅವರನ್ನು ತೋರಿಸುವ ಭೀಕರ ಶಕ್ತಿ ಈ ಮಾಧ್ಯಮಕ್ಕಿದೆ ಎಂಬುದು ಈಗಾಗಲೇ ನಮ್ಮ ಗಮನಕ್ಕೆ ಬಂದಿರುವ ವಿಷಯ. ಬಂಡವಾಳದ ಶಕ್ತಿಗಳು ಜಾಗತಿಕ ಮಟ್ಟದಲ್ಲಿ ತಮಗಾಗದಿದ್ದವರನ್ನು ‘ಶತ್ರು’ಗಳಂತೆ ಬಿಂಬಿಸುವ ಕಲೆಗಾರಿಕೆಯನ್ನೂ ತಂತ್ರಜ್ಞಾನವನ್ನೂ ಈ ಮಾಧ್ಯಮಗಳ ಮೂಲಕ ಪಡೆದುಕೊಳ್ಳಲು ಸಾಧ್ಯವಾಗಿದೆ ಮತ್ತು ಆಗದವರ ಮೇಲೆ ‘ಮಾಧ್ಯಮ ಯುದ್ಧ’ವನ್ನೇ



ಘೋಷಿಸಿ ನಡೆಸುವ ಛಾತಿಯೂ ಇವರಲ್ಲಿದೆ. ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟಂತೆ ಇಂಥ ವಿದ್ಯಮಾನ ಸಂಭವಿಸಿರುವುದು ನಮಗೆಲ್ಲ ತಿಳಿದದ್ದೇ; ಕೊಲ್ಲಿ ಯುದ್ಧದ ಸಂದರ್ಭದಲ್ಲಿ ಸಿ.ಎನ್.ಎನ್ ಬಿತ್ತರಿಸಿದ ‘ದೃಶ್ಯ’ಗಳಂತೂ ಇದಕ್ಕೆ ಸಾಕ್ಷಿಯಾಗಿ ನಮ್ಮ ನೆನಪಿನಲ್ಲಿ ಮಾಸದೆ ಉಳಿದಿವೆ.

ಜಾಗತೀಕರಣದ ಸಂದರ್ಭದಲ್ಲಿ ಮಾಧ್ಯಮದ ಇಂಥ ಹಿಡಿತದಿಂದ ಬಿಡಿಸಿಕೊಳ್ಳುವುದು ಸುಲಭದ ವಿಷಯವೇನಲ್ಲ. ಉದಾಹರಣೆಗೆ, ನಮ್ಮ ದೇಶದಲ್ಲೇ ಮಾಧ್ಯಮಗಳ ಬಳಕೆಯ ಮೂಲಕ ‘ನಮ್ಮವರನ್ನು’ ಮತ್ತು ‘ಇತರರನ್ನು’ ಸೃಷ್ಟಿಸುತ್ತ, ಸಂಘರ್ಷವನ್ನು ವೃದ್ಧಿಗೊಳಿಸುವ ಕೆಲಸ ನಡೆದಿರುವುದನ್ನು ನಾವು ಗಮನಿಸಬಹುದು. ಬಾಬ್ರಿ ಮಸೀದಿಯ ನಾಶದ ಅನಂತರ ನಮ್ಮಲ್ಲಿಯ ಕೋಮುವಾದಿಗಳು ದೃಶ್ಯ ಮಾಧ್ಯಮಗಳನ್ನು ಪೂರ್ಣವಾಗಿ ಬಳಸಿಕೊಂಡು ಜಾಗತಿಕ ಮಟ್ಟದಲ್ಲಿ ಹಿಂದುತ್ವವನ್ನೂ ಹಿಂದೂರಾಷ್ಟ್ರವನ್ನೂ ಎಷ್ಟು ಚೆನ್ನಾಗಿ ಕಾಲ್ಪನಿಕ ಜಗತ್ತಿನಿಂದ ವಾಸ್ತವದ ಜಗತ್ತಿಗೆ ಕೊಂಡೊಯ್ದರು ಎಂಬ ಸಂಗತಿಯು ನಮಗೆ ಅನೇಕ ಪಾಠಗಳನ್ನು ಕಲಿಸುವಂತಿದೆ. ಕೋಮುವಾದವನ್ನು ಬಯಲು ಮಾಡಲು ಅನೇಕ ಪ್ರಜಾಪ್ರಭುತ್ವವಾದಿ ಸಂಸ್ಥೆಗಳೂ ಸಂಘಟನೆಗಳೂ ದೃಶ್ಯಮಾಧ್ಯಮವನ್ನು ಎಷ್ಟು ಚೆನ್ನಾಗಿ ಬಳಸಿದರೋ ಅಷ್ಟೇ ಚೆನ್ನಾಗಿ ಕೋಮುವಾದಿ ಶಕ್ತಿಗಳೂ ಇದನ್ನೇ ಬಳಸಿ ತಮ್ಮ ‘ವಾಸ್ತವವನ್ನು’ ಜಗತ್ತಿಗೆ ಸಾರಿದರು. ಹೀಗೆ, ಒಂದೇ ಮಾಧ್ಯಮವನ್ನು ಜಾಗತಿಕ ಮಟ್ಟದಲ್ಲಿ ವಿಭಿನ್ನ ಉದ್ದಿಶ್ಯಗಳಿಗಾಗಿ ಬಳಸಬಹುದಾದ ವಿಪರ್ಯಾಸ ಮತ್ತು ಅಂಥ ವಿಪರ್ಯಾಸವನ್ನು ಎದುರಿಸುವ ತೊಡಕು – ಇದು ಇವತ್ತಿನ ಸಂದರ್ಭದಲ್ಲಿ ನಿಜವಾಗಿಯೂ ಸಂಕೀರ್ಣವಾದ ಸಂಗತಿ. (ಎಡ್ವರ್ಡ್ ಸಯೀದ್‌ನ ‘ಕವರಿಂಗ್ ಇಸ್ಲಾಂ’, ನೋಮ್ ಛೋಮ್‌ಸ್ಕಿ ಮತ್ತು ಎಡ್ವರ್ಡ್ ಹರ್ಮನ್‌ರ ‘ಮ್ಯಾನುಫ್ಯಾಕ್ಚರಿಂಗ್ ಕನ್ಸೆಂಟ್’ – ಈ ಸಮಸ್ಯೆಯನ್ನು ಗಾಢವಾಗಿ ಚರ್ಚಿಸುವ ಪಠ್ಯಗಳು).

ಹಾಗೆಯೇ ಆಧುನಿಕ ತಂತ್ರಜ್ಞಾನವು ಮುಂದಿಟ್ಟಿರುವ ಅಂತರ್ಜಾಲ ಮತ್ತು ಈಮೈಲ್ ಮೊದಲಾದವುಗಳ ಪ್ರಯೋಜನದ ಬಗ್ಗೆ ನಾವು ಎಷ್ಟೇ ಮಾತನಾಡಿದರೂ ಅವೆಲ್ಲ ಮೂಲಭೂತವಾಗಿ ಕಾರ್ಪೋರೇಟ್ ಪ್ರಪಂಚದ ಅಸ್ತ್ರಗಳೆಂಬುದನ್ನು ನಾವು ಮರೆಯಬಾರದು. ಜತೆಗೆ, ಅಂತರ್ಜಾಲ ಮತ್ತು ಈಮೈಲ್‌ಗಳನ್ನು ಕ್ರಮೇಣ ಉಪಭೋಗ ಸಂಸ್ಕೃತಿಗೇ ಸೀಮಿತಗೊಳಿಸುವ ಕಾರ್ಪೋರೇಟ್ ಪ್ರಪಂಚದ ತಂತ್ರವನ್ನು ಕೂಡಾ ನಾವು ಅರಿಯಬೇಕಾದ ಅಗತ್ಯವಿದೆ. ಮೊದಮೊದಲು ಜನಸಮುದಾಯಕ್ಕೆ ಮುಕ್ತಮಾಹಿತಿ ಮತ್ತು ಪ್ರಜಾಪ್ರಭುತ್ವದ ವಿಚಾರಗಳನ್ನು ತಲುಪಿಸುವ ತಂತ್ರಜ್ಞಾನಗಳೆಂದು ಕಾಣಿಸಿಕೊಂಡ ಈ ಮಾಧ್ಯಮಗಳು ಹೇಗೆ ಕ್ರಮೇಣ ಬಂಡವಾಳಶಾಹಿಯ

ಹಿಡಿತಕ್ಕೆ ಬರುತ್ತವೆಂಬುದನ್ನು ಹಲವಾರು ಅಧ್ಯಯನಗಳು ಈಗಾಗಲೇ ವಿವರವಾಗಿ ದಾಖಲಿಸಿವೆ. ಗ್ರಾಹಕ ಸಂಸ್ಕೃತಿಯನ್ನು, ಅಂದರೆ ಈ-ಕಾಮರ್ಸ್, ಈ-ಶಾಪಿಂಗ್, ಸ್ಟಾಕ್ಸ್ ಮತ್ತು ಷೇರ್ಸ್‌ನ್ನು ಅಂತರ್ಜಾಲದಲ್ಲಿ ಕೊಳ್ಳುವುದೇ ಮೊದಲಾದಂಥ ವ್ಯವಹಾರಗಳನ್ನು ಮಾತ್ರ ಪ್ರೋತ್ಸಾಹಿಸುವ ಈ ಎಲ್ಲ ತಂತ್ರಜ್ಞಾನಗಳು ಕೊನೆಗೂ ಜನಸಮುದಾಯವನ್ನು ಬಂಡವಾಳಶಾಹಿ ಪ್ರಪಂಚದಲ್ಲಿಯೇ ಕಟ್ಟಿಹಾಕಿಬಿಡುತ್ತವೆ ಎಂಬುದನ್ನು ವಿವರವಾಗಿ 'ದಿ ಗ್ಲೋಬಲ್ ಮೀಡಿಯಾ' ಎಂಬ ಪಠ್ಯದಲ್ಲಿ ಎಡ್ವರ್ಡ್ ಎಸ್. ಹೆರ್ಮನ್ ಮತ್ತು ರಾಬರ್ಟ್ ಮ್ಯಾಕ್‌ಚೆಸ್ನೀ ನಮ್ಮ ಮುಂದಿಟ್ಟಿದ್ದಾರೆ.

ಹಾಗೆಯೇ, ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಮಾಧ್ಯಮಗಳನ್ನು ಯಾವತ್ತೂ ಬಳಸುವ ಕೋಮುವಾದಿಶಕ್ತಿಗಳು, ಇನ್ನೊಂದು ದಿಕ್ಕಿನಿಂದ ಅದೇ ಮಾಧ್ಯಮಗಳನ್ನು ಜನಾಂದೋಲನಗಳು ಸತ್ಯಹೇಳಲು ಬಳಸಿಕೊಂಡ ಸಂದರ್ಭಗಳಲ್ಲಿ ಮಾತ್ರ, ತಮ್ಮ ವಾದವನ್ನು ತಿರುಗಿಸಿ ಆಯಾ ಮಾಧ್ಯಮದ ನಿಷ್ಠೆಯನ್ನೇ ಪ್ರಶ್ನಿಸಲಾರಂಭಿಸುತ್ತವೆ. ಇದಕ್ಕೆ ಈಚಿನ ಗುಜರಾತ್‌ಗಲಭೆಗಳ ಸಂದರ್ಭವೇ ಒಳ್ಳೆಯ ಸಾಕ್ಷಿಯಾಗಿದೆ. ಆ ಸಂದರ್ಭದಲ್ಲಿ ಮತೀಯವಾದಿಗಳು ವೃತ್ತ ಪತ್ರಿಕೆಯನ್ನೂ ಟಿವಿ ವರದಿಗಳನ್ನೂ ನೀತಿಗೆಟ್ಟ ಅಪಪ್ರಚಾರದ ಕೇಂದ್ರಗಳೆಂದು ತಳ್ಳಿಹಾಕಿದ್ದು ಇದಕ್ಕೆ ನಿದರ್ಶನ. ನಮ್ಮ ಪ್ರಗತಿಪರ ಜನಾಂದೋಲನಗಳ ಮುಂದಿರುವ ಈ ತೊಡಕು ಇನ್ನೂ ಪ್ರಬಲ ವಾಗುವುದಕ್ಕೆ ಮುನ್ನವೇ ನಾವು ಈ ದುರಂತ ವಿಪರ್ಯಾಸವನ್ನು ಅರಿತು ತಡೆಯಬೇಕಾದ ಅಗತ್ಯ ಈಗ ಉದ್ಭವಿಸಿದೆ.

ಅಲ್ಲದೆ, ಬಂಡವಾಳಶಾಹಿ ಸಂಸ್ಕೃತಿಯಿಂದಾಗಿ, ಈ ಮಾಧ್ಯಮಗಳಿಂದ ಬೀಳುವ ಹೊಡೆತಗಳು ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಆಕರ್ಷಕ ಜಾಹೀರಾತುಗಳ ಮೂಲಕ, ಉಪಭೋಗವಾದಕ್ಕೆ ಪೂರಕವಾದ ಹೊಸ ಸೌಂದರ್ಯ ಮೀಮಾಂಸೆಯನ್ನೇ ಈ ಮಾಧ್ಯಮಗಳು ತಯಾರುಮಾಡುತ್ತವೆ; ಮತ್ತು ಆ ಮೂಲಕ ಎಲ್ಲರನ್ನೂ ಸೆಳೆದುಕೊಳ್ಳುವ ಶಕ್ತಿಯುಳ್ಳ ಒಂದು 'ಕಾಲ್ಪನಿಕ ಜಗತ್ತನ್ನೇ' ನಮ್ಮ ಮುಂದೆ ತಂದು ನಿಲ್ಲಿಸುತ್ತವೆ. ಒಂದು ಕಡೆಗೆ, ಹಸಿವು, ಬಡತನ, ಅನಕ್ಷರತೆ – ಮುಂತಾದ ವಿಷಯಗಳ ಬಗ್ಗೆ ಇರಬೇಕಾದ ಪ್ರಾಥಮಿಕ ಕಾಳಜಿಯನ್ನೆ ಈ ಮಾಧ್ಯಮಗಳು ಮರೆಯುವಂತೆ ಮಾಡುತ್ತ, ಜತೆಗೇ, ಬೇರೊಂದು ಜಗತ್ತಿನ ಕಲ್ಪನೆಯನ್ನು ವಿಶ್ವಾದ್ಯಂತ ಪ್ರಸಾರ ಮಾಡುತ್ತವೆ. ಈ ರೀತಿ, ಜಾಹೀರಾತಿನ ಬಲದಿಂದ ಜಾಗತೀಕರಣವು ಹುಟ್ಟುಹಾಕುತ್ತಿರುವ 'ವರ್ಗಪ್ರಜ್ಞೆ'ಯೇನಿದೆ, ಅದು ಬಹುಶಃ ಇದುವರೆಗೂ ಯಾರೂ ಕಂಡಿರುವಂತಹುದಲ್ಲ. ಈ ಮಾಧ್ಯಮಗಳ ಮೂಲಕ ಶೋಷಿತವರ್ಗವೂ ಕೂಡ ಕಲ್ಪಿಸಿಕೊಳ್ಳಬಹುದಾದ, ಕಾಲ್ಪನಿಕವಾಗಿ ಅನುಭವಿಸಬಹುದಾದ ಸುಖಗಳು



ಉದ್ಭವವಾಗುತ್ತವೆ ಮತ್ತು ಈ ಮೂಲಕ ವಿಶಿಷ್ಟವಾದೊಂದು 'ಉಪಭೋಗಿ ವರ್ಗಪ್ರಜ್ಞೆ'ಯು ಉದ್ದೀಪಿತವಾಗುತ್ತದೆ. ಇಲ್ಲಿರುವ ಅತ್ಯಂತ ದೊಡ್ಡ ವಿಪರ್ಯಾಸ ವೆಂದರೆ – ಉಳ್ಳವರು ನಿಜವಾಗಲೂ ಅನುಭವಿಸಬಹುದಾದ ಸುಖಗಳನ್ನು ಇಲ್ಲಿ ಶೋಷಿತರು, ತಮ್ಮ ಮೇಲಾಗುತ್ತಿರುವ ಶೋಷಣೆಯನ್ನು ಮರೆತು, ಕಾಲ್ಪನಿಕವಾಗಿ ಮಾತ್ರ ಅನುಭವಿಸಬಹುದಾಗಿರುತ್ತದೆ. ಇದು ಪ್ರಜಾಪ್ರಭುತ್ವದ ಕ್ರಾಂತಿಕಾರಕ ಪ್ರಜ್ಞೆಯನ್ನೇ ಕೊಂದುಹಾಕಿಬಿಡುವ ಒಂದು ತಂತ್ರ ಮತ್ತು ಜಾಗತೀಕರಣದ ದುಷ್ಪರಿಣಾಮಗಳಲ್ಲಿ ಅತ್ಯಂತ ಪ್ರಮುಖವಾದದ್ದು ಇದು. ಆದ್ದರಿಂದ, ಜಾಗತೀಕರಣದ ಸಂದರ್ಭದಲ್ಲಿ ಬಂಡವಾಳಶಾಹಿ ಜಗತ್ತಿನ ಸೂಕ್ಷ್ಮವಾದ ಈ ಸಾಂಸ್ಕೃತಿಕ ರಾಜಕೀಯವನ್ನು ಎಚ್ಚರದಿಂದ ಎದುರಿಸಲೇಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಮತ್ತು ಈ ಕಾರಣಗಳಿಂದಾಗಿಯೇ 'ಜಾಗತಿಕ ಹಳ್ಳಿ'ಯು ಅನೇಕ ಸಂಕೇತಗಳ ಮೂಲಕ ಹುಟ್ಟುವ ಭ್ರಮೆಯೇ ಹೊರತು ನಿಜವಾದ ಸಮಾನತೆಯ ಮತ್ತು ನ್ಯಾಯದ ಪ್ರತೀಕವಾಗಿರುವುದಿಲ್ಲ.

ಈ ಕಾರಣಕ್ಕಾಗಿಯೇ ಎರಿಕ್ ಹಾಬ್‌ಸ್ಬಾಮ್ 'ದಿ ನ್ಯೂ ಸೆಂಚುರಿ' ಎಂಬ ಪಠ್ಯದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಹೇಳುತ್ತ ಜಾಗತೀಕರಣದ ನಿಜವಾದ ಸಮಸ್ಯೆಯನ್ನು ಹೀಗೆ ವಿವರಿಸುತ್ತಾನೆ: 'ಜಾಗತೀಕರಣದ ಪ್ರಮುಖ ಸಮಸ್ಯೆಯೆಂದರೆ ಅದು, ಸಹಜವಾಗಿಯೇ ಅಸಮಾನವೂ ವೈವಿಧ್ಯಮಯವೂ ಆಗಿರುವ ಒಂದು ಜಗತ್ತಿನಲ್ಲಿ, ಎಲ್ಲ ವಸ್ತುಗಳೂ ಎಲ್ಲರಿಗೂ ಸಮಾನವಾದ ನೆಲೆಯಲ್ಲಿ ದೊರಕಬಲ್ಲದೆಂಬ ತಾತ್ಕಾಲಿಕ ಆಶ್ವಾಸನೆಯ ಭ್ರಮೆಯೊಂದನ್ನು ನಿರ್ಮಿಸಿಕೊಡುತ್ತದೆ. ಮತ್ತು ಈ ಎರಡು ಅಮೂರ್ತ ತತ್ವಗಳ ನಡುವೆ ಸಂಘರ್ಷ ಅನಿವಾರ್ಯವಾಗಿಯೇ ಉದ್ಭವಿಸುತ್ತದೆ.' ಈತನ ಮಾತನ್ನು ಇನ್ನಷ್ಟು ಮುಂದುವರಿಸಿ ಹೇಳುವುದಾದರೆ – ಜಾಗತೀಕರಣವು ಹಸಿವು, ರೋಗ, ಬಡತನ, ಕೊಳಗೇರಿ ವಾಸ ಇತ್ಯಾದಿ ಮೂರ್ತ ಅನುಭವಗಳನ್ನು ಮರೆಸುವ ಗುಣವುಳ್ಳದ್ದಾಗಿದೆ; ಹಾಗೂ ಸುಖವನ್ನು ಎಲ್ಲರ ಜೊತೆಯೂ ಸಮಾನವಾಗಿ ಹಂಚಿಕೊಳ್ಳುವ ಕಾಲ್ಪನಿಕ ಅನುಭವವನ್ನು ಸೃಷ್ಟಿಸಬಲ್ಲದ್ದಾಗಿದೆ. ಅಲ್ಲದೆ, ಅಮೂರ್ತವಾದ ಒಂದು ಜಗತ್ತನ್ನು ಕಟ್ಟಿಕೊಟ್ಟು, ಆ ಮೂಲಕ ನಾವೆಲ್ಲಾ ಒಂದೇ 'ವರ್ಗ'ಕ್ಕೆ ಸೇರಿದವರೆಂಬ ಸ್ವಪ್ನವನ್ನು, ನಮ್ಮ ಅರಿವಿಗೆ ಬಾರದಂತೆಯೇ ಕಟ್ಟುವ ಮಾಯಾಶಕ್ತಿ ಅದಕ್ಕೆ ಇದೆ. ಇವತ್ತು ಜಾಗತೀಕರಣವೆಂಬುದು ಸಮಾನತೆಯನ್ನೂ ನ್ಯಾಯವನ್ನೂ ಸ್ಥಾಪಿಸಲು ಹೋರಾಡುತ್ತಿರುವ ಎಲ್ಲರಿಗೂ ದೊಡ್ಡ ಸವಾಲಾಗಿ ಪರಿಣಮಿಸುವುದು ಈ ಕಾರಣಗಳಿಂದಾಗಿಯೇ.

## ೩

## ಜಾಗತೀಕರಣ ಮತ್ತು ಮಾನವ ಹಕ್ಕುಗಳು

ಈ ಭಾಗದಲ್ಲಿ ನಾನು ಮಾನವ ಹಕ್ಕುಗಳಿಗೆ ಮತ್ತು ಸ್ತ್ರೀವಾದಿ ಚಿಂತನೆಗೆ ಸಂಬಂಧಪಟ್ಟಂತೆ ಜಾಗತೀಕರಣದ ಪ್ರಕ್ರಿಯೆಯನ್ನು ನೋಡಬಯಸುತ್ತೇನೆ. ಮಾನವ ಹಕ್ಕುಗಳು ಮತ್ತು ಸ್ತ್ರೀವಾದಿ ಚರ್ಚೆಗಳಿಗೆ ಪೂರ್ಣಪ್ರಮಾಣದ ಅವಕಾಶವು ಈ ವಿಚಾರ ಸಂಕಿರಣದ ಬೇರೆ ಗೋಷ್ಠಿಗಳಲ್ಲಿರುವುದರಿಂದ ಇಲ್ಲಿ, ನನ್ನ ಪ್ರಬಂಧಕ್ಕೆ ಎಷ್ಟು ಅಗತ್ಯವೋ-ಪೂರಕವೋ ಅಷ್ಟನ್ನು ಮಾತ್ರ ವಿಶ್ಲೇಷಣೆಗೆ ಎತ್ತಿಕೊಂಡು ಕೇವಲ ಎರಡು ಉದಾಹರಣೆಗಳಿಗೆ ನನ್ನ ಈ ಭಾಗವನ್ನು ಸೀಮಿತಗೊಳಿಸುತ್ತೇನೆ.

ಮಾನವ ಹಕ್ಕುಗಳ ಪರವಾದ ಹೋರಾಟವು ಜಾಗತೀಕರಣದಿಂದ ಸ್ವಲ್ಪಮಟ್ಟಿನ ಪ್ರಯೋಜನವನ್ನು ಪಡೆದುಕೊಂಡರೂ ಇದರ ಹಿನ್ನೆಲೆಯಲ್ಲಿರುವ ಕೆಲವು ಸೂಕ್ಷ್ಮ ವೈರುಧ್ಯಗಳನ್ನು ನಾವು ಮರೆಯುವಂತಿಲ್ಲ. ಉದಾಹರಣೆಗೆ, ಬಾಲ ಕಾರ್ಮಿಕರಿಂದ ತಯಾರಿಸಲ್ಪಟ್ಟ ಪದಾರ್ಥಗಳನ್ನು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಪರಿಗಣಿಸಿ ಅದನ್ನು ಆಮದು ಮಾಡಿಕೊಳ್ಳಬಾರದೆಂದು ವಿಧಿಸುವ ನಿಯಮವನ್ನೇ ಗಮನಿಸೋಣ. ಅದು ಬೀಡಿ ತಯಾರಿಕೆಗೆ ಸಂಬಂಧಪಟ್ಟದ್ದಾಗಿರಬಹುದು; ಶಿವಕಾಶಿಯ ಪಟಾಕಿಮದ್ದುಗಳ ತಯಾರಿಕೆಯ ವಿಷಯವಾಗಿರಬಹುದು ಅಥವಾ ಉಡುಪು ಉದ್ದಿಮೆಗೆ ಸಂಬಂಧಿಸಿದ್ದೂ ಆಗಬಹುದು. ಇಂಥ ಸನ್ನಿವೇಶಗಳಲ್ಲಿ ಬಾಲ ಕಾರ್ಮಿಕರ ಬಳಕೆಯನ್ನು ತಡೆಯಬೇಕೆಂಬ ನಿಯಮವನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆ ಮಾತ್ರವಲ್ಲ, ಅವೆಲ್ಲವೂ ಮಾನವ ಹಕ್ಕುಗಳ ಉಲ್ಲಂಘನೆಯ ವಿಷಯ ಎಂಬುದನ್ನೂ ಕೂಡಾ ಯಾರೂ ನಿರಾಕರಿಸಲಾರರು. ಆದರೆ ಆರ್ಥಿಕ ಲಾಭ-ನಷ್ಟಗಳ ದೃಷ್ಟಿಯನ್ನಿಟ್ಟುಕೊಂಡು ಬಲಿಷ್ಠ ರಾಷ್ಟ್ರಗಳು ಈ ವಿಷಯದಲ್ಲಿಯೂ ಸೂಕ್ಷ್ಮವಾದ ರಾಜಕೀಯ ಮಾಡುವುದನ್ನು ನಾವು ಕಡೆಗಣಿಸುವಂತಿಲ್ಲ. ಇಂಥ ರಾಜಕೀಯದ ಮೂಲಕ ಮಾನವ ಹಕ್ಕುಗಳು ವ್ಯಾಪಾರ-ಬಂಡವಾಳಕ್ಕೆ ಶಾಮೀಲಾಗಿ ನಿಲ್ಲುವ ಸತ್ಯವನ್ನು ಕೂಡಾ ನಾವು ಮರೆಯಬಾರದು. ಇದು ಮೂಲತಃ ಮಕ್ಕಳನ್ನು ಶೋಷಣೆಯಿಂದ ಕಾಪಾಡುವ ಉದಾತ್ತ ನಿಲುವೇನೂ ಅಲ್ಲ.

ಉದಾಹರಣೆಗೆ, ೧೯೯೫ ರಲ್ಲಿ ಗ್ಯಾಟ್ ಒಪ್ಪಂದವು ಕೊನೆಗೊಂಡು ಡಬ್ಲ್ಯೂ.ಟಿ.ಓ.ದ ಸ್ಥಾಪನೆಯಾದಾಗ, ಉಡುಪು ಕೈಗಾರಿಕೆಯಲ್ಲಿ ಮಕ್ಕಳು ತಯಾರಿಸಿದ ಉಡುಪನ್ನು ಆಮದು ಮಾಡಿಕೊಳ್ಳಬಾರದೆಂಬ ನಿಯಮವನ್ನು ತರಲಾಯಿತು. ಇದನ್ನು ಮ್ಯಾನೇಜ್‌ಮೆಂಟ್ ಮತ್ತು ಕಾರ್ಮಿಕ ವರ್ಗಗಳೆರಡೂ ತಮ್ಮ ವೈಮನಸ್ಯಗಳನ್ನು ಮರೆತು ಅನುಮೋದಿಸಿದವು. ಅಮೇರಿಕಾದಲ್ಲಿ ಜವಳಿಯ ಚಿಲ್ಲರೆ



ವ್ಯಾಪಾರವನ್ನು ನಡೆಸುವ ಅತಿ ದೊಡ್ಡ ಸಂಸ್ಥೆಯಾದ ವಾಲ್-ಮಾರ್ಟ್‌ನ ಒಂದು ಷೇರಿನ ಬೆಲೆ ಮುಕ್ಕಾಲು ಡಾಲರಿನಷ್ಟು ಕುಸಿದಿದ್ದ ಘಟ್ಟ ಅದು. ಆದ್ದರಿಂದಲೇ ಆಗ, ಮಾನವ ಹಕ್ಕುಗಳ ತಾತ್ವಿಕ ನೆಲೆಯನ್ನು ಮುಂದಿಟ್ಟುಕೊಂಡು, ವಾಸ್ತವವಾಗಿ ಆರ್ಥಿಕ ಲಾಭದ ದೃಷ್ಟಿಯಿಂದ ಅಂಥ ಆಮದನ್ನು ತಡೆಗಟ್ಟಲಾಯಿತು. ಹಾಗಾಗಿ, ಇದು ಮೂಲಭೂತವಾಗಿ ಮಕ್ಕಳ ಹಿತದೃಷ್ಟಿಯಿಂದ ಮಾಡಿದ ಕಾನೂನಲ್ಲವೆಂಬುದು ಸ್ಪಷ್ಟವಾಗುವಂತಿದೆ. ಮಕ್ಕಳ ದುಡಿಮೆಯನ್ನು ನಿಷೇಧಿಸುವ ೧೯೩೮ರ ಶಾಸನದ ೧೨ನೇ ನಿಯಮವನ್ನು ಓದಿದರೆ ಇದು ಇನ್ನೂ ಸ್ಪಷ್ಟವಾಗಿ ಅರಿವಾಗುತ್ತದೆ. ಈ ನಿಯಮ ಹೇಳುತ್ತದೆ – '...ಅಮೇರಿಕಾ ಸಂಸ್ಥಾನದ ಮತ್ತು ಬೇರೆ ಮುಂದುವರಿದ ರಾಷ್ಟ್ರಗಳ ವಯಸ್ಕ ಕಾರ್ಮಿಕರು ಮುಂದುವರೆಯುತ್ತಿರುವ ದೇಶಗಳ ಬಾಲಕಾರ್ಮಿಕರ ಕಾರಣದಿಂದಾಗಿ ತಮ್ಮ ಕೆಲಸವನ್ನು ಕಳೆದುಕೊಳ್ಳುವಂತಾಗಬಾರದು.' ಇದು ಬಂಡವಾಳಶಾಹಿ ವ್ಯವಸ್ಥೆಯ ಹುನ್ನಾರವಲ್ಲದೆ ಮತ್ತೇನು?

ಅದೇ, ಮಹಿಳೆಯರ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಕ್ಕೆ ಬಂದರೆ ಅಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ರೀತಿನೀತಿಗಳೇ ಬೇರೆಯಾಗಿಬಿಡುತ್ತವೆ. ಉದಾಹರಣೆಗೆ, ಬೃಹತ್ ಔಷಧ ವ್ಯಾಪಾರಿ ಸಂಸ್ಥೆಗಳು ಮಹಿಳೆಯರ ಆರೋಗ್ಯಕ್ಕೆ ಮಾರಕವಾಗುವಂತಹ ಗರ್ಭನಿರೋಧಕಗಳನ್ನು ತೃತೀಯ ಜಗತ್ತಿನ ದೇಶಗಳ ಮೇಲೆ ತಂದು ಸುರಿದಾಗ, ಇದನ್ನು ವಿರೋಧಿಸುವವರನ್ನು ಮಹಿಳಾ ವಿಮೋಚನೆಯ ವಿರೋಧಿಗಳೆಂದೂ 'ಸಾಂಸ್ಕೃತಿಕ ಪ್ರತಿಗಾಮಿ'ಗಳೆಂದೂ ಕರೆಯಲಾಗುತ್ತದೆ. ಹಾಗೆಯೇ ಬಂಡವಾಳಶಾಹಿ ಸರಕುಗಳನ್ನು ನಿಷೇಧಿಸಬಯಸುವ ಪ್ರಗತಿಪರ ಚಳುವಳಿಗಳನ್ನು ಪ್ರಗತಿವಿರೋಧಿ ಎಂದೂ ಬಣ್ಣಿಸಲಾಗುತ್ತದೆ. ಆದ್ದರಿಂದಲೇ, ಮೂಲತಃ ಮಾನವ ಹಕ್ಕುಗಳ ಈ ವಿಷಯವು ನಿಜವಾಗಿ ಇವತ್ತು ಅದು ಬಂಡವಾಳಶಾಹಿಯ ಲಾಭನಷ್ಟಕ್ಕೆ ಯಾವ ರೀತಿ ಉಪಯೋಗವಾಗಬಲ್ಲದು ಎಂಬುದನ್ನು ಆಧರಿಸಿ ನಿರೂಪಿತವಾಗತೊಡಗಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಅಡಗಿರುವ ಈ ಆರ್ಥಿಕ ರಾಜಕೀಯವನ್ನು ನಾವು ಗೌಣವಾಗಿ ಕಾಣಲಾಗದು.

ಹಾಗೇ, ಉನ್ನತ ಶಿಕ್ಷಣದ ವಿಷಯದಲ್ಲಿ ಮತ್ತು ಅಸಂಘಟಿತ ಮಹಿಳಾ ಕಾರ್ಮಿಕರ ವಿಷಯದಲ್ಲಿ ಕೂಡಾ ವರ್ಲ್ಡ್ ಬ್ಯಾಂಕಿನ ನಿಯಮಗಳು ಮತ್ತು ಮಾನವ ಹಕ್ಕುಗಳ ಸಂವಿಧಾನಗಳು ಎಷ್ಟು ಅಮಾನವೀಯ ದ್ವಂದ್ವಗಳನ್ನು ಹೊಂದಿವೆ ಎಂಬುದನ್ನು ನಾವು ಪೂರ್ಣ ಪ್ರಮಾಣದಲ್ಲಿ ಚರ್ಚೆಗೆ ಎತ್ತಿಕೊಳ್ಳಬೇಕೆಂದು ನಾನಿಲ್ಲಿ ಸೂಚಿಸಬಯಸುತ್ತೇನೆ; ಕಾಲಮಿತಿಯ ಕಾರಣದಿಂದ ಆ ವಿಷಯಗಳು ತುಂಬ ಮುಖ್ಯವಾಗಿದ್ದರೂ ಅವನ್ನು ನಾನೀಗ ವಿಶ್ಲೇಷಿಸಲು ಹೋಗುವುದಿಲ್ಲ. (ಇವುಗಳ ಬಗ್ಗೆ

ಆಳವಾದ ಅಧ್ಯಯನವನ್ನು – ಗಾಯತ್ರಿ ಸ್ಪಿವಾಕ್‌ರ 'ಎ ಕ್ರಿಟೀಕ್ ಆಫ್ ಪೋಸ್ಟ್‌ ಕಲೋನಿಯಲ್ ರೀಸನ್' ಮತ್ತು ಅಮರ್ತ್ಯ ಸೇನ್‌ರ 'ಎಜುಕೇಶನ್ ಎಂಡ್ ಟ್ರೈನಿಂಗ್ ಇನ್ ದಿ ನೈನ್‌ಟೀನ್ ನೈನ್‌ಟೀಸ್: ಡೆವಲಪಿಂಗ್ ಕಂಟ್ರೀಸ್ ನೀಡ್ಸ್ ಎಂಡ್ ಸ್ಟ್ರಾಟೆಜೀಸ್' – ಈ ಪಠ್ಯಗಳಲ್ಲಿ ನೋಡಬಹುದು.)

## ೪

## ಜಾಗತೀಕರಣ:
## ಸಂಸ್ಕೃತಿಯ ಚೌಕಟ್ಟಿನಿಂದ ಒಂದು ಪುಟ್ಟ ವ್ಯಾಖ್ಯಾನ

ಜಾಗತೀಕರಣದ ಸಂದರ್ಭದಲ್ಲಿ ಅಧ್ಯಾತ್ಮವು ಹೇಗೆ ಹೊಸತಾಗಿ ಆವಿಷ್ಕಾರಗೊಳ್ಳುತ್ತಿದೆ ಎಂಬ ಒಂದು ವಿಚಾರವನ್ನು ಸಂಸ್ಕೃತಿಯ ಅಧ್ಯಯನ ಮಾಡಿರುವ ಸಮಾಜಶಾಸ್ತ್ರಜ್ಞರು ಬಹಳ ಮುಖ್ಯವಾಗಿ ಗಮನಿಸಿದ್ದಾರೆ. ಇಂಥ ಸಮಾಜಶಾಸ್ತ್ರಜ್ಞರು, ಮೂಲಭೂತವಾದಿ ಧಾರ್ಮಿಕತೆಯನ್ನು ಮೀರಿರುವ ಆಧ್ಯಾತ್ಮಿಕ ಧಾರ್ಮಿಕತೆಯು ಜಾಗತೀಕರಣಕ್ಕೆ ಬೇರೊಂದು ಆಯಾಮವನ್ನೇ ಕೊಟ್ಟಿದೆ ಎಂಬುದನ್ನು ತಮ್ಮ ಅಧ್ಯಯನಗಳಲ್ಲಿ ತೋರಿಸಿಕೊಡುತ್ತಾರೆ. ಇವರಲ್ಲಿ ಬಹಳ ಮುಖ್ಯವಾದ ಚಿಂತಕರು – ಫ್ರೆಡ್ ಡಾಲ್‌ಮೇಯರ್ ಮತ್ತು ಮೊಹಮದ್ ಆರ್ಕೋನ್. ಅದರಲ್ಲೂ ವಿಶೇಷವಾಗಿ ಇಸ್ಲಾಂ ಧರ್ಮವು ಜಾಗತಿಕ ಸಂದರ್ಭದಲ್ಲಿ ಹೇಗೆ ಒಂದು ಮಾನವೀಯ ದೃಷ್ಟಿಕೋನವನ್ನು ಹರಡಬಹುದೆಂದು ಮೊಹಮದ್ ಆರ್ಕೋನ್ ಅವರು ಚರ್ಚಿಸುತ್ತಾರೆ. ಇವೆಲ್ಲದರ ಕ್ರೋಢೀಕೃತ ಚರ್ಚೆ ಇತ್ತೀಚೆಗಷ್ಟೇ ಪ್ರಕಟವಾಗಿರುವ ಅನಂತ ಕುಮಾರ್ ಗಿರಿ ಅವರ 'ಬಿಲ್ಡಿಂಗ್ ಇನ್ ದಿ ಮಾರ್ಜಿನ್ಸ್ ಆಫ್ ಷಾಕ್ಸ್'ನಲ್ಲಿ ಕೂಡಾ ಸಿಗುತ್ತದೆ. (ಗಮನಿಸಿ – ಫ್ರೆಡ್ ಡಾಲ್ಮೇಯರ್‌ನ 'ಬಿಯಾಂಡ್ ಓರಿಯೆಂಟಲಿಸ್ಮ್: ಎಸ್ಸೇಸ್ ಆನ್ ಕ್ರಾಸ್-ಕಲ್ಚರಲ್ ಎನ್‌ಕೌಂಟರ್ಸ್ ....' ಇದು ಒಂದು ರೀತಿಯಿಂದ ಪಶ್ಚಿಮದ ಏಕಮುಖಿ ವೈಚಾರಿಕ ವ್ಯಾಖ್ಯಾನವನ್ನು ಪ್ರಶ್ನಿಸುವ ನಿಲುವನ್ನು ಮುಂದಿಡುವಂಥದು).

ಆದರೆ ಸಾಹಿತ್ಯದ ವಿದ್ಯಾರ್ಥಿಯಾಗಿ, ಸಂಸ್ಕೃತಿಗೂ ಜಾಗತೀಕರಣಕ್ಕೂ ಇರುವ ಸಂಬಂಧವನ್ನು ಹಿನ್ನೆಲೆಯಾಗಿಟ್ಟುಕೊಂಡು, ಸಾಹಿತ್ಯವನ್ನು ಕುರಿತಂತೆ ಮಾತ್ರ ಒಂದೆರಡು ಮಾತುಗಳನ್ನು ನಾನಿಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಸಲ್ಮಾನ್ ರಶ್ದೀ ಅವರು ಭಾರತೀಯ ಸಾಹಿತ್ಯದ ಮೇಲೆ ಮಾಡಿರುವ ಟೀಕೆಗಳನ್ನು – ಅಂದರೆ ಭಾರತೀಯ ಭಾಷೆಗಳಲ್ಲಿ ಬಂದಿರುವ ಸಾಹಿತ್ಯದಲ್ಲಿ ತನಗೆ ಮಹತ್ತರವಾದ್ದು ಅಷ್ಟಾಗಿ ಕಾಣಲಿಲ್ಲ ಎಂಬ ಮಾತನ್ನು – ಅವರ ಅಜ್ಞಾನದ ಕಾರಣದಿಂದ ಹುಟ್ಟಿದ



ಅಭಿಪ್ರಾಯವೆಂದಷ್ಟೇ ಸೀಮಿತಗೊಳಿಸದೆ, ಅದು ಪಾಶ್ಚಿಮಾತ್ಯ-ಕೇಂದ್ರಿತ ಪ್ರಜ್ಞೆಯಿಂದ ಉದ್ಭವಿಸಿದ ಒಂದು ಧೋರಣೆಯೆಂದೂ ನಾನು ಪರಿಗಣಿಸುತ್ತೇನೆ. ತನ್ನ ವಿಶಿಷ್ಟ ಪಾಶ್ಚಿಮಾತ್ಯ ಪ್ರಜ್ಞಾಕೇಂದ್ರದಿಂದ ಹೊರಡುವ ರಶ್ದಿ ಮಾದರಿಯ ವ್ಯಕ್ತಿಗಳಿಗೆ ಬೇಂದ್ರೆ, ಅಲ್ಲಮ, ಅಡಿಗ, ಕುವೆಂಪು ಇತ್ಯಾದಿ ಲೇಖಕರು ದಕ್ಕುವುದು ಎಷ್ಟರಮಟ್ಟಿಗೆ ಸಾಧ್ಯ ಎಂಬ ಅನುಮಾನವೂ ನನಗಿದೆ. ಯಾಕೆಂದರೆ, ತನ್ನ ನೆಲೆ ಮತ್ತು ಪ್ರದೇಶಗಳನ್ನೇ ಜಗತ್ತೆಂದು ಭಾವಿಸುವ ಹಾಗೂ ಗಾಢವಾಗಿ ತಾವು ಅನುಭವಿಸಿದ ಸ್ಥಳವನ್ನೇ ವಿಶ್ವವೆಂದು ಕಾಣುವ ಈ ಸ್ಥಳೀಯ ಲೇಖಕರ ಪ್ರಜ್ಞೆಯೇನಿದೆ, ಅದು ಅಂತರ ರಾಷ್ಟ್ರೀಯವಾಗಿ ನೆಲೆಯಿಲ್ಲದ, ಸ್ಥಳದ ಸೊಗಡಿಲ್ಲದ ರಶ್ದೀಯಂಥವರ ಪ್ರಜ್ಞೆಗೆ ಮುಟ್ಟುವುದಾದರೂ ಹೇಗೆ?

ಇವೆಲ್ಲವೂ ಕೇವಲ ಅಮೂರ್ತ ಅನುಭವಕ್ಕೆ ಸಂಬಂಧಿಸಿದ ವಿಚಾರಗಳೆಂದು ಹೇಳಿಯೂ ನಾನು ನನ್ನ ಈ ವಾದವನ್ನು ಮುಗಿಸುವುದಿಲ್ಲ. ಅದಕ್ಕೆ ಪ್ರತಿಯಾಗಿ, ಇಲ್ಲಿ ಭಾಷಾಂತರದ ಸಮಸ್ಯೆಯೂ ಇದೆ ಎಂಬುದನ್ನು ನಾನಿಲ್ಲಿ ಒತ್ತಿ ಹೇಳಬಯಸುತ್ತೇನೆ. ಯಾಕೆಂದರೆ, ಇವತ್ತಿನ ಜಾಗತಿಕ ಸಂದರ್ಭದಲ್ಲಿ ಎಲ್ಲರಿಗೂ ದಕ್ಕುವ ನುಡಿಗಟ್ಟು ಮತ್ತು ಸ್ಟ್ಯಾಂಡರ್ಡೈಸ್ ಆದ ಭಾಷೆ ಮಾತ್ರ ಸ್ವೀಕಾರಾರ್ಹತೆಯನ್ನು ಪಡೆಯುತ್ತದೆ. ಅಂಥ ಪ್ರಮಾಣೀಕೃತ ಭಾಷಾವಲಯಕ್ಕೆ ಸೇರದ, ಆದರೆ ಪರಿಪಕ್ವವೂ ಶ್ರೀಮಂತವೂ ಆದ ಸ್ಥಳೀಯ ಭಾಷೆಗಳೇನಿವೆ ಅವು ಎಲ್ಲರಿಗೂ ಆಪ್ಯಾಯಮಾನವಾಗುವ ಕಾಲ ಇದಲ್ಲ. ಆದ್ದರಿಂದಲೇ ಜಾಗತಿಕ ನೆಲೆಯಲ್ಲಿ ಓದುಗರಿಗೆ, ಅಂದರೆ ಅವರ ಪಾಶ್ಚಿಮಾತ್ಯ ಸಂವೇದನೆಗೆ, ಹತ್ತಿರವಾಗುವ ಭಾಷೆ ಮಾತ್ರ ಇಂದು ಮಾನ್ಯತೆ ಪಡೆಯಲು ಸಾಧ್ಯ. ಇದನ್ನು ಅರಿತೇ ಎ.ಕೆ. ರಾಮಾನುಜನ್ ಅವರು ಬಹಳ ಹಿಂದೆ 'ಸ್ಪೀಕಿಂಗ್ ಆಫ್ ಶಿವ' ಕೃತಿಯ ಭಾಷಾಂತರವನ್ನು ಆ ರೀತಿ ಮಾಡಿದರು ಎಂಬುದು ನನ್ನ ವಾದ. (ಅವರು ಮಾಡಿದ ಆ ಭಾಷಾಂತರದ ಕ್ರಮದಲ್ಲಿ 'ತಿಪ್ಪೇಸ್ವಾಮಿ' ಎಂಬ ಒಂದು ನಾಮಾಂಕಿತವು ಹೇಗೆ ಅನುವಾದಿತವಾಗಬಹುದಿತ್ತು ಎಂದು ತಿಳಿದುಕೊಳ್ಳುವ ಕುತೂಹಲ ಮಾತ್ರ ನನ್ನನ್ನಿನ್ನೂ ಬಿಟ್ಟಿಲ್ಲ!) ರಾಮಾನುಜನ್ ಅವರನ್ನು ಸುಲಭವಾಗಿ ವ್ಯಂಗ್ಯ ಮಾಡುವ ಉದ್ದೇಶದಿಂದ ನಾನಿಂದು ಈ ಮಾತನ್ನು ಹೇಳುತ್ತಿಲ್ಲ; ಅಂಥ ವ್ಯಂಗ್ಯದ ಅಗತ್ಯವೂ ನನ್ನ ಈ ವಾದಕ್ಕಿಲ್ಲ. ಆದರೆ ಭಾಷಾಂತರವು ಜಾಗತಿಕ ಸಂದರ್ಭದಲ್ಲಿ ಎಷ್ಟೆಲ್ಲ ರಾಜಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ ಎಂಬುದನ್ನು ಸೂಚಿಸಲು ನಾನು ಈ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ.

ಇದರಿಂದಾಗಿ ಇಂಗ್ಲಿಷ್‌ನಲ್ಲಿ ಬರುತ್ತಿರುವ ಭಾರತೀಯ ಸಾಹಿತ್ಯಕ್ಕೂ ನಮ್ಮ ದೇಶಭಾಷೆಗಳಿಗೂ ನಡುವೆ ಕಂದಕವೊಂದು ನಿರ್ಮಾಣವಾಗುತ್ತಿದೆ – ಎಂಬುದಷ್ಟನ್ನೇ

ಹೇಳುವುದು ಇಲ್ಲಿ ನನ್ನ ಉದ್ದೇಶವಲ್ಲ. ಬದಲು, ಈ ಸಮಸ್ಯೆಯು ಅಂತಿಮವಾಗಿ ಇಂಗ್ಲಿಷ್‌ನಲ್ಲಿ ಬರೆಯುವವರಿಗೂ ಕೂಡಾ ಒಂದು ಸವಾಲನ್ನು ತಂದೊಡ್ಡುತ್ತಿದೆ ಎಂಬುದೇ ನನ್ನ ವಾದ. ಉದಾಹರಣೆಗೆ, ಭಾಷೆಯನ್ನೂ ಶೈಲಿಯನ್ನೂ ಪ್ರಕಟಣೆಗೆ ಮೊದಲು ಪರಿಷ್ಕರಿಸುವ 'ಕಾಪಿ ಎಡಿಟಿಂಗ್' ಎಂಬ ಒಂದು ಕಲ್ಪನೆ ನಮ್ಮಲ್ಲಿಲ್ಲ. ಆದರೆ ಜಾಗತಿಕ ಮಟ್ಟದಲ್ಲಿ ಪ್ರಕಟಣೆ ಮತ್ತು ಮುದ್ರಣ ಮಾಡುವ ಸಂಸ್ಥೆಗಳು ಅಧಿಕೃತವಾಗಿ ಏಜೆಂಟರುಗಳನ್ನೂ ಕಾಪಿ ಎಡಿಟರುಗಳನ್ನೂ ಇಟ್ಟುಕೊಂಡಿರುತ್ತವೆ. ಆ ಕಾಪಿ ಎಡಿಟರುಗಳು, ತಮ್ಮೆದುರಿಗಿನ ಪಠ್ಯವು ಓದುಗರಿಗೆ ಕಷ್ಟವಾದೀತೆಂದು ಕಂಡರೆ, ಆ ಭಾಷೆಯ ವಿಧಾನ ಮತ್ತು ಶೈಲಿಗಳನ್ನೇ ತಿದ್ದುತ್ತಾರೆ – ಇದು ಇಂದು ಇಂಗ್ಲಿಷ್‌ನಲ್ಲಿ ಬರೆಯುವವರೆಲ್ಲರಿಗೆ ತಿಳಿದಿರುವ ವಿಷಯ. ಅಂಥ ಕೆಲವು ಲೇಖಕರ ಅನುಭವವು ವಿಚಿತ್ರ ಸತ್ಯವೊಂದನ್ನು ಸೂಚಿಸುತ್ತದೆ. ಅವರ ಕಾಪಿ ಎಡಿಟರುಗಳು – 'ನಿಮ್ಮ ಭಾಷೆಯನ್ನು ತಿದ್ದಬೇಕು, ಕೆಲವು ಪದಪ್ರಯೋಗಗಳು ಸೂಕ್ತವಲ್ಲ' – ಎಂದು ಹೇಳಿದಾಗ ಅದರ ಒಳ ಅರ್ಥವು ಆ ಬರಹಗಳು ಪ್ರಮಾಣೀಕೃತ ನುಡಿಗಟ್ಟಿಗೆ ಒಳಪಡಬೇಕೆಂಬುದೇ ಆಗಿರುತ್ತದೆ. ಅರ್ಥಾತ್ ಅದು ಸ್ಟ್ಯಾಂಡರ್ಡೈಸ್ಡ್ ಭಾಷೆಯೊಂದು ಬೇಕೆಂಬ ಜಾಗತಿಕ ಬೇಡಿಕೆಯ ಕೇಂದ್ರದಿಂದ ಉದ್ಭವಿಸಿದ ಒಂದು ವಾದ. ಆದ್ದರಿಂದಲೇ, ಇವತ್ತಿನ ಕಾಲದಲ್ಲಿ, ರಾಜಾರಾಯರ 'ಕಾಂತಾಪುರ'ವು – ಕನ್ನಡದ ಸೊಗಡನ್ನು ಇಂಗ್ಲಿಷ್‌ನಲ್ಲಿ ಅಷ್ಟು ಚೆನ್ನಾಗಿ ಅಭಿವ್ಯಕ್ತಿಗೊಳಿಸಿದ ಆ ಪಠ್ಯವು – ಎಷ್ಟರಮಟ್ಟಿಗೆ ಜಾಗತಿಕ ಮಟ್ಟದಲ್ಲಿ ಅಂಥ ಪ್ರಕಟಣಾ ಜಗತ್ತಿಗೆ ಸ್ವೀಕಾರಾರ್ಹವಾಗುತ್ತಿತ್ತೆಂದು ನನಗೆ ಅನುಮಾನವಾಗುತ್ತದೆ. ಇವತ್ತು, ರಶ್ದಿಯಾಗಲಿ ನೈಪಾಲ್ ಆಗಲಿ ತಮ್ಮ ತಮ್ಮ ರೀತಿಗಳಲ್ಲಿ ಭಾರತೀಯ ಸಾಹಿತ್ಯದ ಮೇಲೆ ಠರಾವುಗಳನ್ನು ಹೊರಡಿಸುವುದನ್ನು ಈ ಹಿನ್ನೆಲೆಯಲ್ಲಿಯೇ ನಾವು ಅರ್ಥೈಸಬೇಕೆಂಬುದು ನನ್ನ ಸೂಚನೆ. ಹಾಗೆಯೇ, ಶಾಸ್ತ್ರೀಯ ಸಂಗೀತ-ನೃತ್ಯಕ್ಷೇತ್ರಗಳಲ್ಲಿ ಕೂಡಾ ಇವತ್ತು ಜಾಗತೀಕರಣವು ಮಾಡಿರುವ ಇಂಥದೇ ಪ್ರಹಾರಗಳನ್ನು ನಾವು ವ್ಯಾಖ್ಯಾನಿಸಿಕೊಳ್ಳಬೇಕಾದ ಅಗತ್ಯವಿದೆ ಎಂಬ ಮಾತನ್ನು ಕೂಡಾ ಇಲ್ಲಿ ಸೂಚಿಸಿ ಮುಂದುವರೆಯುತ್ತೇನೆ.

## ೫

## ಜಾಗತೀಕರಣ ಮತ್ತು ದಲಿತ ಆಯ್ಕೆ

ಕೊನೆಯದಾಗಿ, ಜಾಗತೀಕರಣಕ್ಕೆ ದಲಿತ ಸಮುದಾಯದಿಂದ ಬಂದಿರುವ ಪ್ರತಿಕ್ರಿಯೆಯನ್ನು ಚರ್ಚೆಗೆ ಎತ್ತಿಕೊಳ್ಳುತ್ತೇನೆ. ಈ ವಿಚಾರ ಸಂಕಿರಣದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಪೂರ್ಣ ಪ್ರಬಂಧವೇ ಇರುವುದರಿಂದ ನನ್ನ



ವಾದಕ್ಕೆ ಪೂರಕವಾದಷ್ಟು ಮಾತ್ರ ನಾನು ಈ ವಿಷಯವನ್ನು ವಿಶ್ಲೇಷಣೆಗೆ ಒಳಪಡಿಸುತ್ತಿದ್ದೇನೆ.

ಜಾಗತೀಕರಣವು ಎಷ್ಟೇ ಸಮಸ್ಯೆಗಳನ್ನು ಹುಟ್ಟುಹಾಕಿದರೂ ಅದು ಸಂಪ್ರದಾಯದ ಕ್ರೂರ ಹೊಡೆತದಿಂದ ತಪ್ಪಿಸಿಕೊಳ್ಳಲು ಅನಿವಾರ್ಯ ಎಂಬ ಒಂದು ವಾದವು ಇವತ್ತು ದಲಿತ ಸಮುದಾಯದಲ್ಲಿದೆ. ಅಂದರೆ, ಜಾಗತೀಕರಣವನ್ನು ಆಧುನಿಕತೆಗೆ ಸಂವಾದಿಯಾದ ಒಂದು ಪ್ರಕ್ರಿಯೆ ಎಂದೂ ಮತ್ತು ಆದ್ದರಿಂದಲೇ ಆಧುನೀಕರಣದಂತೆಯೇ ಜಾಗತೀಕರಣದಿಂದಲೂ ಲಾಭ ಪಡೆದುಕೊಳ್ಳುವುದು ಅನಿವಾರ್ಯ ಎಂಬ ಒಂದು ಸೂತ್ರವನ್ನು ಇವತ್ತಿನ ದಲಿತ ಸಮುದಾಯ ಸಾರುತ್ತದೆ. ಜತೆಗೆ, ಮೇಲ್ಜಾತಿಗಳೂ ಮೇಲ್ವರ್ಗಗಳೂ ಈಗಾಗಲೇ ಆಧುನಿಕತೆ ಮತ್ತು ಜಾಗತೀಕರಣಗಳ ಬಳಕೆ ಮಾಡಿಕೊಂಡು, ಅದರಿಂದ ಸೌಲಭ್ಯಗಳನ್ನೂ ಪಡೆದುಕೊಂಡು ಕಡೆಗೆ ಅದನ್ನು ಟೀಕಿಸುತ್ತವೆ ಎಂದು ದಲಿತ ಸಮುದಾಯಗಳು ವಾದಿಸುತ್ತವೆ.

ಈ ಎಲ್ಲ ವಾದಸರಣಿಯ ಹಿನ್ನೆಲೆಯಲ್ಲಿ – ಸ್ವಾತಂತ್ರ್ಯಾನಂತರ ಭಾರತದ ಯಾವುದೇ ಸರ್ಕಾರವಾಗಲೀ, ಟಾಟಾ-ಬಿರ್ಲಾರಂತಹ ಬಂಡವಾಳಶಾಹಿಗಳಾಗಲೀ ದಲಿತರಿಗೆ ವಿಶೇಷವಾಗಿ ಯಾವ ಸೌಲಭ್ಯಗಳನ್ನೂ ಕಲ್ಪಿಸಿಕೊಡಲಿಲ್ಲ ಎಂಬೊಂದು ನಿಲುವು ಇದೆ. ಹಾಗೆಯೇ, 'ಕೇರ್‌ನಂಥ ಸಂಸ್ಥೆಗಳು ಕೊಟ್ಟ ಆಹಾರವನ್ನು ತಿಂದು ನಾವು ಮೇಲೆ ಬಂದೆವು' ಎಂಬ ಅನೇಕ ದಲಿತರ ಅನುಭವದ ಮಾತೂ ಇದೆ. ಅದನ್ನು ನಮ್ಮಂತಹವರು ಯಾವ ವಾದದ ಮೂಲಕವೂ ತಳ್ಳಿಹಾಕಲಾಗುವುದಿಲ್ಲ. ಮೂಲೆಯ ಪ್ರದೇಶಗಳಿಗೆ ಓದಿನ ಸವಲತ್ತುಗಳನ್ನು ಕಲ್ಪಿಸಿಕೊಟ್ಟ ಅಂತರರಾಷ್ಟ್ರೀಯ ಸಹಾಯ ಸಂಸ್ಥೆಗಳನ್ನು ದಲಿತರು ಇಂದು ನೆನೆಸಿಕೊಂಡರೆ, ಅದನ್ನು ಇವತ್ತು ನನ್ನಂತಹವರು ಮೌನವಾಗಿ ಅರ್ಥಮಾಡಿಕೊಳ್ಳಲೇಬೇಕು. ನೀರು, ಗ್ರಾಮಾಂತರ ಆರೋಗ್ಯ ಕೇಂದ್ರಗಳು, ಶಿಕ್ಷಣದ ಸುಧಾರಣೆ ಮೊದಲಾದವೆಲ್ಲ ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್‌ನ ಹಣದಿಂದ ಮಾತ್ರ ನಮಗೆ ಲಭ್ಯವಾಯಿತು – ಎಂದು ದಲಿತ ಸಮುದಾಯಗಳಿಗೆ ಅನ್ನಿಸುವುದು ಅಸಹಜವೇನಲ್ಲ. ಉದಾಹರಣೆಗೆ, ಮೊಗಳ್ಳಿ ಗಣೇಶರ 'ದಲಿತರು ಮತ್ತು ಜಾಗತೀಕರಣ'ದಲ್ಲಿ ಮಂಡಿತವಾಗುವ ಇಂಥ ವಾದವನ್ನು ನಾನು ಬಹಳ ಗಂಭೀರವಾಗಿ ನೋಡಿ ಅರ್ಥಮಾಡಿಕೊಳ್ಳಲು ಪ್ರಯತ್ನಸಿದ್ದೇನೆ. ಸಂಪ್ರದಾಯದ ನೆಲೆಗಳನ್ನು ಬಿಟ್ಟು ಐ.ಟಿ., ಜೈವಿಕ ತಂತ್ರಜ್ಞಾನ ಮುಂತಾದ ಅತ್ಯಾಧುನಿಕ ವಿಷಯಗಳನ್ನು ಬಳಸಿಕೊಂಡರೆ ಮಾತ್ರ ದಲಿತೋದ್ಧಾರ ಸಾಧ್ಯ ಎಂಬ ವಾದವನ್ನು ನಾವಿವತ್ತು ಕೇವಲ ವೈಯಕ್ತಿಕ ನೆಲೆಯಿಂದಾಗಲೀ ಅಥವಾ ಅಮೂರ್ತ ತಾತ್ವಿಕ ನೆಲೆಯಿಂದಲೀ ತಳ್ಳಿಹಾಕಲಾಗದು.

ಇಂಥ ದಲಿತ ಪ್ರತಿವಾದಕ್ಕೆ ಇನ್ನೊಂದು ಉದಾಹರಣೆ ಹೇಳುತ್ತೇನೆ. ಇವತ್ತು ಜಾಗತೀಕರಣದ ಸಂದರ್ಭದಲ್ಲಿ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಸ್ವಾಯತ್ತತೆಯನ್ನು ದುರುಪಯೋಗಪಡಿಸಿಕೊಳ್ಳುತ್ತವೆ ಎಂಬೊಂದು ವಾದ ಕೇಳಿಬರುತ್ತದೆ. ಅದಕ್ಕೆ ಗೈಲ್ ಓಮ್‌ವೆಡ್ತ್ ಅವರು ಇನ್ನೊಂದು ಪ್ರತಿವಾದವನ್ನು ಮುಂದಿಡುತ್ತಾರೆ. ಮೈಕ್ರೋಸಾಫ್ಟ್‌ನಂಥ ಒಂದು ಸಂಸ್ಥೆ ಕೂಡ ಇವತ್ತು ಅಮೇರಿಕಾದಲ್ಲಿ ಅಫರ್ಮೇಟಿವ್ ಆ್ಯಕ್ಷನ್‌ನ್ನು ಪಾಲಿಸುವುದರಿಂದ ಇಂಥ ಕಾರ್ಪೊರೇಟ್ ಸಂಸ್ಥೆಗಳು ಭಾರತದಲ್ಲಿಯೂ ಮೀಸಲಾತಿಯನ್ನು ಒಪ್ಪಿಕೊಳ್ಳಲೇಬೇಕಾಗುವಂತೆ ಮಾಡುವ ಶಾಸನವನ್ನು ರೂಪಿಸುವುದು ಅಸಾಧ್ಯವೇನಲ್ಲ ಎಂಬುದು ಅವರ ವಾದ. ಒಟ್ಟಿನಲ್ಲಿ, ದಲಿತ ಸಮುದಾಯಗಳು ತಮ್ಮ ಅವಮಾನದ ಸಾಂಸ್ಕೃತಿಕ ಪ್ರತೀಕಗಳನ್ನೂ ಆಚರಣೆಗಳನ್ನು ಬಿಟ್ಟು, ಆಳುವ ಜಾತಿಗಳಿಂದ ಮುಕ್ತಿಪಡೆಯಬೇಕಾದರೆ ಅದಕ್ಕೆ ಜಾಗತೀಕರಣ ಸಹಾಯಕ – ಎಂಬ ಈ ವಾದವನ್ನು ನಾನು ಕೇವಲ ಕೆಲವು ವ್ಯಕ್ತಿಗಳ ಅಭಿಪ್ರಾಯವೆಂದು ಭಾವಿಸುವುದಿಲ್ಲ.

ಇತ್ತೀಚೆಗಷ್ಟೇ ನಾನು ಮಧ್ಯಪ್ರದೇಶ ಸರ್ಕಾರದ 'ಭೋಪಾಲ್ ಡಾಕ್ಯುಮೆಂಟ್/ಡಿಕ್ಲರೇಷನ್'ನ್ನು ಓದಿ ಮುಗಿಸಿದೆ. ದಿಗ್ವಿಜಯ ಸಿಂಗ್ ಅವರ ನೇತೃತ್ವದಲ್ಲಿ ದಲಿತ ಬುದ್ಧಿಜೀವಿ ಚಂದ್ರಭಾನ್ ಪ್ರಸಾದ್ ಅವರು ರೂಪಿಸಿದ ಪ್ರಸ್ತಾವನೆ ಇದು. ಈ ಪ್ರಸ್ತಾವನೆಯ ಮೂಲಕ ಆ ಇಡೀ ಸರ್ಕಾರವೇ ಜಾಗತೀಕರಣವನ್ನು ಮತ್ತು ಖಾಸಗೀಕರಣವನ್ನು ದಲಿತ ಪ್ರಶ್ನೆಗಳಿಗೆ ಉತ್ತರ ಕೊಡಬಹುದಾದ ಐತಿಹಾಸಿಕ ಶಕ್ತಿಗಳೆಂದು ಪರಿಗಣಿಸಿದೆ; ಮತ್ತು ಇದನ್ನು ಸಮರ್ಪಕವಾಗಿ ಹೇಗೆ ಬಳಸಿಕೊಳ್ಳಬಹುದೆಂಬ ನೀಲಿ ನಕಾಶೆಯನ್ನು ಕೂಡಾ ಆ ಪ್ರಸ್ತಾವನೆಯು ಮುಂದಿಡುತ್ತದೆ. ಅದರ ವಿವರಗಳಿಗೆ ನಾನಿಲ್ಲಿ ಹೋಗುವ ಅಗತ್ಯವಿಲ್ಲ. ಆದರೆ ಆ ಪ್ರಸ್ತಾವನೆಯಲ್ಲಿ ಬರುವ ಎರಡು ಮುಖ್ಯ ಸೂತ್ರಗಳು ಹೀಗಿವೆ – ಒಂದು, ಎಂ.ಎನ್.ಸಿ ಮತ್ತು ಟಿ.ಎನ್.ಸಿಗಳು ಇವತ್ತು ಬಹಳ ಅಗತ್ಯವಾಗಿರುವುದರಿಂದ ಅವುಗಳನ್ನು ಸ್ವಾಗತಿಸಿ ಅವಕ್ಕೆ ಅಫರ್ಮೆಟಿವ್ ಆ್ಯಕ್ಷನ್‌ನ್ನು ಅನ್ವಯಿಸುವಂತೆ ಮಾಡುವುದು. ಮತ್ತು, ಎರಡು – ಎಲ್ಲ ಪರಿಶಿಷ್ಟಜಾತಿ-ವರ್ಗಗಳನ್ನು ಬಂಡವಾಳದ ಮಾರುಕಟ್ಟೆಯೊಳಗೆ ತರುವುದು. ಈ ಎರಡೂ ಮುಖ್ಯ ಸೂತ್ರಗಳನ್ನು ಅನ್ವಯಿಸಿದರೆ ಮಾತ್ರ ಭಾರತವನ್ನು ದಲಿತ ಮಾದರಿಯ ಮೂಲಕ ರೂಪಾಂತರಗೊಳಿಸಬಹುದೆಂಬ ವಿಶ್ವಾಸವೂ ತರ್ಕವೂ ಈ ಪ್ರಸ್ತಾವನೆಯಲ್ಲಿದೆ. ಆ ಪ್ರಸ್ತಾವನೆಯು ಹೇಳುವಂತೆ ಇದು – '೨೧ನೆಯ ಶತಮಾನದಲ್ಲಿ ದಲಿತರಿಗೆ ಹೊಸದೊಂದು ಮಾರ್ಗಸೂಚಿಯಾಗಬಲ್ಲಂಥದು' ಮತ್ತು 'ದಲಿತ ಪರಿಕಲ್ಪನೆಯೊಂದರ ಮೂಲಕ ಭಾರತವನ್ನು ಪುನರ್-ಕಲ್ಪಿಸಲು ಸಾಧ್ಯಮಾಡುವಂಥದು'.



ಭೋಪಾಲ್ ಗ್ಯಾಸ್ ದುರಂತದ ಇಷ್ಟು ಕಾಲದ ಅನಂತರವೂ ಅದಕ್ಕೆ ಕಾರಣವಾದ ಯೂನಿಯನ್ ಕಾರ್ಬೈಡ್ ಕಂಪೆನಿಯನ್ನು ಸರ್ಕಾರವು ಪೂರ್ಣವಾಗಿ ಶಿಕ್ಷಿಸಲಾಗಲಿಲ್ಲ – ಎಂಬ ಸಂಗತಿಯು ಈ ವಾದಕ್ಕೆ ಒಂದು ವ್ಯಂಗ್ಯದ ಹಿನ್ನೆಲೆಯನ್ನೊದಗಿಸುತ್ತದೆಯಾದರೂ ಈ ಪೂರ್ವಪಕ್ಷವನ್ನು ನಾನು ಬಹಳ ಗಂಭೀರವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಆದರೆ ನನ್ನ ಕಷ್ಟಗಳು, ಅನುಮಾನಗಳು, ಪ್ರಶ್ನೆಗಳು ಹಾಗೆಯೇ ಎದುರು ನಿಲ್ಲುವುದನ್ನೂ ನಾನಿಲ್ಲಿ ಗಮನಿಸಬೇಕಾಗಿದೆ. ಕಾರಣ, ದಲಿತ ಸಮುದಾಯದ ಈ ವಾದವು ಒಂದು ಹಂತದಲ್ಲಿ ಎಷ್ಟು ಸಮರ್ಪಕವಾಗಿದ್ದರೂ ಅದು ಸಮಸ್ಯಾತೀತವಲ್ಲ. ನನ್ನ ಪ್ರಕಾರ, ಸಾಂಪ್ರದಾಯಿಕ ಸಮಾಜಕ್ಕೆ ಸಂಬಂಧಿಸಿದಂತೆ ಜಾಗತೀಕರಣದ ಬಗ್ಗೆ ಇರುವ ವಾದ ಸರಿ ಇದ್ದರೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅದು ಯಾವ ಸ್ಥಾನವನ್ನು ಪಡೆದುಕೊಳ್ಳುವುದೆಂದು ಪರೀಕ್ಷಿಸದೆ ಅದನ್ನು ಪೂರ್ಣವಾಗಿ ಒಪ್ಪಲಾಗದು. ಅಂತರರಾಷ್ಟ್ರೀಯ ರಾಜಕೀಯವನ್ನು ಮರೆತು ನಾವು ಜಾಗತೀಕರಣವನ್ನು ಕೇವಲ ಭಾರತದ ಸಂದರ್ಭಕ್ಕೆ ಮಾತ್ರ ಅನ್ವಯಮಾಡಿಕೊಂಡು ಅರ್ಥೈಸಲಾಗುವುದಿಲ್ಲ.

ಇಂದು ಆಫ್ರಿಕಾ, ಮಧ್ಯ ಅಮೇರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳಲ್ಲಿ ಜಾಗತೀಕರಣದ, ಆಧುನಿಕತೆಯ, ಮತ್ತು ಬಂಡವಾಳಶಾಹಿಯ ಆಳ್ವಿಕೆಗಳನ್ನು ಗಮನಿಸಿದರೆ ಅಮೇರಿಕಾವು ರೂಪಿಸಿದ ಜಾಗತೀಕರಣದ ಸೂತ್ರವೂ ಖಾಸಗೀಕರಣದ ಮಂತ್ರವೂ ಯಾವ ರೀತಿಯ ಅನಾಹುತಗಳನ್ನು ಮಾಡಿವೆಯೆಂಬುದು ಕಂಡುಬರುತ್ತದೆ. ಹಾಗೆಯೇ, ಬಂಡವಾಳಶಾಹಿಯು ಪ್ರಪಂಚಾದ್ಯಂತ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿಕೊಂಡಿರುವ ರೀತಿ ಕೂಡಾ ಯಾರಿಗೂ ತಿಳಿಯದ ವಿಷಯವೇನಲ್ಲ. ಅಮೇರಿಕಾದ ಮುಂದಾಳತ್ವದಲ್ಲಿ ನಿರ್ಮಿತವಾಗಿರುವ ಮಾರುಕಟ್ಟೆಯ ನಿಯಮಗಳು, ನ್ಯಾಯದ ಪರಿಕಲ್ಪನೆಗಳು, ಮಾನವಹಕ್ಕುಗಳ ಸಂವಿಧಾನಗಳು – ಇವೆಲ್ಲವೂ ಯಾರ ಹಿತಕ್ಕಾಗಿ ಎಂದು ಕಂಡುಕೊಳ್ಳಲು ನಾವೇನೂ ಕಷ್ಟಪಡಬೇಕಾಗಿಲ್ಲ. ಅಂಥ ಅಮೇರಿಕಾವನ್ನು ಎದುರು ಹಾಕಿಕೊಂಡರೆ ಏನಾಗುತ್ತದೆ ಎಂಬುದಕ್ಕೂ ವಿಯೆಟ್ನಾಮ್ ಮತ್ತು ಕ್ಯೂಬಾ ದೇಶಗಳು ಉದಾಹರಣೆಯಾಗಿವೆ. ಆಧುನಿಕತೆಯನ್ನು ಒಪ್ಪದ ಇಸ್ಲಾಮಿಕ್ ದೇಶಗಳನ್ನು ಅಮೇರಿಕಾವು ಹೇಗೆ ತನ್ನ ಕಡೆಗೆ ಸೆಳೆದುಕೊಳ್ಳುತ್ತದೆ ಎಂಬುದು ಸಹ ಈಗಾಗಲೇ ಎಲ್ಲರಿಗೂ ಗೊತ್ತಾಗಿದೆ.

ಇದನ್ನು ನಮ್ಮ ದೇಶದ ಸಂದರ್ಭದಲ್ಲೇ ಗಮನಿಸುವುದಾದರೆ, ಜಾಗತೀಕರಣದ ಒಂದು ವಿನ್ಯಾಸ ಮಾತ್ರ ಇದುವರೆಗೆ ನಮ್ಮ ಮುಂದೆ ಬಿಚ್ಚಿಕೊಂಡಿದೆ. ನಮ್ಮ ದೇಶವು ನೆಹರೂ ಅವರಿಂದ ಇಲ್ಲಿಯವರೆಗೆ ಆಧುನಿಕತೆಯನ್ನು ಮುಕ್ತವಾಗಿ ಸ್ವೀಕಾರ

ಮಾಡಿಕೊಳ್ಳುತ್ತ ಬಂಡವಾಳಶಾಹಿ ವ್ಯವಸ್ಥೆಯನ್ನು ಕಟುವಾಗಿ ವಿರೋಧಿಸದೆ ಇರುವುದರಿಂದಲೇ ಜಾಗತೀಕರಣ ತನ್ನ ಒಂದು ಮಾನವೀಯ ಮುಖವನ್ನು ನಮಗೆ ತೋರಿಸುತ್ತ ಬಂದಿದೆ. ಅದರ ಬದಲು, ಬಂಡವಾಳಶಾಹಿಯನ್ನು ವಿರೋಧಿಸುವ ಸಮಾಜವಾದಿ ನಿಲುವೇ ನಮ್ಮಲ್ಲಿ ಪ್ರಬಲವಾದ ಪಕ್ಷದಲ್ಲಿ ಆಗ ಅಮೇರಿಕಾದ ನಿಲುವೇನೆಂಬುದೂ ಜಾಗತೀಕರಣದ ಇನ್ನೊಂದು ಮುಖವೇನೆಂಬುದೂ ನಮ್ಮ ಅರಿವಿಗೆ ಬಂದಿರುತ್ತಿತ್ತು. ಅರ್ಥಾತ್, ಅಮೇರಿಕಾವನ್ನೂ ಅದರ ಆರ್ಥಿಕ ನಿಯಮಗಳನ್ನೂ ಅದರ ಪ್ರಜಾಪ್ರಭುತ್ವದ ಸೋಗನ್ನೂ ಇದುವರೆಗೂ ನಾವು ಒಪ್ಪಿಕೊಂಡಿರುವುದರಿಂದ ನಮಗೆ ಜಾಗತೀಕರಣವು ಇಲ್ಲಿಯವರೆಗೂ ಅಷ್ಟು ಕ್ರೂರವಾಗಿ ಕಂಡಿಲ್ಲ. ಇಷ್ಟೇ ಅಲ್ಲದೆ, ಭಾರತವು ಅಮೇರಿಕಾಕ್ಕೆ ಒಂದು ಭದ್ರವಾದ ನೆಲೆಯೂ ಆಗಿ ಕಂಡಿರುವುದರಿಂದ ಅದು ಭಾರತದ ಬಗ್ಗೆ ವರ್ತಿಸುವ ರೀತಿ ಅಷ್ಟು ಕರಾಳ ಸ್ವರೂಪದ್ದಾಗಿಲ್ಲ.

ಮತ್ತು, ಇನ್ನೂ ಒಂದು ವಿಪರ್ಯಾಸವನ್ನು ನಾವಿಲ್ಲಿ ಮರೆಯುವಂತಿಲ್ಲ. ಆಂತರಂಗಿಕವಾಗಿ ಶೋಷಿತರ ವಿರುದ್ಧವಾಗಿರುವ ಮತ್ತು ದಲಿತರ ಬಗ್ಗೆ ಗಾಢವಾದ ಪ್ರೇಮವೇನೂ ಇಲ್ಲದ, ಜತೆಗೆ, ಮುಸಲ್ಮಾನರನ್ನು ಅನುಮಾನದಿಂದ ನೋಡುವ ನಮ್ಮ ದೇಶದ ಪ್ರಭುತ್ವವು ಅಂತರರಾಷ್ಟ್ರೀಯ ನೆಲೆಯಲ್ಲಿ ಮಾತ್ರ ಜಾಗತೀಕರಣವನ್ನು ಒಪ್ಪಿಕೊಳ್ಳುತ್ತದೆ ಎಂಬುದೇ ನಿಜವಾಗಿ ಒಂದು ವಿಪರ್ಯಾಸ. ಅದನ್ನು ಯಾರೂ ಅಲಕ್ಷಿಸಬಾರದು. ಡರ್ಬಾನ್ ಸಮಾವೇಶದಲ್ಲಿ ಜಾತಿಯ ಚರ್ಚೆಯನ್ನು ಅಧಿಕೃತವಾಗಿ ಮಂಡಿಸಲು ತಯಾರಿಲ್ಲದ ಸರ್ಕಾರವೇ ಜಾಗತೀಕರಣವನ್ನು ನಮ್ಮಲ್ಲಿಗೆ ಕರೆತಂದು ಅದಕ್ಕೆ ನಮ್ಮನ್ನು ಒಪ್ಪಿಸುವ ಪ್ರಯತ್ನ ಮಾಡುತ್ತದೆ ಎಂಬುದು ಇಲ್ಲಿ ಅಡಕವಾಗಿರುವ ಒಂದು ವ್ಯಂಗ್ಯ. ದಲಿತ ಆಯ್ಕೆಯು ಈ ವ್ಯಂಗ್ಯವನ್ನು ಖಂಡಿತವಾಗಿಯೂ ಮರೆಯುವಂತಿಲ್ಲ. ಹಾಗೆಯೇ ಜಾಗತೀಕರಣವನ್ನು ವಿರೋಧಿಸುವ ಮೇಲ್ಜಾತಿ-ಮೇಲ್ವರ್ಗಗಳ ಹುನ್ನಾರವನ್ನು ಅದು ಒಪ್ಪುವಂತಿಲ್ಲ. ಅಷ್ಟೇ ಅಲ್ಲ, ಇವೆಲ್ಲದರ ಜತೆಗೆ ಇನ್ನೊಂದು ಕಡೆಗೆ, ಅಲ್ಪಸಂಖ್ಯಾತರನ್ನು – ಅದರಲ್ಲೂ ವಿಶೇಷವಾಗಿ ಮುಸಲ್ಮಾನರನ್ನು – ದ್ವೇಷಿಸುವ ಸ್ವದೇಶಿ ಜಾಗರಣ ಮಂಚವು ಪ್ರತಿಪಾದಿಸುವ ಜಾಗತೀಕರಣವನ್ನೂ ವಿರೋಧಿಸಬೇಕಾಗುವುದು ಮತ್ತೊಂದು ಕಷ್ಟದ ಸಂಗತಿ. ಅಂದರೆ, ಇಲ್ಲಿ ಜಾಗತೀಕರಣವನ್ನು ಒಪ್ಪುವ ಅಥವಾ ವಿರೋಧಿಸುವ ಕೇಂದ್ರಗಳಾವುವೂ ನಿಜವಾಗಿ ಪ್ರಜಾಪ್ರಭುತ್ವವಾದಿ ನೆಲೆಗಳಿಂದ ಬಂದಂತಹ ಶಕ್ತಿಗಳಾಗಿರುವುದಿಲ್ಲ – ಇದು ಇವತ್ತು ದಲಿತ ಆಯ್ಕೆಯ ಎದುರಿಗಿರುವ ಕಷ್ಟ.

ಇಷ್ಟರಮೇಲೆ, ನಿಜವಾಗಿಯೂ ಪ್ರಜಾಪ್ರಭುತ್ವದ ನೆಲೆಯಲ್ಲಿ ಕೆಲಸಮಾಡುವ



ಜನಾಂದೋಲನಗಳು ಜಾಗತೀಕರಣದ ಬಗ್ಗೆ ತಾಳುವ ನಿಲುವನ್ನು ನಾವೀಗ ಗಮನಿಸಲೇಬೇಕು. ಹಳೆಯ ವಸಾಹತುಶಾಹಿಯು ಹಿಂದೆ ಮೇಲ್ಜಾತಿಗಳನ್ನು ಬಳಸಿಕೊಂಡಂತೆ ಇವತ್ತು ಜಾಗತೀಕರಣವೆಂಬ ನವವಸಾಹತುಶಾಹಿಯು ದಲಿತ ಸಮುದಾಯವನ್ನೂ ಕೂಡಾ ತನ್ನ ಉದ್ಧಾರಕ್ಕಾಗಿ ಬಳಸಿಕೊಳ್ಳುತ್ತದೆ – ಇದು ಇವತ್ತಿನ ದುರಂತ. ಮತ್ತೆ, ಸಾಂಸ್ಕೃತಿಕವಾಗಿ ಕೂಡ ದಲಿತ ಆಯ್ಕೆಯು ತನ್ನೆದುರಿಗಿರುವ ಇನ್ನೂ ಕೆಲವು ಸೂಕ್ಷ್ಮಗಳನ್ನು ಗಮನಿಸಬೇಕು. ಜಾಗತೀಕರಣವು ತನ್ನದೇ ಆದ ಉಪಭೋಗ ಸಂಸ್ಕೃತಿಯನ್ನು ತನ್ನೊಂದಿಗೆ ಹೊತ್ತುತರುವುದರಿಂದ ದಲಿತ ಸಮುದಾಯವು ಅದನ್ನು ಸ್ವಲ್ಪ ಗಂಭೀರವಾಗಿಯೇ ಪರಾಂಬರಿಸಬೇಕು. ಮಂಟೇಸ್ವಾಮಿ-ಮಾರಮ್ಮ-ಎಲ್ಲಮ್ಮರಿಗೆ ಸೇರಿದ ಸಾಂಸ್ಕೃತಿಕ ಆಚರಣೆಗಳು ದಲಿತರಿಗೆ ಬಿಡುಗಡೆಯ ಅಂಶಗಳಲ್ಲ ಎಂಬ ವಾದವು ಭಾಗಶಃ ಸರಿಯಿದ್ದರೂ ಇದಕ್ಕೆ ಜಾಗತೀಕರಣದ ಜತೆಗೆ ಬರುವ ಉಪಭೋಗ ಸಂಸ್ಕೃತಿಯು ಪರ್ಯಾಯವೇನೂ ಅಲ್ಲ. ಆದ್ದರಿಂದ ಜಾಗತೀಕರಣವನ್ನು ಒಪ್ಪುವ ದಲಿತ ನಿಲುವು ಸಾಂಸ್ಕೃತಿಕವಾಗಿ ಹೊಸ ಸ್ವಪ್ರಜ್ಞೆಯೊಂದನ್ನು ಹುಟ್ಟಿಹಾಕಿಕೊಳ್ಳಲೇಬೇಕಾದ ಸ್ಥಿತಿ ಇವತ್ತು ನಮ್ಮೆದುರಿಗಿದೆ.

ಈ ಕಾರಣಕ್ಕಾಗಿಯೇ ಇವತ್ತು, ದಲಿತ ಸಮುದಾಯದೊಳಗೆ ಆಧುನಿಕತೆಯ ಬಗ್ಗೆ ಮತ್ತು ಜಾಗತೀಕರಣದ ಬಗ್ಗೆ ಬೇರೊಂದು ದಿಕ್ಕಿನ ಚಿಂತನೆಗಳೇ ನಡೆಯ ತೊಡಗಿವೆ. ಆಧುನಿಕತೆಯಲ್ಲಿ ಜಾತಿ-ಜಾತಿಯ ಸ್ವಪ್ರಜ್ಞೆಗೆ ಅಥವಾ ಶೋಷಿತರ ಸಂಸ್ಕೃತಿಗೆ ಸ್ಥಾನವಿಲ್ಲದೇ ಇರುವುದರಿಂದ ಇವತ್ತು ದಲಿತ ಸಮುದಾಯಗಳು 'ಆಧುನಿಕತೆಯಿಂದ ಒಂದು ಹೆಜ್ಜೆ ಹೊರಗೆ' ಇರಲೇಬೇಕೆಂಬ ಒಂದು ವಾದವು ಈಗ ಕೇಳಿಬರತೊಡಗಿದೆ. ಮತ್ತು, ತಮ್ಮತಮ್ಮ ಜಾತಿಯ ಗುರುತುಗಳನ್ನು ಉಳಿಸಿಟ್ಟುಕೊಳ್ಳಲೇಬೇಕೆಂಬ ತಾತ್ವಿಕ ಧೋರಣೆಯೂ ಕ್ರಮೇಣ ಹರಡುತ್ತಿದೆ. ದಲಿತರು ದನದ ಮಾಂಸ ತಿನ್ನುವುದೂ ಸೇರಿದಂತೆ ತಮ್ಮೆಲ್ಲ ಸಾಂಸ್ಕೃತಿಕ ಆಚರಣೆಗಳನ್ನೂ ಉಳಿಸಿಕೊಂಡು, ಆ ಬಗ್ಗೆ ಕೀಳರಿಮೆಯನ್ನು ಬಿಟ್ಟು, ಆಧುನಿಕತೆಯ ಸಂದರ್ಭದಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಬೇಕೆಂಬ 'ದಲಿತತತ್ವದ' ಸಿದ್ಧಾಂತವೊಂದು ಕೂಡಾ ಇವತ್ತು ಮೇಲೆದ್ದು ಬರುತ್ತಿದೆ. ಉದಾಹರಣೆಗೆ, ಎಂ.ಎಸ್.ಎಸ್. ಪಾಂಡ್ಯನ್ ಅವರು ತಮ್ಮ 'ಒನ್ ಸ್ಟೆಪ್ ಔಟ್‌ಸೈಡ್ ಮಾಡರ್ನಿಟಿಃ ಕಾಸ್ಟ್, ಐಡೆಂಟಿಟಿ, ಪಾಲಿಟಿಕ್ಸ್ ಎಂಡ್ ಪಬ್ಲಿಕ್ ಸ್ಪಿಯರ್' ಎಂಬ ಲೇಖನದಲ್ಲಿ ಇವತ್ತಿನ ದಲಿತ ಸಮುದಾಯಕ್ಕೆ ದ್ವಂದ್ವಾತ್ಮಕವಾದೊಂದು ನಿಲುವು ಅಗತ್ಯವಾಗಿದೆ ಎನ್ನುವುದನ್ನು ಬಿಡಿಸಿ ಹೇಳುತ್ತಾರೆ. ಮತ್ತೆ ದಲಿತ ಹೋರಾಟದಲ್ಲಿ ತೊಡಗಿರುವ ಅನೇಕರು ಯಾಕೆ ಇಂಥ ನಿಲುವನ್ನು ಇವತ್ತು ಹೆಚ್ಚುಹೆಚ್ಚು ಸಮರ್ಥಿಸತೊಡಗಿದ್ದಾರೆ ಎಂಬುದನ್ನೂ

ಚರ್ಚಿಸುತ್ತಾರೆ. ಪಾಂಡ್ಯನ್ ತಮ್ಮ ಲೇಖನದಲ್ಲಿ – ಆಧುನಿಕತೆಯ ಮತ್ತು ಜಾಗತೀಕರಣದ ಜೊತೆಗಿನ ದಲಿತ ಸಮುದಾಯದ ಸಂಬಂಧವು 'ಅಂಟಗೊನಿಸ್ಟಿಕ್ ಇಂಡೆಟೆಡ್‌ನೆಸ್'ನ ರೀತಿಯದು ಎಂದು ವಾದಿಸುತ್ತಾರೆ; ಅಂದರೆ ಅದು ಅವರ ಪ್ರಕಾರ – 'ವಿರೋಧ ಲೇಪಿತ ಋಣದ ಸಂಬಂಧ' ಯಾ 'ಕೃತಜ್ಞತಾತ್ಮಕ ವಿರೋಧ '.

ಹೀಗೆ, ಈ ವಿಚಾರದಲ್ಲಿ ಇವತ್ತು, ಒಂದು ಕಡೆಗೆ ಸಾಂಸ್ಕೃತಿಕ ಮಾದರಿಗಳನ್ನು ಬಿಡಬೇಕೆಂಬ ವಾದವೂ ಇದೆ; ಮತ್ತೊಂದು ಕಡೆಗೆ ಸಾಂಸ್ಕೃತಿಕ ಲಾಂಛನ-ಸಂಕೇತಗಳನ್ನು ಉಳಿಸಿಕೊಳ್ಳಲೇಬೇಕೆಂಬ ವಾದವೂ ಇದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ವಾದದ ಪ್ರಕಾರ, ಆಧುನಿಕತೆಯು ರಾಜಕೀಯವಾಗಿ ಜಾತಿಯನ್ನು ಹೊರತಳ್ಳುತ್ತದೆ; ಆದರೆ ಸಾಂಸ್ಕೃತಿಕವಾಗಿ ದಲಿತರಿಗೆ ಕೀಳರಿಮೆಯನ್ನು ತರುತ್ತದೆ. ಆದ್ದರಿಂದಲೇ ಈ ಸಂದರ್ಭದಲ್ಲಿ ಜಾತಿಯ ಸಾಂಸ್ಕೃತಿಕ ಸ್ವರೂಪವನ್ನು ಮತ್ತೆ ಎತ್ತಿಹಿಡಿದು, 'ದಲಿತತತ್ವ'ವನ್ನು ಸಾರ್ವಜನಿಕ ವಲಯಗಳಲ್ಲಿ ಗಟ್ಟಿಯಾಗಿ ಸ್ಥಾಪಿಸಿ, ಆಮೂಲಕ ದಲಿತರು ಆಧುನಿಕತೆಯಿಂದ 'ಒಂದು ಹೆಜ್ಜೆ ಹೊರಗೆ' ಇರಲು ಸಾಧ್ಯವಾಗುವಂತೆ ಮಾಡಬೇಕೆಂಬುದು ಈ ವಾದದ ಸೂಚನೆ; ಇದು ದಲಿತ ಪ್ರಜ್ಞೆಗೆ ಹೊಸ 'ಸಾಂಸ್ಕೃತಿಕ ರಾಜಕೀಯ'ವೊಂದನ್ನು ಕೊಡಬಲ್ಲುದಾಗಿದೆ. ಅರ್ಥಾತ್, ದಲಿತ ಆಯ್ಕೆ ಎಂಬುದು ಇವತ್ತಿನ ಸನ್ನಿವೇಶದಲ್ಲಿ ಅಷ್ಟು ಸುಲಭದ ಸ್ಥಿತಿಯಲ್ಲಿ ಇಲ್ಲ, ಅದು ಬಹಳ ಸಂಕೀರ್ಣವಾದ ಒಳಸುಳಿಗಳನ್ನು ಒಳಗೊಂಡಿದೆ – ಎಂಬುದನ್ನು ಮನದಟ್ಟು ಮಾಡಲು ನಾನು ಈ ಎಲ್ಲ ವಿವರಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

••• ••• •••

ಹೀಗೆ, ಜಾಗತೀಕರಣವು ನಾನಾ ರೀತಿಯ ಸಿದ್ಧಾಂತಗಳನ್ನೂ ಬಿಕ್ಕಟ್ಟುಗಳನ್ನೂ ಸೃಷ್ಟಿಸಿರುವುದರಿಂದಲೇ ನಾವದನ್ನು ಇವತ್ತು ಸರಳೀಕೃತ 'ಸ್ವೀಕಾರ-ತಿರಸ್ಕಾರ'ಗಳ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲಾಗುವುದಿಲ್ಲ ಎಂದು ನಾನು ಸೂಚಿಸುತ್ತಿದ್ದೇನೆ. ಆದ್ದರಿಂದಲೇ ಜಾಗತೀಕರಣವನ್ನು ನಾವಿವತ್ತು ಎಲ್ಲ ಕೋನಗಳಿಂದಲೂ ಅರ್ಥೈಸುತ್ತ, ಅದರ ಜತೆಗೇ ಆರ್ಥಿಕ-ಸಾಂಸ್ಕೃತಿಕ-ರಾಜಕೀಯ ವಿಕೇಂದ್ರೀಕರಣವನ್ನು ಗಟ್ಟಿಯಾಗಿಸಿಕೊಳ್ಳಬೇಕೆಂಬ ನನ್ನ ಗ್ರಹಿಕೆಯನ್ನು ಮಾತ್ರ ನಾನಿಲ್ಲಿ ನಿಮ್ಮ ಮುಂದೆ ಹಂಚಿಕೊಳ್ಳುತ್ತಿದ್ದೇನೆ. ಇಂಥ ವಿಕೇಂದ್ರೀಕರಣದ ಮಾರ್ಗವನ್ನು ಬಿಟ್ಟರೆ ಭಾರತದ ನಾಗರಿಕ ಸಮಾಜವು ಅನೇಕ ರೀತಿಯ ದುರಂತಗಳಿಗೆ ಒಳಗಾಗಬೇಕಾಗುತ್ತದೆ ಎಂಬುದು ಕೂಡಾ ನನ್ನ ದೃಢ ನಂಬಿಕೆ. ಅಮೇರಿಕಾದ ಪ್ರಾಬಲ್ಯ, ಕೋಮುವಾದಿಗಳ ಹಿಡಿತ ಮತ್ತು ಕಾರ್ಪೋರೇಟ್ ವಲಯದ ಶಕ್ತಿ – ಈ ಮೂರೂ ಒಂದಲ್ಲ ಒಂದು ಅರ್ಥದಲ್ಲಿ ಪ್ರಜಾಪ್ರಭುತ್ವಕ್ಕೆ ವಿರೋಧಿಯಾದ್ದರಿಂದ 'ವಿಕೇಂದ್ರೀಕೃತ ಜಾಗತೀ



ಕರಣಕ್ಕೆ' ಹೋರಾಡುವ ರಾಜಕೀಯ ಪ್ರಜ್ಞೆ ಮತ್ತು ಕ್ರಿಯೆ ಇವತ್ತು ಬೆಳೆಯಬೇಕಾದ ಅಗತ್ಯವಿದೆ – ಎಂಬುದೇ ಒಟ್ಟಿನಲ್ಲಿ ನನ್ನ ವಾದ.

ಇಲ್ಲದೇ ಹೋದರೆ, ಫ್ರೀಡ್‌ಮನ್ ತನ್ನ 'ದಿ ಲೆಕ್ಸಾಸ್ ಎಂಡ್ ದಿ ಆಲಿವ್ ಟ್ರೀ' ಎಂಬ ಪುಸ್ತಕದಲ್ಲಿ ಬಣ್ಣಿಸಿದಂತೆ ನಾವೆಲ್ಲರೂ ಜಾಗತೀಕರಣವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಸ್ಥಿತಿ ಬಂದುಬಿಡುತ್ತದೆ. ಫ್ರೀಡ್‌ಮನ್ ಹೇಳುತ್ತಾನೆ – 'ಈ ಭೂಮಿಯ ಮೇಲೆ ಅಮೇರಿಕಾಕ್ಕಿಂತ ಉತ್ತಮವಾದ ಇನ್ನೊಂದು ಮಾದರಿ ನಮಗೆ ಲಭ್ಯವಿಲ್ಲ. ಆದ್ದರಿಂದಲೇ ನನ್ನ ದೃಢವಾದ ನಂಬಿಕೆಯೆಂದರೆ – ಜಾಗತೀಕರಣವು ಬಾಳಿಬದುಕಿಕೊಳ್ಳಲು ಅಮೇರಿಕಾವು ತನ್ನ ಉತ್ತುಂಗದಲ್ಲಿರುವುದು ಅತ್ಯಗತ್ಯ, ಇವತ್ತು, ನಾಳೆ ಮತ್ತು ಎಲ್ಲ ಕಾಲಕ್ಕೂ. ಅದು ಇಡಿಯ ಜಗತ್ತಿಗೆ ಒಂದು ದಾರಿದೀಪ ಆಗಬಲ್ಲದು ಮಾತ್ರವಲ್ಲ ಆಗಲೂಬೇಕು. ಈ ಬೆಲೆಬಾಳುವ ಆಸ್ತಿಯನ್ನು ನಾವು ಕೊಳ್ಳೆಹೊಡೆಯದಿರೋಣ.' ಮತ್ತು ಇವೆಲ್ಲದರ ಜತೆಗೆ ಈ ವಾಕ್ಯವನ್ನು ಕೂಡಾ ಗಮನಿಸಿ – 'ಅಮೇರಿಕಾ ಎಂಬುದು ಕೇವಲ ಒಂದು ರಾಷ್ಟ್ರವಲ್ಲ. ಅದೊಂದು ಆಧ್ಯಾತ್ಮಿಕ ಮೌಲ್ಯ; ಅದು ಒಂದು ಅನುಕರಣೀಯ ಮಾದರಿ.' ಈ ಮಾತುಗಳು ವ್ಯಕ್ತಪಡಿಸುವ ರೀತಿಯಲ್ಲಿ ಅಮೇರಿಕಾದ ಸಾರ್ವಭೌಮತ್ವವನ್ನು ಸಾರುವ ಜಾಗತೀಕರಣವೆಂಬ ಸಂಕೇತ ನಮಗೆ ಬೇಡವೇ ಬೇಡ ಎಂಬ ರಾಜಕೀಯ ಆಂದೋಲನ ನಮ್ಮೆಲ್ಲರಿಗೂ ಇಂದು ಅತ್ಯಗತ್ಯವಾಗಿದೆ.

ಆದರೆ ಆಂದೋಲನಗಳ ಬಗ್ಗೆ ಎಷ್ಟೇ ಮಾತನಾಡಿದರೂ ಕಡೆಗೂ ಜಾಗತೀಕರಣದ ಹೊಡೆತವನ್ನು ಆರ್ಥಿಕ ನೀತಿ ನಿಯಮಗಳಿಂದ ಮಾತ್ರವೇ ಸರಿಪಡಿಸಿಕೊಳ್ಳಲು ಸಾಧ್ಯ – ಎಂಬ ಆರ್ಥಿಕ ಶಾಸ್ತ್ರಜ್ಞರ ಮಾತನ್ನು ಕೂಡಾ ನಾನು ಓದಿದ್ದೇನೆ. ಆದರೆ ಪರ್ಯಾಯ ಆರ್ಥಿಕ ಮಾದರಿಗಳು ಎಲ್ಲಿವೆ? ಅವುಗಳ ರೂಪುರೇಷೆಗಳೇನು? ಅವುಗಳನ್ನು ಚಾಲನೆಗೆ ತರುವ ರಾಜಕೀಯ ಶಕ್ತಿಗಳು ಯಾವುವು? ರಾಜಕೀಯ ಇಚ್ಛಾಶಕ್ತಿ ಮತ್ತು ರಾಜಕೀಯ ಪ್ರಜ್ಞೆ ಇಲ್ಲದೆ ಸ್ವಯಂಭೂ ರೂಪದಲ್ಲಿ ಪರ್ಯಾಯ ಆರ್ಥಿಕ ಮಾದರಿಗಳು ಹುಟ್ಟುತ್ತವೆಯೇ? ಮತ್ತು ಈ ಪರ್ಯಾಯಗಳನ್ನು ಹುಟ್ಟಿಸುವವರಾರು? ಇದು ಕೂಡಾ ರಾಜಕೀಯ ಪ್ರಶ್ನೆ ಅಲ್ಲವೇನು? ಕೇವಲ ಶೈಕ್ಷಣಿಕವಾದ ಆರ್ಥಿಕ ಮೀಮಾಂಸೆಯಿಂದ ಇವನ್ನೆಲ್ಲ ಮುಖಾಮುಖಿಯಾಗಿ ಎದುರಿಸಲು ಸಾಧ್ಯವೆ? ಮತ್ತು, ಹಾಗೆ ನೋಡಿದರೆ, ಪರಿಪೂರ್ಣವಾದ ಪರ್ಯಾಯ ಆರ್ಥಿಕ ಮಾದರಿಗಳು ಹುಟ್ಟಿದರೂ ಅದನ್ನು ಚಾಲನೆಗೆ ತರುವ ರಾಜಕೀಯ ಪ್ರಜ್ಞೆ ಇವತ್ತು ಎಲ್ಲಿದೆ? – ಈ ಎಲ್ಲ ಕಷ್ಟವಾದ ಪ್ರಶ್ನೆಗಳನ್ನು ಎದುರಿಸುವ ಮೂಲಕವೇ ಬಹುಶಃ ನಮ್ಮಲ್ಲಿ ಪರ್ಯಾಯಗಳು ಹುಟ್ಟಿಯಾವು, ಅಷ್ಟೆ.

# ಜಾಗತೀಕರಣ: ಪರ್ಯಾಯ ಸಾಧ್ಯತೆಗಳು

ಡಾ| ನಿ. ಮುರಾರಿ ಬಲ್ಲಾಳ

*ಕರ್ನಾಟಕ ಸಾಹಿತ್ಯ ಅಕಾಡೆಮಿ, ಕುವೆಂಪು ವಿಶ್ವವಿದ್ಯಾಲಯ ಮತ್ತು ಶಿವಮೊಗ್ಗ ಕರ್ನಾಟಕ ಸಂಘಗಳು ಜಂಟಿಯಾಗಿ ಶಿವಮೊಗ್ಗದಲ್ಲಿ ೨೦೦೨ರ ಜೂನ್ ೮-೯ರಂದು ಹಮ್ಮಿ ಕೊಂಡ ಎರಡು ದಿನಗಳ 'ಜಾಗತೀಕರಣ:ಸಮಗ್ರ ಮಂಥನ' ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ*

## ೧. ಪರಿಣಾಮಗಳು

ನಿಜ ಜಗತ್ತಿನಲ್ಲಿ ಯಾವುದೂ ಅನಿವಾರ್ಯವಲ್ಲ – ಜಾಗತೀಕರಣವಂತೂ ಅಲ್ಲವೇ ಅಲ್ಲ. ಇಂದಿನ ಜಾಗತೀಕರಣ ಪ್ರಕ್ರಿಯೆಯು, ವೈಜ್ಞಾನಿಕ ಯುಗ ಆರಂಭವಾದಂದಿನಿಂದ ಮೊದಲುಗೊಂಡು ಹಲವು ಶತಮಾನಗಳಿಂದ ನಿರಂತರವಾಗಿ ಬಿಚ್ಚಿಕೊಳ್ಳುತ್ತ ಬಂದ ವಸಾಹತೀಕರಣ ಪ್ರಕ್ರಿಯೆಯ ಮಹತ್ವದ ಘಟನೆಗಳ ಸೂತ್ರರೂಪವಾಗಿದೆ. ಇದಕ್ಕೆ ೪-೫ ಶತಮಾನಗಳ ಇತಿಹಾಸವಿದೆ. ಇಂಥ ಪ್ರಕ್ರಿಯೆಯನ್ನು, ದೇಶೀ ರಚನೆಗಳ ಸಾಂಸ್ಕೃತಿಕ ಆಕೃತಿಗಳ ಮೂಲಕ ಮಾತ್ರ ಎದುರಿಸಲು ಸಾಧ್ಯ.

ವೈಜ್ಞಾನಿಕ ಯುಗದಲ್ಲಿ ಮನುಷ್ಯನ ಮನೋಭಾವದಲ್ಲೇ ಆದ ಮೂಲಭೂತ ಬದಲಾವಣೆ, ಇದು ಆತನನ್ನು ವರ್ತಮಾನದಲ್ಲಿ ಬದುಕುವ ಮನುಷ್ಯನ ಸಾಮಾನ್ಯ ನೆಲೆಯಿಂದ, ಕೇವಲ ಭವಿಷ್ಯದ ಭದ್ರತೆಗಾಗಿ ಹಪಹಪಿಸುವ ಕೊಳ್ಳುಬಾಕ ಆರ್ಥಿಕ ಮನುಷ್ಯನನ್ನಾಗಿ ಪರಿವರ್ತಿಸಿದ್ದು, ಇದು ಹುಟ್ಟು ಹಾಕಿದ ದುರಾಸೆ, ಈ ದುರಾಸೆಯನ್ನು ಪೋಷಿಸುವ ನಿರ್ದಿಷ್ಟ ಮಾದರಿಯ ಅನಿರ್ಬಂಧಿತ ಅಭಿವೃದ್ಧಿ ಮೀಮಾಂಸೆ – ಇವೆಲ್ಲವೂ ಮನುಷ್ಯನನ್ನು ಅತ್ಯಂತ ಕ್ರೌರ್ಯತುಂಬಿದ ಜೀವವಿರೋಧೀ ನೆಲೆಗಳಿಗೆ ಕೊಂಡೊಯ್ದು ಹಿಂಸೆಯನ್ನು ಶಾಶ್ವತೀಕರಿಸಿ ನ್ಯಾಯಸಮ್ಮತಗೊಳಿಸಿಬಿಟ್ಟಿದೆ.

ಅಭಿವೃದ್ಧಿಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ಪೈಪೋಟೀ ಪ್ರೇರಿತ ಆಕ್ರಮಣಕಾರೀ ಹಿಂಸೆ, ತನ್ನದೇ ಆದ ಅಭಿವೃದ್ಧಿ ವ್ಯಾಖ್ಯೆಯನ್ನು ಸೃಷ್ಟಿಸಿಕೊಂಡಿದ್ದು, ಅದನ್ನು ಅನಿವಾರ್ಯವೆಂಬಂತೆ ತರ್ಕಬದ್ಧವಾಗಿಯೂ ವೈಜ್ಞಾನಿಕವಾಗಿಯೂ ಭಾವರಹಿತವಾಗಿಯೂ ಮುಂದಿಡುತ್ತದೆ. ಇದರ ಫಲವೇ ದುರ್ಬಲ ಬಹುಜನರ ನಿರಂತರ ಬಲಿ. ಕೋಮುವಾದದ ಬಲಿ-ಬಲಿದಾನಗಳ ರೂಪಕ್ಕಿಂತಲೂ ಭೀಕರ



ಸ್ವರೂಪವನ್ನು ಇದು ಹಲವೊಮ್ಮೆ ಪಡೆಯುತ್ತದೆ. ಇಲ್ಲಿ ಬಲಿಹಾಕುವವರು ಯಾರು, ಬಲಿಯಾಗುವವರು ಯಾರು ಎಂದೇ ತಿಳಿಯದಷ್ಟು ಸೂಕ್ಷ್ಮವಾಗಿ ದೂರದಲ್ಲೆಲ್ಲೋ ಅಗೋಚರ ಶಕ್ತಿಗಳಿಂದ – ಮಂತ್ರಿಮಂಡಲಗಳಲ್ಲೋ, ಬಹುರಾಷ್ಟ್ರೀಯ ಕಂಪೆನಿಗಳ 'ಬೋರ್ಡ್ ರೂಮ್' ಗಳಲ್ಲೋ ಬಲಿಯ ನಿರ್ಧಾರಗಳಾಗುತ್ತಿರುತ್ತವೆ.

ಆಧುನಿಕ ಮನಸ್ಸಿನ ಪ್ರಗತಿಕಲ್ಪನೆಯೆಂದರೆ ನಿರ್ಗತೀಕರಣವೆಂದೇ ಅರ್ಥ (modern mind's notion of prosperity is pauperisation) ಎಂದು ಇಂದು ನಮ್ಮ ನಡುವಿರುವ ಒಬ್ಬ ಹಿರಿಯ ಸಮಾಜವಾದಿ ಚಿಂತಕ ಶ್ರೀ ಕಿಶನ್ ಪಟ್ನಾಯಕ್ ಜಾಗತೀಕರಣದ ಬಗ್ಗೆ ಉಡುಪಿಯಲ್ಲಿ ಪ್ರತಿಕ್ರಿಯಿಸಿದ್ದರು. ಯಾಕೆಂದರೆ ಇದು ಎಲ್ಲರನ್ನೂ ಒಳಗೊಳ್ಳುವ ಸಿದ್ಧಾಂತವಲ್ಲ, ಕೆಲವರಿಗಾಗಿ ಅನೇಕರನ್ನು ಹೊರಗಿಡುವ ಸಿದ್ಧಾಂತ (theory of exclusion). ತೋರಿಕೆಯ ಮಟ್ಟಿಗೆ ಈ ಮಾದರಿ, 'ಸಮಸುಖಿರಾಜ್ಯ' (Welfare state) ದ ಆದರ್ಶವಿಟ್ಟುಕೊಂಡಿದೆಯೇ ವಿನಾ ಇಲ್ಲಿ ಸಮಷ್ಟಿಹಿತದ ಸಾಮಾಜಿಕ ದರ್ಶನವೇ ಇಲ್ಲ. ತಂತ್ರಜ್ಞಾನ ಯುಗದ ಆರಂಭದ ಹಂತದಲ್ಲೇ, ಯಾವಾಗ ಅರ್ಥಶಾಸ್ತ್ರಕ್ಕೆ ಇರಲೇಬೇಕಾದ ಮನುಷ್ಯನ ಸಮಗ್ರಹಿತಕ್ಕೆ ಪೂರಕವಾದ ನೈತಿಕ ಅನುಶಾಸನ (normative aspects) ದ ಅಗತ್ಯವಿಲ್ಲವೆಂದು ತೀರ್ಮಾನವಾಯಿತೋ ಅಂದೇ ಅರ್ಥಶಾಸ್ತ್ರದ ದಾರಿ ನಿರ್ಣಾಯಕವಾಗಿ ಬದುಕಿನ ಆವಶ್ಯಕತೆಯಿಂದ ತಣಿಯದ ಬಯಕೆ - ಭೋಗಗಳತ್ತ ಸರಿಯಿತು. ಅನೈತಿಕ ವ್ಯಾಪಾರ, ಲಾಭ, ಜಾಹೀರಾತು ಪ್ರಣೀತ ಮಾರುಕಟ್ಟೆಯುದ್ದ, ನಿಸರ್ಗದ ಅಸಹ್ಯ ಲೂಟಿ, ಸುಖ-ಭೋಗದ ರಾವುಗಳೆಲ್ಲವೂ ನ್ಯಾಯಸಮ್ಮತವಾಗಿ ಬಿಟ್ಟಿತು. ಇವೆಲ್ಲದರ ವಿಕೃತ ಅಭಿವ್ಯಕ್ತಿಯೇ ಜಾಗತೀಕರಣ. ನೈತಿಕ ಅನುಶಾಸನವಿಲ್ಲದ, ಆತ್ಮನಿಷೇಧದ ಪರಿಕಲ್ಪನೆಯೇ ಇಲ್ಲದ ಇಂಥ ಅರ್ಥ ನೀತಿಯ ತಾತ್ವೀಕರಣ, ತನ್ನ ಮೂಲನೆಲೆಯಲ್ಲೇ ಪೈಪೋಟಿ, ದಕ್ಷತೆ, ಅಸಮಾನತೆಗಳನ್ನು ಪೋಷಿಸಿಕೊಂಡು ಬರುತ್ತಿರುವಾಗ, ಅದು ಮಾನವ ನಾಗರಿಕತೆಯನ್ನು ದೀರ್ಘಾವಧಿಯಲ್ಲಿ ಉಳಿಸಲು ಸಾಧ್ಯವೇ? ಹಾಗಾಗಿ, ಜಾಗತೀಕರಣದ ಶಕ್ತಿಗಳು 'ಜಗತ್ತೇ 'ಗ್ಲೋಬಲ್ ವಿಲೇಜ್' ಆಗಿ ಪಲ್ಲಟ ಗೊಳ್ಳುತ್ತಿದೆ' ಎಂದು ಹೇಳುತ್ತಿರುವಾಗ ಕೂಡ ಅವುಗಳ ಕಲ್ಪನೆಯ 'ಗ್ಲೋಬಲ್ ವಿಲೇಜ್' ನಲ್ಲಿ ನಿಜವಾದ ಹಳ್ಳಿಗಳು ಹಾಜರಿರುವುದಿಲ್ಲ ಎಂಬುದನ್ನೂ ಮರೆಯಬಾರದು.

ಈ ಶತಮಾನದ ಆರಂಭದಲ್ಲಿ ಕೈಗಾರಿಕಾ ಆಶಯ - ಆಕೃತಿಗಳು ಯೋಜನಾ ಪ್ರಕ್ರಿಯೆಯ ಪ್ರಮುಖ ಸ್ವರೂಪವಾದಾಗ ಜನಸಾಮಾನ್ಯರ ಬದುಕಿನ ಉಸಿರಾದ ಬೇಸಾಯ, ಕೈಕಸುಬುಗಳು ನಗಣ್ಯವಾದುವು. ಇಂದು, ಈ ಜಗತ್ತನ್ನು ಕಳೆದ ೨೦೦ ವರ್ಷಗಳಿಂದ ಅಳುತ್ತ, ರೂಢಿಗತವಾಗಿದ್ದ ಕೈಗಾರಿಕಾ ಅರ್ಥಸಿದ್ಧಾಂತವೇ ಕುಸಿದು

ಬಿದ್ದು, ಆ ಸ್ಥಾನವನ್ನು ಮಾಹಿತಿ (Information), ಸಂವಹನ (Communication), ಮನೋರಂಜನೆಗಳು (Entertainment) ಒಟ್ಟಾಗಿ 'ಐಸ್' (ICE) ಅಭಿವೃದ್ಧಿ ಮಾಡೆಲ್ ಎಂಬ ಹೆಸರಲ್ಲಿ ಆಕ್ರಮಿಸಿಕೊಳ್ಳುತ್ತಿದೆ. ನಮ್ಮ ಬದುಕಿನ ಮೂಲ ಆಸ್ತಿಯಾದ ಕೃಷಿ ಎಂದೋ ನಿರ್ಲಕ್ಷ್ಯಕ್ಕೊಳಗಾಗಿತ್ತು. ಇಂದು ಎಲ್ಲಾ ಉತ್ಪಾದನಾ ಕ್ಷೇತ್ರಗಳೂ ಅಂದರೆ ಕೈಗಾರಿಕಾ ಕ್ಷೇತ್ರವೂ ಕೂಡ 'ಕಲ್ಲು ಮತ್ತು ಸಿಮೆಂಟಿನ ಕ್ಷೇತ್ರ' (brick and mortar sector) ಎಂದು ಅವಗುಂಟನೆಗೆ ಪಾತ್ರವಾಗುತ್ತಿದೆ. ಇದು 'ಐಸ್ ಕ್ಷೇತ್ರದ ಕಾಲ' ಎಂದು ಉತ್ಪ್ರೇಕ್ಷಿತ ಹೇಳಿಕೆ ನೀಡಲಾಗುತ್ತಿದೆ. ಬಂಡವಾಳ ಇಂದು ಹಿಂದಿನಂತೆ ಯಂತ್ರರೂಪದಲ್ಲಿ ಪ್ರಕಟವಾಗದೆ, ಮಾಹಿತಿ ತಂತ್ರಜ್ಞಾನ ರೂಪದಲ್ಲಿ ಅಭಿವ್ಯಕ್ತಿ ಪಡೆಯುತ್ತಿದೆ. ಮಾಹಿತಿ ತಂತ್ರಜ್ಞಾನವೇ ಹೊಸ ಖಾಸಗೀ ಬಂಡವಾಳ ಎಂದು ಪರಿಗಣಿಸಲ್ಪಡುತ್ತಿದೆ. ಹಾಗಾಗಿಯೇ, ಇಂದು ಕೈಗಾರಿಕಾ ಉತ್ಪಾದನಾ ಕ್ಷೇತ್ರಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಬಂಡವಾಳಶಾಹೀ ಸಾಮಾಜಿಕ ನಿರ್ಮಿತಿಯಿಂದ ಹೊರಗಿರುವ ತೃತೀಯ ಜಗತ್ತಿನ ರಾಷ್ಟ್ರಗಳತ್ತ ಚಲಿಸುತ್ತಿವೆ; ಮತ್ತು ಕೈಗಾರಿಕಾ ಕಾರ್ಮಿಕ ವರ್ಗಗಳು, ಸಂಘಟನೆಗಳು ಸಂಪೂರ್ಣ ಛಿದ್ರಗೊಳ್ಳುತ್ತಾ ಸಮಹಿತ ಸಮಾಜದ ಆಶಯ ಹಿನ್ನಡೆ ಕಾಣುತ್ತಿದೆ. ಉತ್ಪಾದನೆಯನ್ನೇ ಮಾಡದೆ ಕೇವಲ ಗಾಳಿ ತಿಂದುಕೊಂಡು ಬದುಕಬಹುದೆಂಬ ಇಂದಿನ ಮಾನವನ ವಿಕಲ್ಪಕ್ಕೆ ಇತಿಹಾಸದಲ್ಲಿ ಇನ್ನೊಂದು ನಿದರ್ಶನವಿಲ್ಲ.

ಜಾಗತಿಕ ಹಣಕಾಸು ವ್ಯವಸ್ಥೆ ಎಂದೂ ಆಯಾಯಾ ದೇಶಗಳ ನೆಲದ ಜನರ ಆಶಯಗಳಿಗೆ ಪ್ರತಿಸ್ಪಂದಿಸದು. ಅಸಮಾನತೆಯ ಹೆಚ್ಚಳ ಜಾಗತೀಕರಣದ ಮಾರುಕಟ್ಟೆ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವುದರಿಂದ, ಸೂಕ್ಷ್ಮವಾಗಿ ಇದು ವಿವಿಧ ದೇಶಗಳು ತಮ್ಮ ತಮ್ಮ ಅಭಿವೃದ್ಧಿ ಮಾದರಿಯನ್ನು ತಾವೇ ರೂಪಿಸಿಕೊಂಡು ವಿಶಿಷ್ಟತೆಯಿಂದ ಬೆಳೆಯುವ ಹಕ್ಕನ್ನೇ ನಿರಾಕರಿಸುತ್ತದೆ.

ಜಾಗತಿಕ ಮಾರುಕಟ್ಟೆ ನೀತಿಯು, ಬೆಳವಣಿಗೆಯ ಆತ್ಯಂತಿಕ ಗುರಿಯನ್ನು ನಿರ್ದೇಶಿಸುತ್ತಿರುವಾಗ, ಈ ಅವೈಜ್ಞಾನಿಕ ಮಾದರಿಯು ಅನಿವಾರ್ಯವಾಗಿ ಸಾಮಾಜಿಕ ವಿಭಜನೆ, ನಾಗರಿಕಾತ್ಮಕ ಸಂಘರ್ಷಗಳನ್ನು ಭದ್ರಗೊಳಿಸುತ್ತದೆ. ಇಂಥ ಜಾಗತಿಕ ಮಾರುಕಟ್ಟೆಗೆ ನಮ್ಮ ರೈತಾಪಿ ವರ್ಗವನ್ನು, ಹೊಂದಿಸಿಕೊಂಡು ಲಾಭ ಪಡೆಯಲು ಒತ್ತಾಯಿಸಲಾಗುತ್ತಿದೆ. ಆದರೆ, ಜಾಗತಿಕ ಮಾರುಕಟ್ಟೆಯ ಅರ್ಥವ್ಯವಸ್ಥೆಯ ಒಳಲೋಕಕ್ಕೆ ಪ್ರವೇಶಿಸುವುದಿರಲಿ, ಆ ಬಲಿಷ್ಟ ವ್ಯಾಪಾರೀಶಕ್ತಿಗಳ ಅತ್ಯಂತ ಸಂಕೀರ್ಣ ವ್ಯಾಪಾರೀ ನಿಯಮಗಳನ್ನು ಅರ್ಥಮಾಡಿಕೊಳ್ಳಲೂ ನಮ್ಮ ಬಡ ರೈತನಿಗೆ ಸಾಧ್ಯವಾಗದು. ತನ್ನ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲೂ ರೈತ, ತನ್ನ ಬೆಳೆಯ ಆಯ್ಕೆ



ಮತ್ತು ತನಗೆ ಆವಶ್ಯವಾದ ತಂತ್ರಜ್ಞಾನದ ಆಯ್ಕೆಯ ಮಟ್ಟಿಗಾದರೂ ಇಂದಿನ ವರೆಗೆ ಸ್ವತಂತ್ರನಾಗಿದ್ದ. ಬಡತನದಲ್ಲೂ, ಪರಂಪರಾಗತವಾದ ಹಳ್ಳಿಯ ಕೂಡು ಬಳಕೆಯ ಸಂಪತ್ತಿನ (village commons) ಬಲದಿಂದ ಮರ್ಯಾದೆಯಿಂದ ಬದುಕಲು ಆತನಿಗೆ ಸಾಧ್ಯವಾಗಿತ್ತು. ಈ ವ್ಯವಸ್ಥೆಯೇ ಇಂದು ಛಿದ್ರೀಕರಣಗೊಂಡು, ಆತ ಸಂಪೂರ್ಣ ದಿವಾಳಿಯೆದ್ದು ದರಿದ್ರನಾಗಿ, ನಿರ್ಗತಿಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಹಂತ ತಲುಪಿದ್ದಾನೆ. ಈ ದೇಶದ ಸುಮಾರು ೬೦ ಶೇಕಡಾ ಜನರು ೫೦ ವರುಷಗಳ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಳಿಕವೂ 'ತಮಗೆ ಈ ದೇಶದಲ್ಲಿ ಬದುಕಲು ಸಾಧ್ಯವಾಗುತ್ತಿಲ್ಲ' ಎಂದು ಆತ್ಮಹತ್ಯೆಯ ಮೂಲಕ ಸಾರುತ್ತಿರುವಾಗ, ನಿಜಕ್ಕೂ ನಮ್ಮ ಪ್ರಗತಿ ಪಥದ ದೃಷ್ಟಿ-ಧ್ಯೇಯಗಳೇನು ಎಂಬುದನ್ನು ಅನುಮಾನದಿಂದ ಶೋಧಿಸಬೇಕಾಗುತ್ತದೆ. ಆದರೆ ಈ ಅತ್ಯಂತ ಕಳವಳಕಾರೀ ವಿದ್ಯಮಾನದ ಬಗ್ಗೆ ಯಾವುದೇ ರಾಜ್ಯಸಭೆಗಳಲ್ಲಾಗಲೀ, ಲೋಕಸಭೆಯಲ್ಲಾಗಲೀ ಗಂಭೀರವಾದ ಚಿಂತನೆಯೇ ನಡೆಯದಿರುವುದು, ಮತ್ತು ದೇಶದ ರಾಷ್ಟ್ರೀಯ ಚರ್ಚೆಗಳ ಪ್ರಧಾನ ವಾಹಿನಿಯಲ್ಲಿ ಇದು ಪ್ರಮುಖ 'ಎಜೆಂಡಾ' ಆಗದಿರುವುದು ಅತ್ಯಂತ ವಿಷಾದದ ಸಂಗತಿ. ಈ ದೇಶದ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ನಮ್ಮ ಪ್ರತಿಷ್ಠಿತ, ಸಂಭಾವಿತ ಸಮಾಜಕ್ಕೆ 'ಸೆನ್ಸ್ ಆಫ್ ಶೇಮ್', 'ಸೆನ್ಸ್ ಆಫ್ ಶಾಕ್' ಕೂಡಾ ಈ ಬಗ್ಗೆ ಇದ್ದಂತಿಲ್ಲ.

''೨೦೦ ವರ್ಷಗಳ ಹಿಂದೆ ಮ್ಯಾಂಚೆಸ್ಟರ್, ಲ್ಯಾಂಕ್‌ಶಯರ್‌ನ 'ಕಾಟನ್ ಫ್ಯಾಬ್ರಿಕ್ಸ್' ಭಾರತವನ್ನು ಪ್ರವೇಶಿಸಿದಾಗ ಈ ದೇಶದ ಸ್ವಾವಲಂಬೀ ಅರ್ಥ ವ್ಯವಸ್ಥೆಯನ್ನೇ ಅದು ಛಿದ್ರಗೊಳಿಸಿತ್ತು. ಇಂದಿನ ಈ ಜಾಗತೀಕರಣ ವ್ಯವಸ್ಥೆಯಲ್ಲಿ ಇದು ಇನ್ನೂ ಭವ್ಯ ಪ್ರಮಾಣದಲ್ಲಿ ನಡೆಯುತ್ತದೆ'' ಎಂದು ಪ್ರಸಿದ್ಧ ಸಮಾಜಶಾಸ್ತ್ರಜ್ಞ ಆಶೀಸ್ ನಂದಿ ಅಭಿಪ್ರಾಯಪಡುತ್ತಾರೆ. ಇಂದೂ ಕೂಡ ಈ ದೇಶದಲ್ಲಿ ೧.೩ ಕೋಟಿ ಜನರು ಕೈಮಗ್ಗ ಕ್ಷೇತ್ರದಲ್ಲಿ, ೨.೩ ಕೋಟಿ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಮತ್ತು ೫೦ ಲಕ್ಷ ಜನರು ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದು, ಈ ಮೂರು ಕ್ಷೇತ್ರಗಳು ಒಟ್ಟು ರಾಷ್ಟ್ರೀಯ ಆದಾಯದ ೭೦ ಶೇಕಡಾ ಪಾಲು ಹೊಂದಿವೆ. ಭಾರತದ ವಿದೇಶೀ ವಿನಿಮಯದ ೬೦ ಶೇಕಡಾ ಇನ್ನೂ ಅಸಂಘಟಿತ ಕ್ಷೇತ್ರ (unorganised sector)ಗಳಿಂದಲೇ ಬರುತ್ತಿದೆ. ಕೇವಲ 'ವಜ್ರ ಪರಿಷ್ಕರಣೆ' ಗುಡಿಕೈಗಾರಿಕೆಯೊಂದೇ ಶೇಕಡಾ ೪೦ ರಷ್ಟು ವಿದೇಶೀ ವಿನಿಮಯವನ್ನು ಸಂಪಾದಿಸುತ್ತಿದೆ. ದೇಶದಲ್ಲಿ ಒಟ್ಟು ಉದ್ಯೋಗನಿರತರಲ್ಲಿ ಶೇಕಡಾ ೯೨ ಜನ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಇಂಥ ವಿಪುಲ ಕ್ಷೇತ್ರಗಳಿಗೆ ಕೇಡು ಬಗೆದರೆ ದೇಶಕ್ಕೇ ಕೇಡು ಬಗೆದಂತೆ; ದೇಶವೇ ಆತ್ಮಹತ್ಯೆ ಮಾಡಿಕೊಂಡಂತೆ. ಆದರೆ ತಲ್ಲಣದ ಸಂಗತಿಯೆಂದರೆ ಕಳೆದ ೫ ವರುಷಗಳಲ್ಲಿ

ಭಾರತದ ಸುಮಾರು ೩,೭೫,೦೦೦ ಸಣ್ಣಕೈಗಾರಿಕೆಗಳು ಮುಚ್ಚಿವೆ. ಕರ್ನಾಟಕ ರಾಜ್ಯವೊಂದರಲ್ಲೇ ೪೮,೦೦೦ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆಯೆಂದು ಅಂಕಿ ಅಂಶಗಳು ತಿಳಿಸಿಕೊಡುತ್ತವೆ. ಜಾಗತೀಕರಣದ ಕಣ್ಣು ಕೋರೈಸುವ ಪ್ರದರ್ಶನದ ಅಡಿಯಲ್ಲಿ, ಇಂದು ವೈವಿಧ್ಯಮಯ ಕರಕುಶಲಗಾರರ ಪರಂಪರೆ ಮತ್ತು ಅಂಥವರ ತಳಿಯೇ ಅಳಿಯುವ ಭೀತಿಯಲ್ಲಿದೆ. ನಮ್ಮ ದೇಶದ ಆಶಯಗಳಾದ ಸಂಪತ್ತಿನ ಹಂಚಿಕೆ, ವಿಪುಲ ಉದ್ಯೋಗ ನಿರ್ಮಾಣ ಮತ್ತು ಉದ್ಯೋಗ ಅವಕಾಶಗಳೆರಡರಲ್ಲೂ ಸಾಮಾಜಿಕ ಸಮಾನತೆಯನ್ನು ಕಾಯುವ ಮತ್ತು ವಿಶ್ವ ಮಟ್ಟದಲ್ಲಿ ಇಂದೂ ಪೈಪೋಟಿಯನ್ನೆದುರಿಸಲು ಸಮರ್ಥವಾಗಿರುವ ಇಂಥ ದಕ್ಷ ಕೈಕಸುಬು, ಸಣ್ಣಕೈಗಾರಿಕಾ ಕ್ಷೇತ್ರ ಗಳನ್ನು ಬುಡಮೇಲುಮಾಡಿ, ಈ ಜನಸಂಪದ್ಭರಿತ ರಾಷ್ಟ್ರದಲ್ಲಿ ಅವರಿಗೆ ನಾವು ಪರ್ಯಾಯವಾಗಿ ಏನನ್ನು ಕೊಡಲು ಸಾಧ್ಯ? ಶತಮಾನಗಳಿಂದ ಹಲವು ಸ್ತರಗಳಲ್ಲಿ ದತ್ತವಾಗಿ ಪಾರಂಪರಿಕವಾಗಿ ಹರಿದು ಬಂದ ೭೫ ಶೇಕಡಾ ಜನರ ಅನುಭವಜನ್ಯ ಜನಪದ ಜ್ಞಾನ ಸಂಪನ್ಮೂಲಕ್ಕೆ ನಮ್ಮ ಯೋಜನೆಯಲ್ಲಿ ಪ್ರಾಶಸ್ತ್ಯ ಕೊಡದೆ, ಅವರನ್ನು ಯೋಜನೆಯ ವರ್ತುಲದಿಂದ ಹೊರಗಿಟ್ಟು, ದುರ್ಬಲೀಕರಿಸಿ ಈ ದೇಶದ ಪ್ರಗತಿ ಸಾಧ್ಯವೆ?

ಇಷ್ಟಾದರೂ ಜಾಗತೀಕರಣವನ್ನು ಅನಿವಾರ್ಯವೆಂಬಂತೆ ಹಾಡಿಹೊಗಳುವ ಸಂಕೀರ್ತನಕಾರರಿಗೆ, ಮುಖ್ಯವಾಗಿ ನಮ್ಮ ಮಧ್ಯಮವರ್ಗಕ್ಕೆ ''ಜಾಗತೀಕರಣದ ಅತ್ಯಂತ ಸೂಕ್ಷ್ಮ ರಚನಾ ಎಳೆಗಳು ಜಗತ್ತಿನ ಒಟ್ಟು ಜನಸಂಖ್ಯೆಯ ೧೫-೨೦ ಶೇಕಡಾ ಜನರನ್ನು ಈ ಜಗತ್ತಿನ ಭೂಪಟದಿಂದಲೇ ಅಳಿಸಿಹಾಕಿ ನಿರ್ನಾಮ ಮಾಡಿಬಿಡುತ್ತವೆ ಮತ್ತು ಅರೆವಾಸಿಗಿಂತಲೂ ಅಧಿಕ ಮಂದಿಯನ್ನು ನಿರ್ವಿವಾದವಾಗಿ ಸಮಾಜದ ಅಂಚಿಗೆ ತಳ್ಳಿಬಿಡುತ್ತವೆ. ಇಷ್ಟಾಗಿಯೂ ನೀವು ಜಾಗತೀಕರಣ ಬೇಕು ಎನ್ನುವವರಾದರೆ, ನೀವು ಕ್ರೂರಿಗಳು ಮತ್ತು ಪಾಪಿಗಳು (cruel and guilty). ಈ ಕ್ರೌರ್ಯದ ಪಾಪವನ್ನು ಹೊತ್ತುಕೊಂಡೇ ನೀವು ಜಾಗತೀಕರಣವನ್ನು ಇಟ್ಟುಕೊಳ್ಳಿ'' ಎಂದು ಜೋರಿನಿಂದ ಹೇಳಬೇಕಾಗಿದೆ.

ಈ ದೇಶದ ಜಾತಿವ್ಯವಸ್ಥೆ, ದಲಿತರ, ಮಹಿಳೆಯರ ಶೋಷಣೆ, ಗಿರಿಜನರ ಒಕ್ಕಲೆಬ್ಬಿಸುವಿಕೆ ಮುಂತಾದ ಪ್ರಶ್ನೆಗಳಿಗೆ ಜಾಗತೀಕರಣ ಪರಿಹಾರವಾಗಬಲ್ಲುದೇ ಎಂಬುದನ್ನೊಮ್ಮೆ ಅವಲೋಕಿಸಿದರೆ, ಚಿತ್ರಣ ಇನ್ನಷ್ಟು ಮಸುಕುಗೊಳ್ಳುವುದನ್ನು ನಾವು ನೋಡಬಹುದು. ಸಮಾಜದ ಅಂಚಿನಲ್ಲಿ ವಾಸಿಸುತ್ತಿರುವವರ ಬಿಡುಗಡೆಯ ದಾರಿಯಾಗುವ ಬದಲು ಜಾಗತೀಕರಣ, ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿದೆ. ಸಾಮಾಜಿಕ ಬದುಕಿನ ಸಮಾನತೆಯ ಸತ್ವವನ್ನೇ ಕುಗ್ಗಿಸಿ, ಶಿಥಿಲಗೊಳಿಸಿ, ಕೊನೆಯ ಪಕ್ಷ ದುರ್ಬಲರ ಗೌರವದಿಂದ ಬದುಕುವ ಅವಕಾಶವನ್ನೂ



ವಂಚಿಸುತ್ತಿದೆ. ಮೀಸಲಾತಿಯ ಸಾಮಾಜಿಕ ನ್ಯಾಯದ ಆಶಯವನ್ನು ಖಾಸಗೀಕರಣ, ದಕ್ಷತೆ, ಲಾಭಗಳ ಹೆಸರಲ್ಲಿ ಸಂಪೂರ್ಣ ಪರಿಣಾಮಶೂನ್ಯ ಮಾಡಲಾಗುತ್ತಿದೆ. ಈ ಮಂದಿಗೆ ಕನಿಷ್ಠ ಉದ್ಯೋಗ ಅವಕಾಶಗಳಿದ್ದ ಸರಕಾರೀ ಕ್ಷೇತ್ರಗಳೆಲ್ಲ ಖಾಸಗೀಕರಣದ ಹೆಸರಲ್ಲಿ ಇಂದು ಮುಚ್ಚಿಕೊಂಡು ಬರುತ್ತಿವೆ. ತೋರಿಕೆಗೆ ಒಂದೆಡೆ ಮಹಿಳೆಯರಿಗೆ ಉದ್ಯೋಗ ಅವಕಾಶ ಹೆಚ್ಚುತ್ತಿದ್ದಂತೆ ಕಂಡರೂ, ಅವರ ಕಾರ್ಮಿಕ ಹಕ್ಕುಗಳೆಲ್ಲಾ ಮೊಟಕುಗೊಳ್ಳುತ್ತಿದ್ದು, ಅವರು 'ಬಾಂಡೆಡ್ ಲೇಬರ್' ರೀತಿಯಲ್ಲಿ ದುಡಿಯಬೇಕಾದ ಸನ್ನಿವೇಶ ನಿರ್ಮಾಣವಾಗುತ್ತಿದೆ. ಉದ್ಯೋಗ ಕ್ಷೇತ್ರದಲ್ಲಿ ಮೇಲ್ವರ್ಗದವರು ತೆರವು ಮಾಡಿದ ಖಾಲಿ ಜಾಗಗಳು ಮಾತ್ರ ಕೆಳವರ್ಗಕ್ಕೆ ಲಭ್ಯವಾಗುತ್ತಾ, ಈ ಕೊನೆಯಿರದ 'ಕ್ಯಾಚಿಂಗ್ ಅಪ್' ಓಟದಲ್ಲಿ ವರ್ಗವರ್ಗಗಳ ನಡುವಿನ ವಿಷಮತೆಯ ವ್ಯಾಪ್ತಿ ಹೆಚ್ಚುತ್ತಿದೆ. ಒಂದು ಅಂಕಿ ಅಂಶ ಪ್ರಕಾರ, ಸಮಾಜದ ಮೇಲ್‌ಸ್ತರದಲ್ಲಿರುವ ೨೦ ಶೇಕಡಾ ಮತ್ತು ಅತ್ಯಂತ ಕೆಳಸ್ತರದಲ್ಲಿರುವ ೨೦ಶೇಕಡಾ ಮಂದಿಯ ಸರಾಸರಿ ತಲಾ ಆದಾಯಗಳ ನಡುವೆ ೧೯೬೦ರಲ್ಲಿ ೩೦:೧ ಅಂತರವಿದ್ದರೆ, ೧೯೯೦ರಲ್ಲಿ ಇದು ೬೦:೧ಕ್ಕೆ ದ್ವಿಗುಣಗೊಂಡು ೧೯೯೭ರಲ್ಲಿ ಈ ಅಂತರ ೭೪:೧ನ್ನು ತಲುಪಿದೆ.

ದಲಿತರ ಕೆಳಪಯಣ, ಈ ಜಾಗತಿಕ ಆರ್ಥಿಕ ಸಂದರ್ಭದಲ್ಲಿ ಇನ್ನೂ ಭೀಕರವಾದದ್ದು. ಅವರು ಈ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಅಂಚಿಗೆ ತಳ್ಳಲ್ಪಡುತ್ತಿದ್ದಾರೆ. ಜಾಗತೀಕರಣವು ದಲಿತರ ಉದ್ಯೋಗಾವಕಾಶ ಹೆಚ್ಚಿಸುತ್ತದೆ ಎಂದು ನಂಬಿಸಲಾಗುತ್ತಿದೆ. ಆದರೆ ತಳಮಟ್ಟದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ, ಈ ಮಾತಿನ ಪೊಳ್ಳುತನ ಬಯಲಾಗದಿರದು. ಉದಾಹರಣೆಗೆ, ಒಂದೆಡೆ ಸುಲಭ ಶೌಚಾಲಯ, ರ್‍ಯಾಗ್ ಪಿಕಿಂಗ್ ಮುಂತಾದ ಹೊಸ ಕ್ಷೇತ್ರಗಳಲ್ಲಿ ಅವಕಾಶ ಹೆಚ್ಚುತ್ತಿದೆ ಎನ್ನಲಾಗುತ್ತಿದೆ. ಹೆಚ್ಚುತ್ತಿರುವ ಸುಲಭ ಶೌಚಾಲಯಗಳಲ್ಲಿ ಜಾತಿವ್ಯವಸ್ಥೆ ಭದ್ರಗೊಳ್ಳುತ್ತಿರುವುದನ್ನೂ ನಾವು ಇನ್ನೊಂದೆಡೆ ಗಮನಿಸಬಹುದು. ಸುಲಭ ಶೌಚಾಲಯವನ್ನು ಮೇಲ್ವರ್ಗ ಗುತ್ತಿಗೆ ತೆಗೆದುಕೊಂಡರೆ ಹಿಂದುಳಿದ ವರ್ಗ ಅದರ ಆಡಳಿತ ನಡೆಸುತ್ತಿದೆ. ಅವನ್ನು ಸ್ವಚ್ಛಗೊಳಿಸುವ ತೋಟಿ ಕೆಲಸವನ್ನು ಇಂದೂ ಅಂತ್ಯಜರೆನಿಸಿಕೊಂಡವರೇ ಮಾಡುತ್ತಿದ್ದಾರೆ. ರ್‍ಯಾಗ್ ಪಿಕಿಂಗ್‌ನಲ್ಲೂ – 'ವೆಟ್ ರ್‍ಯಾಗ್ ಪಿಕಿಂಗ್', 'ಡ್ರೈ ರ್‍ಯಾಗ್ ಪಿಕಿಂಗ್' ಗಳಲ್ಲಿ ವೈಷಮ್ಯವಿದ್ದು, ಕನಿಷ್ಠವೆನಿಸಿದ 'ವೆಟ್ ರ್‍ಯಾಗ್ ಪಿಕಿಂಗ್' ದಂಧೆಯನ್ನು ದಲಿತರೇ ಮಾಡಬೇಕಾದ ಪರಿಸ್ಥಿತಿ ಇದೆ.

ಇನ್ನೊಂದೆಡೆ ಅವರ ಇದ್ದ ಉದ್ಯೋಗಾವಕಾಶಗಳು ವಿಚಿತ್ರ ರೀತಿಯಲ್ಲಿ ಕೈ ತಪ್ಪಿ ಹೋಗುವುದನ್ನೂ ಗಮನಿಸಬಹುದು. ಸಮಾಜದಲ್ಲಿ ಅತ್ಯಂತ ಅವಮಾನಕರ ವೆಂದು ಪರಿಗಣಿಸಲ್ಪಡುವ ಊರಿನ ಘನ ತ್ಯಾಜ್ಯ ವಿಲೇವಾರಿ, ಮಲಮೂತ್ರ ವಿಲೇವಾರಿ

ಮುಂತಾದ ಉದ್ಯೋಗವನ್ನು ದಲಿತರು ಮಾತ್ರ ಮಾಡುವ ಹೀನ ಪರಿಸ್ಥಿತಿಯಿತ್ತು. ತಂತ್ರಜ್ಞಾನದ ಬಲದಿಂದ ಅವು ಇಂದು, 'ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್' 'ಸೂವೇಜ್ ಟ್ರೀಟ್‌ಮೆಂಟ್' ಎಂಬ ತಂತ್ರಜ್ಞಾನಗಳಾಗಿ ಪರಿವರ್ತನೆಗೊಂಡು, ಆ ಕೆಲಸ ಘನತೆ-ಗೌರವಗಳ ಸ್ಥಾನ ಪಡೆದುಕೊಳ್ಳುತ್ತಿದೆ. ಇದು ಅತ್ಯಂತ ಸ್ವಾಗತಾರ್ಹ ಸಂಗತಿ. ಆದರೆ ಈ ಕೆಲಸಗಳು ಘನತೆ-ಗೌರವಗಳನ್ನು ಪಡೆದುಕೊಳ್ಳುತ್ತಿರುವಂತೆಯೇ ಈ ಕೆಲಸಗಳೇ ಮೇಲ್ಮುಖ ಚಲನೆಗೆ ಆರಂಭಿಸಿ ದಲಿತರ ಕೈ ತಪ್ಪಿ, ತಂತ್ರಜ್ಞಾನ ಮ್ಯಾನೇಜ್‌ಮೆಂಟ್ ಆಗಿ ಮೇಲ್ವರ್ಗದ ತಜ್ಞರಿಗೆ ವರ್ಗಾಯಿಸಲ್ಪಡುತ್ತಿರುವುದನ್ನೂ ನಾವು ಗಮನಿಸಬಹುದು. ದಲಿತರ ಅವಕಾಶಗಳು ನಿಜವಾದ ಅರ್ಥದಲ್ಲಿ ಕುಸಿಯುತ್ತ ಬರುತ್ತಿರುವುದಂತೂ ಸ್ಪಷ್ಟ.

ಪಟ್ಟಣಗಳಲ್ಲಿ 'ಫ್ಲೈ ಓವರ್ಸ್ ' ಗಳ ನಿರ್ಮಾಣ ಇಂದು ಹೆಚ್ಚುತ್ತಿದ್ದು, ಅವುಗಳಲ್ಲಿ ಉದ್ಯೋಗ ಅವಕಾಶಗಳು ಹೆಚ್ಚುತ್ತಿವೆ. ಆದರೆ ಅವುಗಳ ನಿರ್ಮಾಣ ಕಾರ್ಯದಲ್ಲಿ ದಲಿತರು ಹಿಂದುಳಿದವರು ಅತ್ಯಂತ ಕನಿಷ್ಠ ಪರಿಸ್ಥಿತಿಯಲ್ಲಿ ತಮ್ಮನ್ನೇ ತಾವು ಶೋಷಿಸಿಕೊಳ್ಳುತ್ತ ಏನೊಂದೂ ಭದ್ರತೆಯಿಲ್ಲದೆ ರಾತ್ರಿ ಹಗಲು ದುಡಿಯುತ್ತಿದ್ದಾರೆ. ದಲಿತರು ಕಾಲ – ದೇಶಗಳೆರಡರಲ್ಲೂ ಒತ್ತಡಕ್ಕೊಳಗಾಗುತ್ತಿದ್ದಾರೆ.

ಪ್ರಸಿದ್ಧ ಸಮಾಜ ಶಾಸ್ತ್ರಜ್ಞರಾದ ಪೂನಾ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಪ್ರೊಫೆಸರ್ ಪ್ರೊ. ಗೋಪಾಲ್ ಗುರು ಉಡುಪಿಗೆ ಬಂದಾಗ ಒಂದು ಆತಂಕದ ವಿಷಯ ತಿಳಿಸಿದರು. ಮುಂಬಯಿಯಲ್ಲಿ ಇಂದು ಮ್ಯಾಕ್‌ಡೊನಾಲ್ಡ್ ಕಂಪೆನಿಯಂಥ ದೊಡ್ಡ ದೊಡ್ಡ ಆಹಾರ ವಸ್ತು ತಯಾರೀ ಕಂಪೆನಿಗಳು, ಉದ್ಯೋಗನಿರತರಿಗೆ ಮಧ್ಯಾಹ್ನ ಊಟದ ಬುತ್ತಿಯನ್ನು ತಯಾರಿಸಿ ಅವರವರು ಕೆಲಸಮಾಡುವ ಜಾಗಕ್ಕೇ ರವಾನಿಸುವ ವ್ಯವಸ್ಥೆ ಆರಂಭಿಸಿವೆ. ಇದೊಂದು ದೊಡ್ಡ ಕೈಗಾರಿಕೆಯಾಗಿಯೇ ಬೆಳೆಯುತ್ತಿದ್ದು, ಈ ಬುತ್ತಿಗಳನ್ನು ವಿತರಿಸುವ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಹೆಚ್ಚುತ್ತಿರುವುದು ನಿಜ. ಈ ವಿತರಕರನ್ನು 'ಡಿಬ್ಬಾವಾಲಾಸ್' ಎಂದು ಕರೆಯುತ್ತಾರೆ. ಆದರೆ ಈ ಡಿಬ್ಬಾವಾಲಾಸ್ ಯಾರು, ಯಾವ ವರ್ಗದಿಂದ ಬಂದವರು ಎಂದು ಗಮನಿಸಿದಾಗ, ಅವರಲ್ಲಿ ಒಬ್ಬರೂ ದಲಿತರಿರಲಿಲ್ಲ. ಈ ದೇಶದ ಜಾತಿವ್ಯವಸ್ಥೆಯ ಮಡಿ-ಮೈಲಿಗೆ ನಂಬಿಕೆಯಿಂದಾಗಿ, ದಲಿತರು ಬೇಯಿಸಿದ ಅಥವಾ ಮುಟ್ಟಿದ ಆಹಾರ ಮೈಲಿಗೆಯೆಂದು ಪರಿಗಣಿಸಲ್ಪಟ್ಟದ್ದರಿಂದ ಬೇರೆ ಜಾತಿಯವರು ಅದನ್ನು ಮುಟ್ಟುವುದಿಲ್ಲ. ಹಾಗಾಗಿ, ಈ ಅವಮಾನಕರ ಸಾಮಾಜಿಕ ನಂಬಿಕೆ, ಏನೊಂದೂ ಆತಂಕವಿಲ್ಲದೆ ಜಾಗತೀಕರಣ ಯುಗದಲ್ಲೂ ಮುಂದುವರಿಯುತ್ತಿದೆ. ಯಾವುದೇ ವ್ಯಾಪಾರೀ ಕಂಪೆನಿ ಯಾವಾಗಲೂ ವ್ಯಾಪಾರದ ತನ್ನ ಸ್ವಾರ್ಥದ ದೃಷ್ಟಿಯಿಂದ ಒಂದು ಪ್ರದೇಶದ ಸ್ಥಳೀಯ ನಂಬಿಕೆ, ಸಾಮಾಜಿಕ



ವ್ಯವಸ್ಥೆಗಳನ್ನು ಕೆದಕಲು ಹೋಗುವುದಿಲ್ಲ. ಪ್ರಾಯಃ ಅವು ಆ ಶೋಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸುತ್ತಿರುತ್ತವೆ. ಈ ಎಲ್ಲ ವಿದ್ಯಮಾನಗಳ ಮೊತ್ತವಾಗಿ ದಲಿತರು ಬದುಕಿಕೊಂಡು ಬಂದ ಬಹುಮುಖೀ ಜೀವನಕ್ರಮ, ಸಮಾಜ, ಆರ್ಥಿಕ ಕಸುಬು - ಉಪಕಸುಬುಗಳೂ ಜಾಗತೀಕರಣ ಸಂದರ್ಭದಲ್ಲಿ ನಾಶವಾಗುತ್ತ ಮೇಲ್ವರ್ಗದ ಏಕಮಾದರಿಯ ಸಾಂಸ್ಕೃತಿಕ ಬದುಕಿನ ಶೈಲಿಯನ್ನು ಅನಿವಾರ್ಯವಾಗಿ ಅಪ್ಪಿಕೊಳ್ಳಬೇಕಾದ ಪರಿಸ್ಥಿತಿಯಿಂದ, ತಾವು ಸತತವಾಗಿ ಛಿದ್ರೀಕರಣಕ್ಕೊಳಗಾಗುತ್ತ, ಮತ್ತಷ್ಟು ವಿಫಲರಾಗುತ್ತ, ಸೊರಗುತ್ತ ಬರುತ್ತಿದ್ದಾರೆ.

ಜಾಗತೀಕರಣದ ಪ್ರಭುಶಕ್ತಿಯ ಒತ್ತಡಕ್ಕೆ ಮಣಿದು, ಸರಕಾರಗಳು ಸಂವಿಧಾನದಲ್ಲಿ ನಮೂದಿಸಿದ 'ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್‌ಸ್ಟೇಟ್ ಪಾಲಿಸಿ' ಯಲ್ಲಿ ಸೂಚಿಸಿದ ಸಮಸುಖೀ ರಾಜ್ಯ ಕಟ್ಟುವ ಸಾಮಾಜಿಕ ಜವಾಬ್ದಾರಿಯನ್ನೇ ಬಿಟ್ಟುಕೊಟ್ಟು, ಸಮಾಜದಲ್ಲಿ ದ್ವೀಪದಂತಿರುವ ಶ್ರೀಮಂತ ಲೋಕಕ್ಕೆ ಸಾಮಾನ್ಯ ಪ್ರಜಾವರ್ಗಗಳನ್ನು ಅಡಿಯಾಳಾಗಿಸಲಿಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವ ಆಡಳಿತ ಕೆಲಸಕ್ಕಷ್ಟೇ ಸೀಮಿತಗೊಂಡಿವೆ. ಬದುಕಿನ ಕನಿಷ್ಠ ಸೌಲಭ್ಯಗಳಾದ ಆಹಾರ ಭದ್ರತೆ, ಹಸಿವಿನಿಂದ ರಕ್ಷಣೆ, ಸಾರ್ವತ್ರಿಕ ಆರೋಗ್ಯ, ಶಿಕ್ಷಣ ಸೌಲಭ್ಯ ಪೂರೈಕೆ ಮುಂತಾದ ತನ್ನ ಮೂಲಭೂತ ಜವಾಬ್ದಾರಿಗಳನ್ನೂ ಬಿಟ್ಟುಕೊಟ್ಟು, ಜಾಗತಿಕ ಶಕ್ತಿಗಳಿಗೆ ಪೂರಕವಾಗಿ ಜನರ ಬದುಕುವ ಹಕ್ಕನ್ನೇ ಸೂಕ್ಷ್ಮವಾಗಿ ನಿರಾಕರಿಸುವ ಸರಕಾರಗಳ ಅತ್ಯಂತ ಸೂಕ್ಷ್ಮ ವಿಧಿ-ವಿಧಾನಗಳನ್ನು ಗಮನಿಸಿದರೆ, ಪ್ರಜಾಪ್ರಭುತ್ವವು ಪ್ರಜೆಗಳ ರಾಜಕೀಯ, ಸಾಮಾಜಿಕ ಬಲಿಷ್ಠೀಕರಣ ಪ್ರಕ್ರಿಯೆಯಾಗಿ ಸಂಪೂರ್ಣ ಸೋಲುತ್ತಿರುವುದು ವ್ಯಕ್ತವಾಗದಿರದು.

ಜಾಗತಿಕ ಮಾರುಕಟ್ಟೆ ಮೀಮಾಂಸೆಯಲ್ಲಿ ದೀರ್ಘಾವಧಿಯ ಜನಹಿತ ದರ್ಶನವೇ ಇಲ್ಲ; ಮಾತ್ರವಲ್ಲ, ಸಾಮಾಜಿಕ ಹೊಣೆಯೇ ಇಲ್ಲದ ವ್ಯವಸ್ಥೆಗೆ ತನಗೆ ತಾನೇ ಸಾಮಾಜಿಕ ತಿರುವು ಕೊಟ್ಟುಕೊಳ್ಳುವ ಗುರಿ ಅಥವಾ ಸ್ವಯಂ ಸೌಲಭ್ಯ ಕೂಡ ಇಲ್ಲ. ಈ ಪರಿಸ್ಥಿತಿಯಲ್ಲಿ, ಬಹುರಾಷ್ಟ್ರೀಯ ಕಂಪೆನಿಗಳು ನಮ್ಮ ನೆಲದಲ್ಲಿ ಸಾಮಾಜಿಕ ನ್ಯಾಯ ಸಮಾನತೆಗಳಿಗೆ ಪ್ರಾಶಸ್ತ್ಯ ಕೊಟ್ಟಾವೇ? ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಕೊನೆಯ ಪಕ್ಷ ಜನತಂತ್ರ ಸರಕಾರವಾದರೂ ತನ್ನ ಖಚಿತ ಸಾಮಾಜಿಕ ಧೋರಣೆಗಳ ಮೂಲಕ ಈ ಶಕ್ತಿಗಳನ್ನು ಜನಹಿತ ಆಶಯಗಳನ್ನು ಪೂರೈಸುವಂತೆ ಒತ್ತಾಯಿಸುವಲ್ಲಿ ಕಟ್ಟುನಿಟ್ಟಾಗಿ ವರ್ತಿಸಬೇಕು; ಮತ್ತು ಜನರನ್ನು ಶೋಷಕ ಶಕ್ತಿಗಳಿಂದ ರಕ್ಷಿಸಲು ಪ್ರಜೆಗಳ ಬಗ್ಗೆ ಮೃದು ಧೋರಣೆ ತಳೆಯಬೇಕು. ಇದು ಒಂದು ಪುರೋಗಾಮೀ ಸರಕಾರದ ಪ್ರಮುಖ ಜವಾಬ್ದಾರಿಯಾಗಿದೆ. ಆದರೆ ಸ್ವಾರಸ್ಯವೆಂದರೆ ಸರಕಾರವು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾ ಜನರ ವಿರುದ್ಧ ಕಟ್ಟುನಿಟ್ಟಾಗಿಯೂ,

ಬಹುರಾಷ್ಟ್ರೀಯ ಕಂಪೆನಿಗಳಿಗೆ ಬೇಕಾದ ಅನುಕೂಲ ಮಾಡಿಕೊಡುವಲ್ಲಿ ಮೃದುವಾಗಿಯೂ ವರ್ತಿಸುತ್ತಿದೆ.

### ೨: ಸಂಬಂಧಗಳು

ಪರ್ಯಾಯಗಳ ಬಗ್ಗೆ ಅವಲೋಕಿಸುವ ಮೊದಲು, ಜಾಗತೀಕರಣದ ಜತೆ ಸೂಕ್ಷ್ಮವಾಗಿ ಸಾವಯವ ಸಂಬಂಧ ಹೊಂದಿರುವ ಒಂದು ಪ್ರಮುಖ ಪ್ರಸ್ತುತ ವಿದ್ಯಮಾನವನ್ನು ಆತಂಕಪೂರ್ವಕವಾಗಿ ಪ್ರಸ್ತಾಪಿಸಿ ಮುಂದುವರಿಯುತ್ತೇನೆ.

ಜಾಗತೀಕರಣ ಮತ್ತು ಮತೀಯ ಮೂಲಭೂತವಾದವು ಅನೇಕ ಸಾಮ್ಯ ಲಕ್ಷಣಗಳಿಂದ ಒಂದನ್ನೊಂದು ಪೋಷಿಸಿಕೊಂಡಿರುವ ಮತ್ತು ಪರಸ್ಪರ ಶಕ್ತಿಯನ್ನು ಪಡೆದುಕೊಳ್ಳುತ್ತಿರುವ ಇಂದಿನ ಪ್ರಮುಖ ವಿದ್ಯಮಾನವಾಗಿದೆ. ಮತೀಯ ಮೂಲಭೂತವಾದದ ನೆಲೆ ಧರ್ಮವಾದರೆ, ಜಾಗತೀಕರಣದ ಮೂಲನೆಲೆ ವಿಜ್ಞಾನ. ಧರ್ಮ ಮತ್ತು ವಿಜ್ಞಾನಗಳು, ಉದಾತ್ತಾರ್ಥದಲ್ಲಿ ಸತ್ಯಶೋಧನೆಯ ಮಾರ್ಗವಾಗಿ ಬಿಡುಗಡೆಯತ್ತ ಮುನ್ನಡೆಸುವವುಗಳು. ಆದರೆ ಇವು ಎರಡೂ ಸ್ವಹಿತಾಸಕ್ತಿಗಳಿಂದ ದುರ್ಬಳಕೆಗೊಳಪಟ್ಟು, ಮೂಲಗುಣ ಕಳಕೊಂಡು ಭ್ರಷ್ಟಗೊಂಡಿವೆ. ಧರ್ಮವು ಸಾಂಸ್ಥೀಕರಣಗೊಂಡು ಮತೀಯ ಕಟ್ಟುನಿಟ್ಟಿನ ಅಂಧ ಮತಾಚರಣೆಗಳಾಗಿ ಭ್ರಷ್ಟಗೊಳ್ಳುತ್ತಾ ಹೋಯಿತು. ಮುಂದೆ ಮತ-ಮತಗಳ ಮೇಲಾಟದಲ್ಲಿ ಧರ್ಮವು ಕೇವಲ ಮತೀಯ ಮೂಲಭೂತವಾದಿಗಳ ಗುಂಪುಗಳಾಗಿ ಹರಳುಗಟ್ಟುತ್ತಾ ಹೋಗಿ ಜಡ್ಡುಗಟ್ಟಿತು. ಇತ್ತ ವಿಜ್ಞಾನವು ವಾಣಿಜ್ಯ ಹಿತಾಸಕ್ತಿಗಳಿಂದ, ಸುಖಭೋಗಗಳನ್ನು ತಣಿಸುವ ತಂತ್ರಜ್ಞಾನವಾಗಿ, ಮುಂದೆ ಕೇವಲ ನಿಯಂತ್ರಣಾತೀತ ಮಾರುಕಟ್ಟೆ ಆಧಾರಿತ ಅಭಿವೃದ್ಧಿ ಮಾದರಿಯನ್ನು ಪೋಷಿಸುವ ಸಾಧನವಾಗಿ, ಕೊನೆಯಲ್ಲಿ ಅಂತಃನಿರೀಕ್ಷಣೆಯೇ ಇಲ್ಲದ ಉಪಭೋಗವಾದ (Consumerism) ವನ್ನು ಪೋಷಿಸುವ ಕೈಂಕರ್ಯಕ್ಕೆ ಇಳಿಯಿತು. ಕನ್ಸ್ಯೂಮರಿಸಂನ ವಿಕಾರಮುಖವಾದ ಜಾಗತೀಕರಣ ವೊಂದೇ ಅಭಿವೃದ್ಧಿಯ ಮಾರ್ಗವೆನ್ನುವ ಧೋರಣೆಯಿಂದ ವಿಜ್ಞಾನವೂ ತರ್ಕಾತೀತ ವಾಗಿ ಒಂದರ್ಥದಲ್ಲಿ ಮೂಲಭೂತವಾದವೇ ಆಗಿ ಪರಿವರ್ತನೆಯಾಯಿತೆನ್ನಬಹುದು.

ಕೋಮುವಾದ ಮತ್ತು ಜಾಗತೀಕರಣ – ಇವು ಎರಡೂ ತಮ್ಮ ತಮ್ಮ ಆಸಕ್ತಿಗಳನ್ನು ಕಾಪಾಡಿಕೊಳ್ಳಲು ಮತ್ತು ಜಗತ್ತನ್ನು ತಮ್ಮ 'ಎಜೆಂಡಾ'ಗಳಿಗಾಗಿ ನಿಯಂತ್ರಿಸಲು, ಎಲ್ಲ ರೀತಿಯ ಆರ್ಥಿಕ - ಸಾಮಾಜಿಕ ವೈವಿಧ್ಯತೆಯನ್ನೂ ಬಹುಮುಖೀ ಸಾಂಸ್ಕೃತಿಕ ಸಮಾಜವನ್ನೂ ವಿರೋಧಿಸುತ್ತಾ, ವಿಕೃತಗೊಳಿಸುತ್ತಾ ತಮಗೆ 'ಮ್ಯಾನೇಜ್' ಮಾಡಲು ಸಾಧ್ಯವಾಗಬಲ್ಲ ಏಕರೂಪದ ಪ್ರಬಲರಾಷ್ಟ್ರವನ್ನಾಗಿ (ho-



mogeneous strong nation) ಪಲ್ಲಟಿಸಲು ಶಪಥ ತೊಡುತ್ತವೆ. ತಮ್ಮ ಮೂಲ ಸ್ವರೂಪಗಳಲ್ಲೇ ಇವು 'ತಾನು' - 'ಅದು' ಎಂದು ವಿಭಜಿಸುತ್ತಾ 'ಅದನ್ನು', 'ತಾನು' ನಿಯಂತ್ರಿಸಿ ಇಚ್ಛಾನುಸಾರ ಭೋಗಿಸಲು ಬೇಕಾದ ಶಕ್ತಿಯನ್ನು ತನ್ನಲ್ಲಿ ಕೇಂದ್ರೀಕೃತಗೊಳಿಸಲು ಹುನ್ನಾರಗಳನ್ನು ನಡೆಸುತ್ತಿರುತ್ತವೆ. ನಿಯಂತ್ರಣಾತೀತ ಶಕ್ತಿಯ ಉಪಾಸನೆ ಮಾಡುವ ಈ ಎರಡೂ ಜಾಗತಿಕ ಪ್ರವೃತ್ತಿಗಳು ದಮನ-ದಬ್ಬಾಳಿಕೆಗಳಿಗೆ ಧರ್ಮ, ವಿಜ್ಞಾನಗಳನ್ನು ಬಳಸಿಕೊಳ್ಳುತ್ತವೆ.

ಇದಕ್ಕೆ ಪೂರಕವಾಗಿ, ವ್ಯವಸ್ಥೆಯನ್ನು ಸ್ಥಿರೀಕರಿಸಿಕೊಳ್ಳಲಿಕ್ಕಾಗಿ ಈ ಜಾಗತಿಕ ಸಮಾಜ ಶಿಕ್ಷಣವನ್ನೂ ತನ್ನ ತತ್ವ ಮೀಮಾಂಸೆಯನ್ನೇ ಪರೋಕ್ಷವಾಗಿ ದಾಟಿಸುವ ಮಾಧ್ಯಮವಾಗಿ ರೂಪಾಂತರಿಸುವ ಮೂಲಕ ಜನರಿಗೆ ಈ ಜಾಗತಿಕ ಅರ್ಥವ್ಯವಸ್ಥೆಯೇ ಸರಿಯೆನ್ನುವ ನಿರ್ದಿಷ್ಟ ಲೋಕದೃಷ್ಟಿಯನ್ನು ಕೊಡುತ್ತದೆ. ''ಎಡ್ವರ್ಡ್ ಸೈದ್, ಫ್ರಾಂಜ್ ಫ್ಯಾನನ್ ಮುಂತಾದ ಚಿಂತಕರು ಅಭಿಪ್ರಾಯಪಡುವಂತೆ ಈ ನೋಟಕ್ರಮದಲ್ಲಿ ವಸಾಹತೀಕರಣದ ರಾಜಕಾರಣದಿಂದ ಪ್ರತ್ಯೇಕವಾಗಿ ಉಳಿಯುವ ಸಾಂಸ್ಕೃತಿಕ ರಚನೆಗಳೇ ಇಲ್ಲ. ವಸಾಹತೀಕರಣದ ಜಾಗತಿಕ ಶಕ್ತಿಗಳು, ವಸಾಹತೀಕೃತ ದೇಶೀ ಸಂಸ್ಕೃತಿ-ಸಮಾಜಗಳ ಮೇಲೆ ಪೂರ್ಣ ಸಾಂಸ್ಕೃತಿಕ, ರಾಜಕೀಯ ದಿಗ್ವಿಜಯವನ್ನು ಸಾಧಿಸುತ್ತವೆ'' (ಸಾಹಿತ್ಯ ಕಥನ - ಡಾ| ಡಿ.ಆರ್. ನಾಗರಾಜ್. ಆದರೆ, ತೃತೀಯ ಜಗತ್ತಿನಲ್ಲಿರುವ ಅಸಂಖ್ಯ ದೇಶೀ ಆಕೃತಿಗಳ ಶಕ್ತಿಯ ಬಗ್ಗೆ ಗಾಢ ವಿಶ್ವಾಸವಿದ್ದ ಡಿ.ಆರ್., ತಾನು ಸ್ವತಃ ಈ ವಾದವನ್ನು ಒಪ್ಪುವುದಿಲ್ಲ). ಈ ನೋಟಕ್ರಮದ ಪ್ರಮುಖ ಪರಿಣಾಮವೇನೆಂದರೆ ಬಹುಮುಖೀ ಆಯ್ಕೆಗಳ ಕಣ್ಮರೆ. ವಿಭಿನ್ನ ರೀತಿಯ ಆರ್ಥಿಕ, ಸಾಮಾಜಿಕ ಬದುಕಿನ ಕ್ರಮಗಳನ್ನೂ ಬದುಕಿನ ಏಳಿಗೆಯ ವಿವಿಧ ಸಾಧ್ಯತೆಗಳನ್ನೂ ಮತ್ತು ಮಾನವ ಸಮಾಜದ ಶ್ರೇಯೋಭಿವೃದ್ಧಿಗೆ ಅನೇಕಾನೇಕ ದಾರಿಗಳಿವೆ ಎಂಬುದನ್ನು ಅನ್ವೇಷಿಸುವ, ಕನಸು ಕಾಣುವ ಶಕ್ತಿಯನ್ನೂ ನಾವಿಂದು ಕಳಕೊಂಡಿದ್ದೇವೆ; ಮಾತ್ರವಲ್ಲ, ಪ್ರಗತಿಯ ನಿರ್ದಿಷ್ಟ ಸಿದ್ಧಾಂತಕ್ಕೇ ಆತುಬಿದ್ದು ಮಾನವ ಜನಾಂಗದ ಭವಿಷ್ಯವನ್ನೇ ಮುಚ್ಚಿಕೊಳ್ಳುತ್ತ ಬರುತ್ತಿದ್ದೇವೆ ಎಂದು ಆಶೀಸ್ ನಂದಿ ಅಭಿಪ್ರಾಯಪಡುತ್ತಾರೆ. ಇದರ ಆತ್ಯಂತಿಕ ಸ್ಥಿತಿಯೇ 'ಸಾಂಸ್ಕೃತಿಕ ಶೂನ್ಯತೆ'. ಹಾಗಾಗಿಯೇ ಈ ಶಿಕ್ಷಣ ವ್ಯವಸ್ಥೆಯಲ್ಲಿ ಮನುಷ್ಯ ತನ್ನತನದಿಂದ ಪರಕೀಯನಾಗಿ, 'ಐಡೆಂಟಿಟಿ' ಕಳಕೊಂಡು, ಅಭದ್ರನಾಗುತ್ತಿದ್ದಾನೆ; ಮತ್ತು, ತನ್ನ ಮಾನಸಿಕ ಅಭದ್ರತೆಯನ್ನು ಪರಿಹರಿಸಿಕೊಳ್ಳುವ ಉಪಾಯವಾಗಿ ಏಕಕಾಲದಲ್ಲಿ ಕೊಳ್ಳುಬಾಕನೂ ಧಾರ್ಮಿಕ ಮತಾಂಧನೂ ಆಗಿ ರೂಪಾಂತರ ಹೊಂದುತ್ತಿದ್ದಾನೆ. ಆರ್ಥಿಕವಾಗಿ, ಸಾಮಾಜಿಕವಾಗಿ ದಿಕ್ಕು ಕೆಟ್ಟು ಕಂಗಾಲಾದವನಲ್ಲಿ ಮತೀಯ ಗುಂಪುಗಳು ಧರ್ಮೀಯ ಅಥವಾ ಜನಾಂಗೀಯ ಕಲ್ಪಿತ

ಐಡೆಂಟಿಟಿಯನ್ನು ಪ್ರತಿಷ್ಠಾಪಿಸಿ ಬಿಡುವುದು ಬಹಳ ಸುಲಭದ ಕೆಲಸ. ಇಂದು ಅನೇಕ ನಿರುದ್ಯೋಗೀ ಯುವಕ-ಯುವತಿಯರು ಬಹುಬೇಗ ಉದ್ರೇಕಕಾರೀ ಮತಾಂಧ ಒತ್ತಾಸೆಗಳಿಗೆ ಹತಾಶೆಯಿಂದಲೇ ಬಲಿಬೀಳುತ್ತಿರುವುದನ್ನು ನಾವು ಗಮನಿಸಬಹುದು. ಇದನ್ನು ಗಮನಿಸುವಾಗ ನಿಜಕ್ಕೂ ಜಗತ್ತಿನಲ್ಲಿ ಆಧುನಿಕತೆಗೆ ವಿರೋಧವಾಗಿ ಇಸ್ಲಾಂ ಮತಾಂಧತೆ ಹುಟ್ಟಿಕೊಂಡಿರಬಹುದೇ, ಮತ್ತು ಭಾರತದಲ್ಲಿ ಮೂಲಭೂತವಾದವೇ ಆಧುನಿಕತೆಯ ಪ್ರಕಟರೂಪವಿರಬಹುದೇ ಎಂಬ ಜಿಜ್ಞಾಸೆ ಒಂದರೆಕ್ಷಣ ನನ್ನ ಮನಸ್ಸಿನಲ್ಲಿ ಮೂಡಿ ಮಾಯವಾಗುತ್ತದೆ. (ಈ ಮಹತ್ವದ ಚರ್ಚೆ, ನನ್ನ ಈ ಬರಹದ ಮೂಲ ಉದ್ದೇಶವಲ್ಲವಾದ್ದರಿಂದ, ಅದನ್ನು ಹೆಚ್ಚು ವಿಸ್ತೃತವಾಗಿ ಮುಂದುವರಿಸುವುದಿಲ್ಲ.)

ಈ ನೆಲದ ಆರ್ಥಿಕ-ಸಾಮಾಜಿಕ ಬಹುತ್ವವನ್ನು ಕಡೆಗಣಿಸಿ ಒಪ್ಪಿಕೊಂಡ ಏಕೀಕೃತ ಅಭಿವೃದ್ಧಿ ಯೋಜನೆ ಮತ್ತು ಇಂದಿನ ಜಾಗತೀಕರಣಗಳು ಪ್ರಜೆಗಳನ್ನು ಹೆಚ್ಚು ಹೆಚ್ಚು ಸಂಕಟಕ್ಕೀಡುಮಾಡುತ್ತಿರುವುದಂತೂ ಖಂಡಿತ. ಐರೋಪ್ಯ ಮಾದರಿಯ ಪ್ರಗತಿ ಸಿದ್ಧಾಂತ ಮನುಷ್ಯನ ಬೇರುಗಳನ್ನು ಬುಡಮೇಲು ಮಾಡುವ ಮೂಲಕ, ಆತನನ್ನು ಸಾಂಸ್ಕೃತಿಕ ವಿಸ್ಮೃತಿಗೆ ಕೆಡವಿ, ಪರೋಕ್ಷವಾಗಿ ಆತನನ್ನು ಮೂಲಭೂತವಾದಿ ಯಾಗಿ ಪರಿವರ್ತಿಸುತ್ತಿದೆಯೇ? ಇದು ನಿಜವಾದರೆ, ಜಾಗತೀಕರಣ ಪ್ರಕ್ರಿಯೆ ಮುಂದುವರಿದಂತೆ ಭಾರತದಲ್ಲಿ ಮತೀಯ ಗಲಭೆ, ಜನಾಂಗೀಯ ಸಂಘರ್ಷಗಳು ಇನ್ನೂ ಉಲ್ಬಣಿಸಿ, ಭವಿಷ್ಯದಲ್ಲಿ ಇನ್ನಷ್ಟು ಗುಜರಾತುಗಳು ನಿರ್ಮಾಣವಾದಾವೇ? ದೇಶದಲ್ಲಿ ಮತೀಯ ಮೂಲಭೂತವಾದಿಗಳು, ವಿಭಜನಾವಾದಿಗಳು ಮೇಲ್ಗೈ ಸಾಧಿಸಿಯಾರೇ? ನಾಗರಿಕ ಸಮಾಜ ಸಂಪೂರ್ಣ ಭಗ್ನಗೊಂಡು ಕುಸಿದು ಬೀಳಬಹುದೇ? ಭಾರತ ಎರಡು ನಾಗರಿಕತೆಗಳಾಗಿ ಒಡೆದು ನಾಗರಿಕ ಸಂಘರ್ಷಕ್ಕೆಡೆಮಾಡಿಕೊಡಬಹುದೇ? ಇವು ನನ್ನ ಆತಂಕದ ವೈಯಕ್ತಿಕ ಪ್ರಶ್ನೆಗಳು.

### ೩. ಪರ್ಯಾಯ ಸಾಧ್ಯತೆಗಳು : ಗಾಂಧಿ

ಜಾಗತೀಕರಣಕ್ಕೆ ಪರ್ಯಾಯ ಎಂಬುದು ಬದಲಾವಣೆಯ ಭಾಷೆಯಲ್ಲ. ೧೯೮೦ ರಿಂದೀಚೆ 'ರ್‍ಯಾಡಿಕಲ್' ರಾಜಕೀಯವು ಈ ದೇಶದಲ್ಲಿ ಇಳಿಮುಖವಾಗುತ್ತಿದ್ದಂತೆ ಚಾಲ್ತಿಗೆ ಬಂದ ಪರಿಕಲ್ಪನೆಯಿದು. ಈಗ ಇರುವ ರಾಜಕೀಯ ಪ್ರಕ್ರಿಯೆ, ಚಿಂತನೆ, ನಿರ್ಮಿತಿಗಳೊಳಗೇನೇ, ಮನುಷ್ಯ ಮತ್ತು ವಸ್ತುಪರಿಕರಗಳನ್ನು ಬೇರೆ ರೀತಿಯಲ್ಲಿ ಜೋಡಿಸುವುದನ್ನಷ್ಟೇ ಈ ಪರಿಕಲ್ಪನೆ ಸೂಚಿಸುತ್ತದೆ. ಹಾಗಾಗಿ ಜಾಗತೀಕರಣಕ್ಕೆ ಪರ್ಯಾಯ ಎನ್ನುವ ಬದಲು ಪ್ರತಿರೋಧ (challenge) ಎಂಬುದು ಹೆಚ್ಚು ಉಚಿತವಾದೀತು. ನಿರಂತರ ಅಭಿವೃದ್ಧಿಗೆ (sustainable development)



ಸಾಧನವಾದ ಯಾವ ಅಭಿವೃದ್ಧಿ ರಚನೆ ಜಾಗತೀಕರಣಕ್ಕೆ ಪ್ರತಿರೋಧ ನೀಡೀತು?

ನನ್ನ ಅನಿಸಿಕೆಯಂತೆ, ಏಕರೂಪೀ ಜಗತ್ತಿನ ಕೇಂದ್ರೀಕೃತ ಪ್ರಭುತ್ವವನ್ನು ಬಯಸುವ ಜಾಗತೀಕರಣ ಹಾಗೂ ಅದರ ಜತೆ ಜತೆಯೇ ಉಲ್ಬಣಿಸುತ್ತಿರುವ ಕೋಮು ಮೂಲಭೂತವಾದ ಮತ್ತು ಎಲ್ಲ ರೀತಿಯ ಇಂಥ ಪ್ರಭುತ್ವದ ಭಾಷೆ, ಸಂಕೇತ, ಆಕೃತಿ, ಪ್ರಕ್ರಿಯೆಗಳನ್ನು ಎದುರಿಸಲು ಗಾಂಧಿಯತ್ತ ಮರಳುವುದು ಒಂದು ಉತ್ತಮ ಮಾರ್ಗ. ಗಾಂಧಿ ಪ್ರತಿನಿಧಿಸುವ ಮೌಲ್ಯಗಳಾದ ಗ್ರಾಮಸ್ವರಾಜ್ಯ, ವಿಕೇಂದ್ರೀಕೃತ ಸ್ಥಳೀಯ ಉತ್ಪನ್ನ ಹಾಗೂ ಮಾರುಕಟ್ಟೆ ಮಾದರಿ, ಮತ್ತು ಇದಕ್ಕೆ ಪೂರಕವಾಗಿ ಜನರ ಸಹಭಾಗಿತ್ವದ ಪ್ರಜಾತಾಂತ್ರಿಕ ರಾಜಕೀಯವನ್ನು ಅರ್ಥಪೂರ್ಣ ಹಾಗೂ ಸತ್ವಯುತಗೊಳಿಸುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವವನ್ನು ಪುನರ್ವ್ಯಾಖ್ಯಾನಿಸುವುದು, ಇಂದು ತಪ್ಪುತಪ್ಪಾಗಿ ವಿಶ್ವಮಾನ್ಯತೆ ಪಡೆದ ಜಾಗತಿಕ ಮಾರುಕಟ್ಟೆ ವ್ಯವಸ್ಥೆಗೆ ಪ್ರಬಲ ಸವಾಲಾಗಬಲ್ಲ ಸಾಧ್ಯತೆ ಪಡೆದಿದೆ. ಈ ರಾಜಕೀಯ ಮಾರ್ಗದಲ್ಲಿ ಅನೇಕ ತೊಡಕುಗಳಿದ್ದರೂ ಕೂಡ, ಇದಕ್ಕಿಂತ ಉತ್ತಮ ಮಾರ್ಗ ನಮ್ಮ ಮುಂದಿಲ್ಲ.

ಆದರೆ ಜನತಾಂತ್ರಿಕ ರಾಜಕೀಯದ ನಿಜ ಆಶಯ ಮತ್ತು ಮಾರುಕಟ್ಟೆ ಆರ್ಥಿಕತೆಯ ಆಶಯಗಳು ಪರಸ್ಪರ ವಿರುದ್ಧ ಗತಿಯಲ್ಲಿ ಭಿನ್ನ ನೆಲೆಗಳತ್ತ ಚಲಿಸುತ್ತಿರುತ್ತವೆ. ರಾಜಕೀಯ ಆಶಯವು ನಿಜಕ್ಕೂ ಜನಸಾಮಾನ್ಯರ ಏಳಿಗೆಯನ್ನು ಬಯಸುವುದಾದರೆ, ಜನರು ತಮ್ಮ ಏಳಿಗೆಗೆ ಅಗತ್ಯವಾದ ನಿರ್ಧಾರಗಳನ್ನು ತಾವೇ ಪಾರದರ್ಶಕತೆಯಿಂದ ತೆಗೆದುಕೊಳ್ಳಲು ಸಾಧ್ಯವಾಗುವುದೇ ಅದನ್ನು ಸಾಧಿಸುವ ಖಂಡಿತ ಮಾರ್ಗ. ಇದು ಸಫಲ ಜನತಾಂತ್ರಿಕ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ. ಆಗ ಮಾತ್ರ ಜನರು ತಮ್ಮ ಬದುಕಿನ ನಿರ್ಧಾರಗಳನ್ನು ತಾವೇ ಸಾಮೂಹಿಕವಾಗಿ ತೆಗೆದುಕೊಳ್ಳುವ ಗಾಂಧೀಜಿಯ ಸ್ವರಾಜ್ಯದ ಕಲ್ಪನೆ ಫಲಿಸುತ್ತದೆ. ಈ ಅರ್ಥದಲ್ಲಿ, ವಿಶ್ವ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವ ನಿರ್ಧಾರ ಪಾರ್ಲಿಮೆಂಟಿನಲ್ಲಿ ಚರ್ಚೆಗೇ ಬರದೆ, ಮಂತ್ರಿಮಂಡಲದಲ್ಲೇ ತೀರ್ಮಾನವಾದದ್ದು ಭಾರತೀಯ ಗಣತಂತ್ರದ ಮೇಲೆ ಜಾಗತಿಕ ವ್ಯವಸ್ಥೆಯ ದಬ್ಬಾಳಿಕೆ ಮತ್ತು ಜನತಂತ್ರದಲ್ಲಿ ಜನರ ಸಹಭಾಗಿತ್ವದ ಸಂಪೂರ್ಣ ವಿಫಲತೆಯನ್ನು ಸೂಚಿಸುತ್ತದೆ.

ಅಂದರೆ ಈ ಸಾಮೂಹಿಕ ನಿರ್ಧಾರಗಳ ನೆಲೆ, ತಳಮಟ್ಟದಲ್ಲಿ ಸ್ಥಳೀಯ ಸಮುದಾಯಗಳಲ್ಲಿದ್ದರೆ, ಈ ಪ್ರಕ್ರಿಯೆ ಸತ್ವಶಾಲಿಯಾಗಿರುತ್ತದೆ. ನಿರ್ಧಾರದ ನೆಲೆ, ಮೇಲ್ಮುಖ ಚಲಿಸುತ್ತಾ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕೇಂದ್ರೀಕೃತಗೊಂಡಂತೆ ಜನರ ಸಹಭಾಗಿತ್ವ ಅರ್ಥಹೀನವಾಗುತ್ತ ಹೋಗುತ್ತದೆ.

ಆದರೆ ಮಾರುಕಟ್ಟೆಯ ಆಶಯಗಳು ಇದಕ್ಕೆ ತದ್ವಿರುದ್ಧವಾಗಿರುತ್ತವೆ.

ತಳಮಟ್ಟದಲ್ಲಿ ಮಾರುಕಟ್ಟೆಗೆ ಲಾಭಗಳಿಕೆಯ ಸಾಮರ್ಥ್ಯ ಕಡಿಮೆಯಿದ್ದು, ಮೇಲ್ಮುಖವಾಗಿ ಚಲಿಸುತ್ತಾ ರಾಜ್ಯ, ರಾಷ್ಟ್ರ, ಜಾಗತಿಕ ಮಟ್ಟಕ್ಕೆ ಬಂದಾಗ, ಲಾಭಗಳಿಸುವ ಸಾಮರ್ಥ್ಯ ರಾಕ್ಷಸೀಯವಾಗಿ ಹೆಚ್ಚುತ್ತದೆ. ಹಾಗಾಗಿ ಮಾರುಕಟ್ಟೆ ಶಕ್ತಿಗಳು ಯಾವಾಗಲೂ ರಾಷ್ಟ್ರೀಯ ಸರಕಾರಗಳ ಜತೆ ವ್ಯವಹರಿಸಲು ಇಚ್ಛಿಸುತ್ತವೆ. ಈ ಜಾಗತಿಕ ಶಕ್ತಿಗಳಿಗೆ, ತಳಮಟ್ಟದ ರಾಜಕೀಯ ವ್ಯವಸ್ಥೆಯಾದ ಗ್ರಾಮ ಪಂಚಾಯತುಗಳ ಜತೆ ಸಂಧಾನಗಳನ್ನು ಮಾಡುವ ಶಕ್ತಿ ಹಾಗೂ ನೆಲೆಗಳೇ ಇರುವುದಿಲ್ಲ. ಹಾಗಾಗಿಯೇ, ಜಾಗತಿಕ ವ್ಯಾಪಾರೀ ವ್ಯವಸ್ಥೆಗಳೇ ಜನರ ಸಹಭಾಗಿತ್ವದ ಪ್ರಜಾಪ್ರಭುತ್ವ ಮಾದರಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುತ್ತವೆ; ಮತ್ತು ಅವು ರಾಷ್ಟ್ರೀಯ ಸರಕಾರಗಳನ್ನೇ ನಿಯಂತ್ರಿಸಿ ತಮ್ಮ ವ್ಯಾಪಾರಕ್ಕೆ ಅನುಕೂಲವಾಗುವಂತೆ ಮಣಿಸಲು ಪ್ರಯತ್ನಿಸುತ್ತಿರುತ್ತವೆ. ವಿಶ್ವವ್ಯಾಪಾರೀ ಒಪ್ಪಂದ ಈ ಪ್ರಯತ್ನದ ಒಂದು ಅಭಿವ್ಯಕ್ತಿಯಷ್ಟೇ. ಕೈಗಾರಿಕಾ ಸಮಾಜದ ಗರ್ಭದಲ್ಲೇ ಅಡಗಿರುವ ಕೇಂದ್ರೀಕರಣದ ಸೆಳೆತವನ್ನು ಸೂಕ್ಷ್ಮವಾಗಿ ಗಮನಿಸಿಯೇ, ಗಾಂಧೀಜಿ, ಗ್ರಾಮ ಸ್ವರಾಜ್ಯದ ವಿಕೇಂದ್ರೀಕರಣದ ಬಯಲ ತತ್ವಕ್ಕೆ ಅಷ್ಟೊಂದು ಮಹತ್ವ ಕೊಟ್ಟಿರುವುದು ಸ್ವಯಂ ಸ್ಪಷ್ಟ.

ಜನರು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ನಾವು ನಿಜಕ್ಕೂ ಮಾತಾಡುವುದಾದರೆ, ಮಾರುಕಟ್ಟೆ ಸ್ಥಳೀಯ ನೆಲೆಗೆ ವಿಕೇಂದ್ರೀಕರಣಗೊಳ್ಳುವುದು ಅನಿವಾರ್ಯ. ಆಗ ಮಾತ್ರ ಜನರ ಕ್ರಿಯಾತ್ಮಕ ಸಹಭಾಗಿತ್ವ ಸಾಧ್ಯ. ಆದರೆ ಇದಕ್ಕೆ ಪ್ರಜಾಪ್ರಭುತ್ವದ ನೆಲೆಗಳನ್ನು ಭದ್ರಗೊಳಿಸಬೇಕಾಗಿದೆ; ಮತ್ತು ಜನತಾಂತ್ರಿಕ ಸರಕಾರಗಳು ನಿಜಕ್ಕೂ ಜೀವ ಪೋಷಕವಾಗಿಯೇ ಕರ್ತವ್ಯ ನಿರ್ವಹಿಸುವಂತೆ ಮಾಡಲು ಪ್ರಜೆಗಳು ಜಾಗೃತರಾಗಿದ್ದು, ಸಂವಾದ, ಚರ್ಚೆ, ಚಳುವಳಿಗಳ ಮೂಲಕ ಸತತವಾಗಿ ಸರಕಾರವನ್ನು ಎಚ್ಚರಿಸುತ್ತಾ, ಒತ್ತಾಯಿಸುತ್ತಾ ಇರಬೇಕಾಗುತ್ತದೆ.

ಪ್ರಜಾಪ್ರಭುತ್ವ ರಾಜಕೀಯದಲ್ಲಿ ಸರಕಾರಗಳ ಕ್ರಿಯಾತ್ಮಕ ಸಾಮಾಜಿಕ ಪಾತ್ರ ಬಹಳ ಆವಶ್ಯವಾಗಿದೆ. ಹಾಗಾಗಿ ಜಾಗತಿಕ ಶಕ್ತಿಗಳು ರಾಷ್ಟ್ರೀಯ ಸರಕಾರಗಳ ಮೇಲೆ ದಮನಕಾರೀ ಒತ್ತಡವನ್ನು ಮೇಲಿನಿಂದ ತರುತ್ತಿರುವಾಗ, ಪ್ರಜೆಗಳು ಇದರ ವಿರುದ್ಧ ಸಾಕಷ್ಟು ಪ್ರತಿ ಒತ್ತಡ (counter pressure) ನಿರ್ಮಾಣಮಾಡಿ, ನಮ್ಮ ಸರಕಾರಗಳು ಜಾಗತಿಕ ಶಕ್ತಿಗಳ ಆಶಯಗಳ ಎದುರು ಅಧೀರರಾಗದೆ ನಿಲ್ಲುವಷ್ಟು ಪ್ರಜ್ಞೆ ಮತ್ತು ಚೈತನ್ಯ – ಎರಡನ್ನೂ ಅಂತರಂಗೀಕರಿಸಿಕೊಳ್ಳುವಂತೆ ಪ್ರಚೋದಿಸಬೇಕು.

ಜನತಾಂತ್ರಿಕ ರಾಜಕೀಯದಲ್ಲಿ ಮಾತ್ರ ಸರಕಾರಗಳು ಪರಿಣಾಮಕಾರಿಯಾಗಿ ಸಮಾಜದ ಎಲ್ಲ ವರ್ಗಗಳನ್ನೂ ಒಳಗೊಳ್ಳುವಂತೆ ಸಾಮಾಜಿಕ ಒಳಿತನ್ನು ಸಾಧಿಸುವ ಶಕ್ತಿ ಸಾಧ್ಯತೆಗಳನ್ನು ಪಡೆದಿವೆ ಎಂದು ನನ್ನ ನಂಬಿಕೆ. ವಿಕೇಂದ್ರೀಕೃತ ಸ್ಥಳೀಯ



ನೆಲೆಯಲ್ಲಿ ಅಲ್ಲೊಂದು ಇಲ್ಲೊಂದು ಜನಸಂಘಟನೆಗಳು ಯಶಸ್ವಿಯಾಗಿ ಜನಹಿತ ಕೆಲಸಮಾಡಿದ ನಿದರ್ಶನಗಳು ಸಿಗುತ್ತವೆ. ಉದಾಹರಣೆಗೆ, ಅಂತರ್ಜಲ ಅಭಿವೃದ್ಧಿಗೆ ಅಣ್ಣಾ ಹಜಾರೆ ಮಾಡಿದ ಪ್ರಾಮಾಣಿಕ ಕೆಲಸ, ಚಂಡೀದಾಸ ಭಟ್ ಹಿಮಾಲಯದ ತಪ್ಪಲಲ್ಲಿ ಯಶಸ್ವಿಯಾಗಿ ನಡೆಸಿದ ಕಾಡು ಉಳಿಸುವ ಚಿಪ್ಕೋ ಆಂದೋಲನ – ಇವು ರಾಷ್ಟ್ರದ ಗಮನ ಸೆಳೆದಿವೆ. ಆದರೆ ಇಂಥ ಚಳುವಳಿಗಳು ಜನತಂತ್ರ ಸರಕಾರದ ಮೂಲಕ ಸಾರ್ವತ್ರೀಕರಣಗೊಂಡಾಗ ಮಾತ್ರ ಅವು ಸಮಷ್ಟಿ ಹಿತ ಸಾಧಿಸುವ ಸಾಧ್ಯತೆ ಪಡೆಯುತ್ತವೆ. ಇಂಥ ಪ್ರತ್ಯಪ್ರತ್ಯೇಕ ಪ್ರಯತ್ನಗಳ ಎಳೆಗಳು ಸಮಗ್ರವಾಗಿ ಹೆಣೆದುಕೊಂಡು ದೇಶವ್ಯಾಪಿಯಾಗಿ ಪಸರಿಸಬೇಕು. ರಾಜ್ಯ ಸರಕಾರಗಳು ಇಂಥ ಮಾದರಿಗಳನ್ನು ತಮ್ಮ ಯೋಜನೆಯಲ್ಲಿ ಅಂತರಂಗೀಕರಿಸಿಕೊಂಡಾಗ, ಅವು ರಾಜ್ಯವ್ಯಾಪಿಯಾಗಿ ಕನಿಷ್ಠರಲ್ಲಿ ಕನಿಷ್ಠರನ್ನೂ ತಲುಪುವ ಸಾಧ್ಯತೆಯಿದೆ.

ಆದರೆ 'ಅಣ್ಣಾ ಹಜಾರೆ ಮಾದರಿ' ಯಂಥ ವಿಶಿಷ್ಟ ಮಾದರಿಗಳು ಸರಕಾರದ ಗಮನ ಸೆಳೆಯಲು ಕಾಲಾವಕಾಶ ಬೇಕಾಗುತ್ತದೆ. ಪ್ರಜಾಪ್ರಭುತ್ವ ಮಾರ್ಗದಲ್ಲಿ ಸರಕಾರಗಳು ಕಲಿಯುವ ಪ್ರಕ್ರಿಯೆಯೇ ನಿಧಾನ. ಇದು ಸಂವಾದ, ಚರ್ಚೆ, ಸಂಧಾನ-ಅನುಸಂಧಾನಗಳ ಮೂಲಕ, ಸಕಾರಾತ್ಮಕ ಚಳುವಳಿಗಳ ಮೂಲಕ ಘಟಿಸಬೇಕಾಗುತ್ತದೆಯೇ ವಿನಾ ಬಲವಂತದಿಂದಲ್ಲ.

ಆದ್ದರಿಂದಲೇ ಪ್ರಜಾಪ್ರಭುತ್ವ ರಾಜಕೀಯ ತುಂಬ ಕ್ಲಿಷ್ಟಕರವಾದ ಪ್ರಕ್ರಿಯೆ. ಆದರೆ ಸದ್ಯದ ಮಟ್ಟಿಗೆ ಅದಕ್ಕೆ ಪರ್ಯಾಯಗಳಿಲ್ಲ, ಒಳದಾರಿಗಳಿಲ್ಲ. ಆದರೆ ನಮ್ಮ ಸುಶಿಕ್ಷಿತರಲ್ಲನೇಕರು ಜನತಂತ್ರದ ತಮ್ಮ ಕನಿಷ್ಠ ಜವಾಬ್ದಾರಿಗಳಿಂದಲೂ ನುಣುಚಿಕೊಂಡು, ಸಂವಾದ, ಚರ್ಚೆ, ಜನರ ಪಾಲುಗೊಳ್ಳುವಿಕೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ತಾಳ್ಮೆ ವ್ಯವಧಾನಗಳಿಲ್ಲದೆ ಅತಿಬೇಗ ಸಿನಿಕರಾಗಿ ಸರಕಾರವನ್ನು ಒಟ್ಟಾರೆಯಾಗಿ ದೂಷಿಸುತ್ತಾ ಸರಕಾರವೇ ಬೇಡ ಎನ್ನುವಷ್ಟರಮಟ್ಟಿಗೆ ಅನಾರ್ಕಿಸ್ಟರಾಗಿಬಿಡುತ್ತಾರೆ. ಇಂಥವರು ಮೂಲಭೂತವಾದಿಗಳಷ್ಟೇ ಅಪಾಯಕಾರಿಗಳಾಗಿಬಿಡುವ ಸಂಭವವಿದೆ. ಇದು ನಿಜಕ್ಕೂ ಪ್ರಜಾಪ್ರಭುತ್ವದ ಅಣಕ. ನಮ್ಮ ಶಿಕ್ಷಣ ನಿಜಕ್ಕೂ 'ಎನೇಬ್ಲಿಂಗ್' (enabling) ಶಿಕ್ಷಣ ಆಗಿಲ್ಲದಿರುವುದೇ ಇದಕ್ಕೆ ಕಾರಣವೆನ್ನಬಹುದು. ಆದರೆ ನಮಗೆ ಗಣತಂತ್ರ ರಾಜಕೀಯ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಹಾಜರಾಗುವ ಹೊಣೆಯಿದೆ. ದೇಶದ ರಾಜಕೀಯ ಪ್ರಕ್ರಿಯೆಗಳ ಮೇಲೆ ನಮಗೆ ಪ್ರಭಾವ ಬೀರಲು ಸಾಧ್ಯವಾಗದಿದ್ದರೆ, ನಾವು ಉತ್ತಮ ಪ್ರಜೆಗಳಾಗಲಾರೆವು; ಮಾತ್ರವಲ್ಲ, ಅಂಥ ಪ್ರಜಾತಾಂತ್ರಿಕ ವ್ಯವಸ್ಥೆಯೇ ಪೊಳ್ಳೆನಿಸಿ ಬಿಡಬಹುದು.

ಇದುವರೆಗೂ ನಾನು ಇಂದಿನ ಈ ಜಾಗತಿಕ ಆರ್ಥಿಕ ಸಂದರ್ಭದಲ್ಲಿ

ಪ್ರಜಾತಾಂತ್ರಿಕ ಒಳಲೋಕದ ಗಟ್ಟಿನೆಲೆಗಳ ಆವಶ್ಯಕತೆಯ ಬಗ್ಗೆ ವಿವರಿಸಿದೆ. ಇಂಥ ಗಟ್ಟಿ ನೆಲೆಯಲ್ಲಿ, ಜಾಗತೀಕರಣಕ್ಕೆ ಪ್ರತಿರೋಧಾಕೃತಿಯು ಯಾವ ಜೀವಶಕ್ತಿಯ ಮೂಲದಿಂದ ಹಾಜರಾಗಬಹುದು ಎಂಬುದನ್ನು ಸ್ವಲ್ಪ ವಿಸ್ತಾರವಾಗಿ ಗಮನಿಸುವ. ಸಾಮಾನ್ಯ ಜನರ ದೈನಂದಿನ ಬದುಕಿನ ಸತ್ಯಗಳಲ್ಲೇ ಜಾಗತೀಕರಣದ ವಿರುದ್ಧ ವಿದ್ರೋಹೀ ನೆಲೆಗಳು ನಿಜಕ್ಕೂ ಮೂರ್ತವಾಗಿ ಹರಳುಗಟ್ಟಲು ಖಂಡಿತ ಸಾಧ್ಯ ಎಂದು ನನ್ನ ನಮ್ರ ತಿಳುವಳಿಕೆ. ಇಂದಿನ ಪಶ್ಚಿಮಪ್ರಣೀತ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ, ಮತ್ತೆ ಮತ್ತೆ ನಾವು ಜನಸಾಮಾನ್ಯರ ದೈನಂದಿನ ಕಾಯಕದ ಬದುಕಿನ ಬತ್ತದ ಸೆಲೆಗಳನ್ನು (ordinary life) ಸಂದರ್ಶಿಸಿ ಅದರಲ್ಲಡಗಿ ಕೂತಿರುವ ಸತ್ತ್ವವನ್ನು ಯಾವೊಂದೂ ಪೂರ್ವಾಗ್ರಹವಿಲ್ಲದೆ ಮರುವಿಮರ್ಶೆಗೊಡ್ಡಬೇಕು. ದೈನಂದಿನ ಬದುಕು ಷರತ್ತುರಹಿತವಾಗಿ (unconditional) ಸಮಗ್ರವಾಗಿ, ವರ್ತಮಾನದಲ್ಲಿ ಜರುಗುತ್ತಿರುವಂಥದು. ಸತ್ಯ-ಅಸತ್ಯ, ಒಳ್ಳೆಯದು-ಕೆಟ್ಟದ್ದು, ಸೌಂದರ್ಯ-ಕುರೂಪತೆ – ಎಲ್ಲವೂ ಈ ದೈನಂದಿನ ಕಾಯಕದ ಬದುಕಿನ ವಿವಿಧ ಮೈಗಳಾಗಿದ್ದು, ಶ್ರೀಮಂತಿಕೆಯಿಂದ ತುಂಬಿಕೊಂಡಿದ್ದು, ಅಖಂಡವಾಗಿದೆ. ನಿಜಕ್ಕೂ ಸತ್ಯ-ತತ್ವದ ಮೂಲಸೆಲೆಯಾಗಿದೆ. ಜಾಗತಿಕ ವಸಾಹತೀಕರಣ ಶಕ್ತಿಗಳು, ದೈನಂದಿನ ಸಾಮಾನ್ಯ ಬದುಕಿನ ಅಸಂಖ್ಯ ಆಕೃತಿಗಳ ಸಂಕೀರ್ಣತೆಯನ್ನು ಅಸಹನೆಯಿಂದ ಮುಗ್ಧವೆಂದು ಸರಳೀಕರಿಸಿ ನಿರಾಕರಿಸಿದರೂ, ಅಲ್ಲಿ ಅಡಕವಾಗಿರುವ ಅಂತರ್ ಪ್ರಕ್ರಿಯೆಯೇ ನಿಜಕ್ಕೂ ಅತ್ಯಂತ ಮೂಲಭೂತವಾದ ಬದುಕಿನ ಕ್ರಮ; ಮಾತ್ರವಲ್ಲ, ಅದಿಲ್ಲದೆ ಬದುಕೇ ಇಲ್ಲ. ಯಾವುದೇ ನಂಬಿಕೆ, ಭಾವನೆ, ಕಲ್ಪನೆ, ಸಿದ್ಧಾಂತ, ನಿರ್ಮಿತಿಗಳು ಈ ಬಹುರೂಪತೆಯ ಜೀವನ ಕ್ರಮವನ್ನು ಸ್ವಾಧೀನ ಪಡಿಸಿಕೊಳ್ಳಲು (appropriate ಮಾಡಲು) ಸಾಧ್ಯವಿಲ್ಲ. ಆದರೂ ಬದುಕಿನ ಈ ಅಪಾರ ಶ್ರೀಮಂತಿಕೆಯನ್ನು ಪ್ರಸ್ತುತಕ್ಕೂ ಪುನರ್‌ರಚಿಸಿಕೊಳ್ಳುವುದು ಅಷ್ಟೇನೂ ಕಷ್ಟವಲ್ಲ, ಅದೇ 'ಆರ್ಡಿನರಿ ಲೈಫ್'ನ (ಸಾಮಾನ್ಯ ಜೀವನದ) ಸೌಂದರ್ಯ ಕೂಡ.

ಜನಸಮುದಾಯದ ದೈನಂದಿನ ಬದುಕಿನ ಕ್ರಮಗಳು ನಿರಂತರ ಅಭಿವೃದ್ಧಿಗೆ (ಸಸ್ಟೇನೆಬಲ್) ಪೂರಕವಾಗಿವೆ. ಈ 'ಸಸ್ಟೇನೆಬಲ್' ಸಮುದಾಯಗಳ ಬದುಕಿನ ಸಂರಚನೆಗಳು ನಾವು ಬದುಕುತ್ತಿರುವ 'ಅನ್‌ಸಸ್ಟೇನೆಬಲ್' ಸಮುದಾಯಗಳ ಬದುಕಿನ ಸಂರಚನೆಗಳಿಗಿಂತ, ಆಶಯ - ಆಕೃತಿಗಳೆರಡರಲ್ಲೂ ತೀರ ಭಿನ್ನ. 'ಅನ್‌ಸಸ್ಟೇನೆಬಲ್' ಸಮುದಾಯಗಳಿಗೆ ಸತ್ಯವು ವಿಜ್ಞಾನದ ಅನ್ವೇಷಣೆಯಂತೆ ಹೊರಗಿನಿಂದ ಅರಸುವ ಸಂಗತಿಯಾದರೆ, ಸಾಮಾನ್ಯ ಜನಸಮುದಾಯಗಳು ಸತ್ಯವನ್ನು ತಮ್ಮ ಬದುಕಿನ ಜೀವ ಶಕ್ತಿಯ ಮೂಲಕವೇ ಸತತವಾಗಿ ಬೇಕಾದಂತೆ ಕಟ್ಟುತ್ತಾ (construct), ಮುರಿಯುತ್ತಾ



(deconstruct) ವರ್ತಮಾನದ ಜೀವಂತಿಕೆಯಲ್ಲೇ ರೂಪಿಸುತ್ತಿರುತ್ತವೆ. ಇದು ನಿಜ ಸಂತರ ಪರಂಪರೆಯೂ ಆಗಿತ್ತು. ಅವರು ಅದನ್ನು ತಮ್ಮ ಬದುಕಿನ ಕ್ರಮದಲ್ಲೇ ಸಾಧಿಸುತ್ತಿರುತ್ತಾರೆ. ಇಂಥ ಸಮುದಾಯಗಳ ಬದುಕಿನ ಸತ್ಯವನ್ನು ರಚಿಸುವುದು, ಪುನರ್‌ರಚಿಸುವುದರ ಮೂಲಕ ಈ ಜೀವನ ತತ್ವ ಜಾಗತೀಕರಣಕ್ಕೆ ಸವಾಲಾಗಬಲ್ಲುದೇ ವಿನಾ ಯಾವುದೇ ನಿರ್ದಿಷ್ಟ ಸಿದ್ಧಾಂತ, ಆಧುನಿಕ ತರ್ಕಬದ್ಧ ಮಾದರಿಗಳಲ್ಲ. ಹಾಗೆ ನೋಡಿದರೆ, ಇಂದು 'ಗಾಂಧಿಯನ್', 'ಮಾರ್ಕ್ಸಿಯನ್' ಮುಂತಾದ ಯಾವುದೇ ಮಾದರಿಗಳು ಹಾಗಾಗೇ ಪ್ರಶಸ್ತವಾಗಿ ಉಳಿದಿಲ್ಲ. ಇಂಥ ಬಿಕ್ಕಟ್ಟಿನಲ್ಲಿ ನಮ್ಮ ಸ್ಫೂರ್ತಿಗೆ ಮತ್ತೆ ಜನಸಾಮಾನ್ಯರ ಬದುಕಿನ ಬಹುಮುಖೀ ಆಕೃತಿಗಳತ್ತ ಹೊರಳಿ, ನಮ್ಮದೇ ಆದ 'ಮೆಥಡ್' ನ್ನು ಅಂತರ್‌ಶಾಸ್ತ್ರೀಯ ಶೋಧನೆಗಳ ಮೂಲಕ ಹೇಗೆ ನಾವೇ ಆವಿಷ್ಕರಿಸಿಕೊಳ್ಳಬಹುದು ಎಂಬುದು ನಮ್ಮ ಮುಂದಿರುವ ಬಹುಮುಖ್ಯ ಪ್ರಶ್ನೆ.

ಈ ದೇಶೀ ಸಮಾಜ ಮತ್ತು ಮೂಲನಿವಾಸೀ ಜೀವನ ದರ್ಶನದಲ್ಲಿ ಅಡಕವಾಗಿರುವ ಶತಮಾನಗಳಿಂದ ದತ್ತವಾಗಿ ಹರಿದುಬಂದಿರುವ ವೈವಿಧ್ಯಮಯ ಹಾಗೂ ಸಂಚಿತ ಅನುಭವಜನ್ಯ ಜ್ಞಾನ ಸಂಪನ್ಮೂಲಗಳನ್ನು ನಾವು ಈ ನೆಲದ 'ಜನಪದೀಯ ಜ್ಞಾನ ಭಂಡಾರ' (peoples' accumulated experiential knowledge base) ಅಥವಾ 'ಜನಾಂಗೀಯ ಪ್ರತಿಭೆ' ಎನ್ನಬಹುದೋ ಏನೋ. ಇದನ್ನೆ ಸಹಸ್ರಬುದ್ಧೆ ಸೂತ್ರೀಕರಿಸಿ 'ಲೋಕ ವಿದ್ಯೆ' ಎಂದು ಕರೆಯುತ್ತಾರೆ. (ಮುಂದೆ ನಾನು ಅನುಕೂಲಕ್ಕಾಗಿ ಲೋಕವಿದ್ಯೆ ಎಂದೇ ಸಂಬೋಧಿಸುತ್ತೇನೆ.) ವಿಶ್ವವಿದ್ಯಾಲಯಗಳ ಶೈಕ್ಷಣಿಕ ಹಣೆಪಟ್ಟಿಯ ಹಂಗಿಲ್ಲದ ಜನಪದದ ಪ್ರಾದೇಶಿಕ ತಿಳುವಳಿಕೆಯ ಮೊತ್ತವಾದ ಈ ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಜೀವಂತ ನೆಲೆಗಳು ಲೋಕವಿದ್ಯೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿರುತ್ತವೆ. ಈ ಜ್ಞಾನ ಶಾಖೆಗಳ ವಿಶಿಷ್ಟ ರೂಪಗಳು ಸ್ಥಳೀಯ ಸಂದರ್ಭ, ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನೀಯ ಆವಿಷ್ಕಾರಗಳಾಗಿ, ವಿನ್ಯಾಸಗಳಾಗಿ ರೂಪಾಂತರಗೊಳ್ಳುವ ಅಂತಃಶಕ್ತಿ ಪಡೆದಿವೆ. ಲೋಕವಿದ್ಯೆಯ ಈ ರೂಪಾಂತರ ಪ್ರತಿಭೆಯು ನಿಜಕ್ಕೂ ಒಂದು ದೇಶದ ಮೂಲ ಆಸ್ತಿ. ಇದನ್ನು ಸಹಸ್ರ ವ್ಯಾಖ್ಯೆಗಳಿಂದಲೂ ಸಮರ್ಪಕವಾಗಿ ನಿರ್ವಚಿಸಲು ಬರುವುದಿಲ್ಲ; ಅನುಭವಿಸುವುದು ಮಾತ್ರ ಸಾಧ್ಯ. ಈ ಲೋಕವಿದ್ಯಾ ದೃಷ್ಟಿ ನಮ್ಮನ್ನು ಬಿಡುಗಡೆಗೊಳಿಸುವಂಥದು. ಇದು ಗಾಂಧೀಜಿಯ ದೃಷ್ಟಿ ಕೂಡ. ಲೋಕವಿದ್ಯೆಯು ತನ್ನಲ್ಲಡಗಿರುವ ದಿಗ್ಭ್ರಮೆಗೊಳಿಸುವ 'ಅಪರಿಚಿತ' ಹಾಗೂ 'ಅನಿರೀಕ್ಷಿತ' ಬಹುಮುಖೀ ಹತಾರಗಳನ್ನು ವಿಸರ್ಜಿಸುವ ಮೂಲಕ ಏಕಮುಖೀ ಜಾಗತೀಕರಣಕ್ಕಿಂತಲೂ ದೊಡ್ಡ ರಾಕ್ಷಸನನ್ನು ಎದುರಿಸಬಲ್ಲ ಎಂದೂ ಬತ್ತದ ಜೀವಸೆಲೆ. ಪರಂಪರೆಯ ನಿಜಸಾರವಿರುವುದು ಈ ಅನುಭವೀ

ವಿದ್ಯೆಯ ಸೃಷ್ಟಿ, ಮರುಸೃಷ್ಟಿಗಳಲ್ಲಿ ತೊಡಗುವುದರಲ್ಲಿ. ಇದು ಹಳತರ ಹಳಹಳಿಕೆಯಲ್ಲ; ಬದಲಾಗಿ ಪೂರ್ವಾಗ್ರಹವಿಲ್ಲದೆ ದತ್ತವಾದ ಈ ಬಯಲ ತತ್ವವನ್ನು ಪುನರ್‌ವಿಮರ್ಶೆಮಾಡಿ ಸತ್ವಯುತವಾದದ್ದನ್ನು ಪ್ರಸ್ತುತಗೊಳಿಸುವ ಕ್ರಮ. ಈ ಕೆಲಸವನ್ನು ಜನಸಮುದಾಯಗಳು, ದಿನದಿನವೂ ತಮ್ಮ ದೈನಂದಿನ ಬದುಕಿಗೆ ಬಂದೆರಗುವ ಆಘಾತಗಳಿಗೆ ಪ್ರತ್ಯಾಘಾತಗಳನ್ನು ಒಡ್ಡುತ್ತ ಸಂಘರ್ಷಾತ್ಮಕ ನೆಲೆಯಲ್ಲೇ ಬದುಕಿನ ಸತ್ಯಗಳನ್ನು ನಿರಂತರವಾಗಿ ಪುನರ್ರಚಿಸಿಕೊಳ್ಳುವುದರ ಮೂಲಕ ರೂಢಿಸಿಕೊಂಡಿವೆ. ಹಾಗಾಗಿಯೇ ಈ ದಾರಿ ನಿತ್ಯ ನಾವೀನ್ಯತೆಯನ್ನು ಪಡೆದಿದೆ. ಈ ಕೆಲಸವನ್ನು ಸಂತ ಪರಂಪರೆಯೂ ಮಾಡಿತ್ತು. ಗಾಂಧೀಜಿ ಆ ಪರಂಪರೆಯಿಂದ ಬಂದವರು.

ಆದರೆ ಲೋಕವಿದ್ಯೆಯು ಪೂರ್ಣ ಪ್ರಮಾಣದಲ್ಲಿ ವಿಕಾಸವಾಗಿ, ಕ್ರಿಯಾರೂಪದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಗುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಎಂದು ನನ್ನ ನಂಬಿಕೆ. ಬೇಸಾಯಗಾರರು, ಕೈಕಸುಬುಗಾರರು, ಕರಕುಶಲಗಾರರು, ದಲಿತರು, ಗುಡ್ಡಗಾಡು ಜನಾಂಗದವರು, ಮಹಿಳೆಯರೇ ಮೊದಲಾದ ಈ ದೇಶದ ೭೫ ಶೇಕಡಾ ಜನರು ಈ ಲೋಕವಿದ್ಯೆಯ ವಾರಿಸುದಾರರು. ಇಷ್ಟು ದೊಡ್ಡ ಜನಸಂಖ್ಯೆಯನ್ನು, ನಮ್ಮ ಮಧ್ಯಮವರ್ಗ ಸಮಾಜದ ಅಂಚಿನಲ್ಲಿರುವವರೆಂದು ನಿರ್ಲಕ್ಷಿಸುವುದೆಂದರೆ, ನಿಜಕ್ಕೂ ಈ ದೇಶದ ಪ್ರಧಾನವಾಹಿನಿಯಾದ ಸಾಮಾನ್ಯ ಬದುಕಿನ ಒಟ್ಟು ದೇಶೀ ಜ್ಞಾನ ಸಂಪತ್ತನ್ನೇ ಅವಮಾನಿಸಿದಂತೆ; ಮಾತ್ರವಲ್ಲದೆ, ಈ ಬಹುಸಂಖ್ಯಾತರನ್ನು 'ಅನ್ಯ'ರೆಂದು ತಿರಸ್ಕರಿಸಿ ದೇಶದ ಅಭಿವೃದ್ಧಿ ವರ್ತುಲದ ಕೇಂದ್ರ ಬಿಂದುವಿನಿಂದ ಪರಿಧಿಗೆ ಸರಿಸಿದಂತೆ. ಇವರ ಸಂತತಿ ನಿರ್ನಾಮವಾಗುವುದೆಂದರೆ, ಹಲವು ಸ್ತರಗಳಲ್ಲಿ ಒಟ್ಟೊಟ್ಟಿಗೆ ಆವಿರ್ಭಾವವಾಗುತ್ತಿರುವ ಈ ದೇಶದ ಒಟ್ಟು ಸಾಮುದಾಯಿಕ ಜ್ಞಾನ-ವಿವೇಕಗಳ ಕೇಂದ್ರ ನೆಲೆಗಟ್ಟೇ ನಿರ್ನಾಮವಾದಂತೆ. ಇಂಥ ವಿಕಲ್ಪ ನಿಜಕ್ಕೂ ಸಮಾಜವೊಂದರ ಅಂತರ್ಗತ ಶಕ್ತಿಯ ಅರಿವಿನ ಲಕ್ಷಣವಲ್ಲ.

ಈ ಅಪಾಯವನ್ನು ತಪ್ಪಿಸುವುದು ಹೇಗೆ? ಸಾಮಾನ್ಯ ಜನರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲೇ ಹಾಸುಹೊಕ್ಕಾಗಿ ಹೆಣೆದುಕೊಂಡು, ಅತ್ಯಂತ ಸಂಕಷ್ಟಗಳ ಸಮಯದಲ್ಲೂ ಈ ಸಮುದಾಯಗಳನ್ನು ಪೊರೆಯುತ್ತಾ ಬಂದ ವೈವಿಧ್ಯಮಯ ಕಸುಬು-ಉಪಕಸುಬುಗಳ ಜ್ಞಾನ ಪರಂಪರೆಯನ್ನು ನಮ್ಮೆಲ್ಲ ಅಭಿವೃದ್ಧಿ ವ್ಯಾಖ್ಯೆಗಳ ಕೇಂದ್ರ ಸ್ಥಾನದಲ್ಲಿ ಕೂಡಿಸುವುದು ಹೇಗೆ?

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಪಶ್ಚಿಮಪ್ರಭಾವಿತ ಅಭಿವೃದ್ಧಿ ಮಾರ್ಗ, ಈ ಲೋಕವಿದ್ಯೆಯನ್ನು ಸಾಕಷ್ಟು ಬದಿಗೆ ಸರಿಸಿಬಿಟ್ಟಿತು. ಹಾಗಾಗಿಯೇ ಕ್ರಮೇಣ ಈ ಬಹುಮುಖೀ ಜನಾಂಗೀಯ ಪ್ರತಿಭೆಗಳು ದೈಹಿಕವಾಗಿ ಕಣ್ಮರೆಯಾಗದಿದ್ದರೂ ಅವುಗಳ



ಆಕರ್ಷಣೆ ಮತ್ತು ನ್ಯಾಯಬದ್ಧತೆಗಳು ಕುಂಠಿತವಾಗಲು ಆರಂಭವಾಯಿತು. ಮುಂದೆ ನಮಗೆ ಸ್ವಾತಂತ್ರ್ಯ ದೊರಕಿದಾಗ ಈ ಲೋಕವಿದ್ಯೆಯನ್ನು ಗುರುತಿಸಿ, ವಿದ್ಯೆಯ 'ಫಾರ್ಮಲ್' ಸ್ಥಾನಮಾನವನ್ನು ಕೊಟ್ಟು, ಬಲಿಷ್ಠೀಕರಿಸಿದ್ದರೆ, ಅದರ ವಾರಿಸುದಾರ ಜನಾಂಗಗಳು 'ವಿದ್ಯಾವಂತ'ರೆಂದು ಗೌರವ-ಘನತೆಗಳಿಂದ ಬದುಕುವಂತೆ ಮಾಡುವ ಒಂದು ಅಪೂರ್ವ ಅವಕಾಶ ನಮಗಿತ್ತು. ಒಬ್ಬ ಬಡಗಿ ಅಥವಾ ಶಿಲ್ಪಿ, ಇಂದಿನ ಔಪಚಾರಿಕ ಕಾಲೇಜು ಶಿಕ್ಷಣ ಪಡೆದ ಇಂಜಿನಿಯರ್ ಅಥವಾ 'ಆರ್ಕಿಟೆಕ್ಟ್' ಗೆ ಸರಿ ಸಮಾನವಾಗಿ ಅಥವಾ ಇನ್ನೂ ದಕ್ಷತೆಯಿಂದ ಕಟ್ಟಡ ನಿರ್ಮಾಣವನ್ನು ನಿಭಾಯಿಸಬಲ್ಲ ನಾದರೆ, ಆತನಿಗೆ ಶಿಕ್ಷಣದ ಮಾನದಂಡದಲ್ಲಿ ಸಮಾನ ಸ್ಥಾನಮಾನ ಪಡೆಯುವ ಅವಕಾಶವೂ ದೊರೆಯುತ್ತಿತ್ತೋ ಏನೋ. ಆದರೆ ನಾವು ಅಂಥ ಅವಕಾಶವನ್ನು ಕಳಕೊಂಡೆವು'.* ಕೇವಲ ಅಕ್ಷರ ಜ್ಞಾನಕ್ಕಷ್ಟೇ ಮಾನ್ಯತೆಯಿತ್ತು, ಲೋಕವಿದ್ಯೆಯನ್ನು ನಿರ್ಲಕ್ಷಿಸಿ ಮೂಲೆಗುಂಪುಮಾಡಿ ದುರ್ಬಲೀಕರಿಸಿಬಿಟ್ಟೆವು. ಈ ವರ್ಗಕ್ಕೆ ಅಕ್ಷರಜ್ಞಾನ ಮುಖ್ಯವೆನ್ನುವುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಅವರಿಗೆ ದತ್ತವಾದ ಅನುಭವೀಲೋಕಕ್ಕೆ ಮೊದಲ ಮನ್ನಣೆ ದೊರೆಯಬೇಕಿತ್ತು. ನಮ್ಮ 'ನಿರ್ದಿಷ್ಟ ಬಗೆಯ ಅಭಿವೃದ್ಧಿ ಪಥ, ರಾಷ್ಟ್ರೀಯ ಸಮಾಜನಿರ್ಮಾಣ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ನಿರ್ದಿಷ್ಟ ಬಗೆಯ ಜೀವನ ಕ್ರಮ' (ಡಿ.ಆರ್. ನಾಗರಾಜ್)ಗಳು ಈ ದೇಶದ ಬಹುಜನರನ್ನು ಹೀಗೆ ಶಾಶ್ವತ

* ಹೀಗೆಂದ ಕೂಡಲೆ ಈ ವಾದ ಸರಣಿಯು ಹಿಂದಿನ ಶ್ರೇಣೀಕೃತ ವರ್ಗ ವ್ಯವಸ್ಥೆಯನ್ನು ಇನ್ನಷ್ಟು ಭದ್ರಗೊಳಿಸುವ ಸಾಧನವಾಗದೇ ಎಂಬ ಅನುಮಾನ ಮೂಡುವುದು ಸಹಜ. ಆದರೆ, ಯಾವುದೇ ವೃತ್ತಿಯು, ವ್ಯಾವಹಾರಿಕ ಸಮಾಜದಲ್ಲಿ ಗೌರವದ ಸ್ಥಾನ ಪಡಕೊಂಡಾಗ ಅದು ತನ್ನ ಆರೋಪಿತ ಕೀಳರಿಮೆಯಿಂದ ಮುಕ್ತಿ ಪಡೆಯುತ್ತದೆ. ಗೌರವದ ಜ್ಞಾನಶಾಖೆಯಾಗಿ ಪಲ್ಲಟಗೊಳ್ಳುತ್ತದೆ. ಸಮಾಜದ ಎಲ್ಲ ಸ್ತರಗಳಿಂದಲೂ ಆ ವೃತ್ತಿಗೆ ಜನ, ಇಂಥ ಸಂದರ್ಭದಲ್ಲಿ ವಲಸೆ ಹೋಗಲು ಆರಂಭಿಸುತ್ತಾರೆ. ಈ ವಿದ್ಯಮಾನಕ್ಕೆ ನಾನು ಹಿಂದೆಯೆ ದೃಷ್ಟಾಂತ ನೀಡಿದ್ದೇನೆ. ಈ ಅಂತರ್‌ವೃತ್ತೀಯ ಅಂತರ್‌ಜಾತೀಯ ಚಲನೆಯನ್ನು ನಾನು 'ವರ್ಣಸಂಕರ' ಎಂದು ಕರೆಯುತ್ತೇನೆ. ಈ ವರ್ಣಸಂಕರವೇ ಭಾರತೀಯ ಸಮಾಜವನ್ನು ಜಾತಿ ವ್ಯವಸ್ಥೆಯಿಂದ ಬಿಡುಗಡೆಗೊಳಿಸುವ ಸಾಮರ್ಥ್ಯವನ್ನೂ ಪಡೆದಿದೆ ಎಂದು ನನ್ನ ನಂಬಿಕೆ. (ಕಳೆದ ಶತಮಾನದಲ್ಲಿ ಕೈಗಾರೀಕರಣ ಪ್ರಕ್ರಿಯೆಯು, ಭಾರತದಲ್ಲಿ ಜಾತಿ ಕಟ್ಟನ್ನು ಮೀರುವ ಊರ್ಧ್ವಮುಖದ ಸಂಸ್ಕೃತಾನುಸರಣ ಚಲನೆಗೆ ಸ್ವಲ್ಪಮಟ್ಟಿಗೆ ಚಾಲನೆ ಕೊಟ್ಟಿತ್ತು.) ಆದರೆ, ಇಲ್ಲೊಂದು ಆತಂಕವೂ ಇದೆ. ಲೋಕವಿದ್ಯೆಯ ಸಾಮಾಜಿಕ ಮೇಲ್ಪಯಣ ಆರಂಭವಾಗುತ್ತಿದ್ದಂತೆಯೇ ಮೇಲ್‌ಸ್ತರದ ಪ್ರಭಾವಿಗಳು, ಈ ಕ್ಷೇತ್ರವನ್ನು ಸ್ವಾಧೀನಪಡಿಸಿಕೊಂಡು ಈ ಪಾರಂಪರಿಕ ಕ್ಷೇತ್ರದ ನಿಜ ವಾರಿಸುದಾರರನ್ನು ಮೂಲೆಗುಂಪು ಮಾಡುವ ಸಾಧ್ಯತೆಯೂ ಇನ್ನೊಂದೆಡೆ ಇದೆ. ಹಾಗಾಗಿ ಇದನ್ನು ಪ್ರತಿರೋಧಿಸುವುದು ಹೇಗೆ ಎಂಬುದು ಕೂಡ ಪರ್ಯಾಯ ಸಾಧ್ಯತೆಗಳ ಶೋಧದ ಪ್ರಮುಖ ಭಾಗವಾಗಬೇಕಾಗಿದೆ. ಪ್ರಾಯಶಃ ಒಂದು ಜನತಾಂತ್ರಿಕ ರಚನೆಯಲ್ಲಿ, ಜನ ಸಂಘರ್ಷದ ಮೂಲಕ, ಮತ್ತು ಹೆಚ್ಚು ಹೆಚ್ಚು ಜನರು ವಿಕೇಂದ್ರೀಕೃತ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ಈ ಸವಾಲನ್ನು ಎದುರಿಸಬಹುದೋ ಏನೋ.

‘ಅನ್ಯ’ರನ್ನಾಗಿ ಮಾಡಿಬಿಟ್ಟದ್ದರಿಂದಲೇ, ಇಂದು ಈ ದೇಶದ ನಾಗರೀಕತೆ ತೀವ್ರ ಬಿಕ್ಕಟ್ಟಿನ ಸ್ಥಿತಿ ತಲುಪಿದೆ. ದುರಾದೃಷ್ಟವಶಾತ್, ಜಾಗತೀಕರಣ ಈ ಪ್ರಕ್ರಿಯೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸುತ್ತಿದೆ.

ಆದರೂ ಲೋಕವಿದ್ಯೆ, ಈ ಎಲ್ಲ ಸಂಕಷ್ಟಗಳ ನಡುವೆಯೂ ಜೀವಂತವಾಗಿ ಸ್ವಲ್ಪ ಮಟ್ಟಿಗಾದರೂ ಇನ್ನೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಆಧುನಿಕ ಯುಗದ ಜ್ಞಾನಶಾಖೆಗಳ ದಬ್ಬಾಳಿಕೆಯ ಎಡೆಯಲ್ಲೂ ತನ್ನದೇ ಆದ ಇಕ್ಕಟ್ಟಿನ ಜಾಗದಲ್ಲಿ, ಆಧುನಿಕ ಅಭಿವೃದ್ಧಿ ವ್ಯಾಖ್ಯೆಯ ಹಂಗಿಲ್ಲದೆ ಬಹುಮಟ್ಟಿಗೆ ಸ್ವತಂತ್ರವಾಗಿ ಕ್ರಿಯಾಶೀಲವಾಗಿ ಬಾಳಿದೆ. ಗಾಂಧೀಜಿ ಸಂಕೇತಿಸುವ ಚರಕ, ಖಾದಿ, ಗುಡಿ ಕೈಗಾರಿಕೆಗಳು ಮತ್ತು ವಿಕೇಂದ್ರೀಕೃತ ಸ್ಥಳೀಯ ಉತ್ಪಾದನೆಯ ಮಾರುಕಟ್ಟೆ ಸೌಲಭ್ಯಗಳ ಮೂಲಕ ಗ್ರಾಮಸ್ವರಾಜ್ಯ ಈ ಅರ್ಥದಲ್ಲಿ ಈ ಬಹುಮುಖೀ ಪ್ರಜ್ಞೆಯ ಬಿಂಬರೂಪಗಳೇ ಆಗಿವೆ. ಇದೇ ಗಾಂಧೀಜಿಯ ಸ್ವದೇಶೀ ದರ್ಶನ ಕೂಡ. ಲೋಕವಿದ್ಯೆಯ ಈ ತತ್ವಾನುಭವವನ್ನು ಬದಲಾದ ಸಂದರ್ಭಕ್ಕೆ ತಕ್ಕಂತೆ ಜೀವಶಕ್ತಿ ತುಂಬಿ ಪರಿಷ್ಕರಿಸಬೇಕು. ಬಹುಶಃ ಸ್ವಾಯತ್ತತೆಯುಳ್ಳ ಸಮಾಜಗಳ ಅಂತಃವಿಸ್ತಾರ ದಲ್ಲೇ ಇವು ಬಹು ಸೂಕ್ಷ್ಮವಾಗಿ ಸತತ ಪರಿವರ್ತನೆಗೊಳ್ಳುತ್ತಲೇ ಇರುತ್ತವೆ.

ಆದರೆ ಜೀವಪ್ರೀತಿಯ ಇಂಥ ಮೌನ ಪರಿವರ್ತನೆ ಸಮಾಜದ ಪ್ರಧಾನ ವಾಹಿನಿಯಲ್ಲಿ ಸೇರಿಕೊಳ್ಳಬೇಕಾದರೆ ಸಾಮಾನ್ಯ ಮನುಷ್ಯನ ಬದುಕಿನ ತತ್ತ್ವಜ್ಞಾನವು ಒಂದು ಸಾಮಾಜಿಕ ಶಕ್ತಿಯಾಗಿ ಅಭಿವ್ಯಕ್ತಿ ಪಡೆಯುವ ಅಗತ್ಯತೆಯಿದೆ. ಆಗ ಈ ತತ್ತ್ವಜ್ಞಾನದ ತಿಳುವಳಿಕೆ ಮತ್ತು ಕ್ರಿಯೆ ಒಂದೇ ಆಗಿಬಿಡುತ್ತದೆ; ತಿಳುವಳಿಕೆಯೇ ಕ್ರಿಯೆಯಾಗಿ ಬಿಡುತ್ತದೆ.

ನಿಜಕ್ಕೂ ಲೋಕವಿದ್ಯೆಯು ತಳಹದಿಯೇ ‘ರ್‍ಯಾಡಿಕಲ್’ ಚಿಂತನರೂಪಿಯಾಗಿದ್ದು, ಇದೇ ನಿಜಕ್ಕೂ ಬದಲಾವಣೆಯ ಭಾಷೆಯೂ ಆಗಿದೆ. ಈ ವಿದ್ಯಾರೂಪಿಕೆಯನ್ನು ನಾವು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಂಡರೆ ಅದರ ಶಕ್ತಿಯ ನಿಜ ಪರಿಚಯವಾಗಲಾರದು. ಕ್ರಿಯೆಯ ಮೂಲಕವೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಲೋಕವಿದ್ಯೆಯ ಲೋಕದ ಮೌಲ್ಯಗಳು, ಜ್ಞಾನಶಾಖಾ ನಿರೂಪಣೆಗಳು, ಎಲ್ಲವೂ ಸಂಪೂರ್ಣ ಭಿನ್ನ. ಕೇವಲ ಸಿದ್ಧಾಂತಗಳು ಇಲ್ಲಿ ಕೆಲಸಕ್ಕೆ ಬರುವುದಿಲ್ಲ. ಇದು ಯಾವ ನಿರ್ಬಂಧಕ್ಕೂ ಒಳಪಡದೆ ನಿಬ್ಬೆರಗಾಗಿಸುವ ಸ್ವಂತಿಕೆ ಪಡೆದಂಥದು. ಹಾಗಾಗಿಯೇ ಇದು ಜಾಗತೀಕರಣಕ್ಕೂ ಸವಾಲಾಗುವ ಶಕ್ತಿ ವಿನ್ಯಾಸಗಳನ್ನು ಪಡೆದಿದೆ. ಮಾತ್ರವಲ್ಲ ದೇಶದ ಸಿಂಹಾಸನಾರೂಢ ಯಜಮಾನ ರಾಜಕೀಯಕ್ಕೂ ಸವಾಲಾಗುವ ರಾಜಕೀಯವನ್ನೂ ಮಾಡಬಲ್ಲದು.



ಲೋಕವಿದ್ಯೆಯ ವಾರಿಸುದಾರರಾದ ಕೃಷಿಕರು, ಕೈಕಸುಬುದಾರರು, ದಲಿತರು, ಗಿರಿಜನರು, ಮಹಿಳೆಯರು ಮುಂತಾದ ಶ್ರಮಿಕ ವರ್ಗ ಈ ದೇಶದ ರಾಜಕೀಯ ಪ್ರಕ್ರಿಯೆಯ ಮೂಲಕ ಶಕ್ತಿ ಪಡೆದವರಲ್ಲ. ಅವರ ಶಕ್ತಿಯ ಮೂಲ ಸ್ವಂತದ್ದು, ಅವರ ವಿದ್ಯೆಯದ್ದು. ಹಾಗಾಗಿಯೇ ಈ ವಿದ್ಯೆಯನ್ನೇ ನಾಶಮಾಡಲು ಹವಣಿಸುವ ಜಾಗತೀಕರಣಕ್ಕೆ ಪ್ರತಿರೋಧ ಶಕ್ತಿಯಾಗಿಯೂ ಈ ಜನರ ರಾಜಕೀಯೇತರ ಶಕ್ತಿಯನ್ನು ಗಟ್ಟಿಗೊಳಿಸುವುದೇ ನಿರ್ಣಾಯಕ ಮಾರ್ಗ. ರಾಜಕೀಯ ನಿರ್ಮಿತಿಯೊಳಗೇ ಆಕೃತಿ ಪಡೆಯುವ ಜಾಗತೀಕರಣ ಶಕ್ತಿಗಳಿಗೆ ಹೋಲಿಸಿದರೆ, ಈ ಲೋಕವಿದ್ಯೆಯ ಶಕ್ತಿಯ ಮೂಲದಲ್ಲಿ ಜೀವದಾಯಕ ಗುಣವಿದೆ. ನ್ಯಾಯ - ನೈತಿಕ ಭಾವಗಳು ಹಾಸುಹೊಕ್ಕಾಗಿ ಅಡಕವಾಗಿವೆ. ಅವೇ ಅದರ ಅಂತಃಚೇತನ ಕೂಡ.

ಆದರೆ ಈ ದಿಸೆಯಲ್ಲಿ ಆಗಬೇಕಾದ ಮಹತ್ವದ ಮೊದಲ ಕಾರ್ಯವೆಂದರೆ, ರಾಜಕೀಯೇತರ ಮಾರ್ಗಗಳನ್ನು ನಿರ್ಮಾಣಮಾಡಿ ಭದ್ರಗೊಳಿಸಿ, ರಾಜಕೀಯವನ್ನೂ ಮಾರ್ಪಾಡುಮಾಡಲು ಪ್ರಯತ್ನಿಸುವುದು. ಗಾಂಧಿಯಿಂದ ಇದಕ್ಕೆ ನಾವು ಸಹಾಯ ಪಡೆಯಬಹುದೋ ಏನೋ. ಗಾಂಧಿ ಕನಸುಕಂಡ ವಿಕೇಂದ್ರೀಕರಣ, ಗ್ರಾಮ ಸ್ವಾಯತ್ತತೆಗಳಿಗಾಗಿ ಜನಸಂಘರ್ಷ, ಚಳುವಳಿಗಳನ್ನು ರೂಪಿಸುವುದೇ ಈ ರಾಜಕೀಯೇತರ ಪ್ರಕ್ರಿಯೆಗಳನ್ನು ಬಲಪಡಿಸುವ ಮಾರ್ಗ. ಗಾಂಧೀಜಿಯ ಸ್ವಾಯತ್ತತೆಯ ಗ್ರಹಿಕೆ ಛಿದ್ರೀಕರಣಗೊಂಡ ಕೇವಲ ರಾಜಕೀಯ ಸ್ವಾಯತ್ತತೆಯ ಆಕೃತಿಯಲ್ಲ. ಯಾಕೆಂದರೆ ಆರ್ಥಿಕ - ರಾಜಕೀಯ - ಸಾಂಸ್ಕೃತಿಕ ಸ್ವಾಯತ್ತತೆಗಳು ಒಂದನ್ನೊಂದು ಬಿಟ್ಟಿಲ್ಲ. ಇವೆಲ್ಲವೂ ಅಂತರ್‌ಪ್ರಕ್ರಿಯೆಗಳ ಮೂಲಕ ಲೋಕವಿದ್ಯೆ ಯಲ್ಲಿ ಅಖಂಡವಾಗಿ ಹೆಣೆದುಕೊಂಡಿವೆ; ಮತ್ತು ಬಹುರೂಪತೆಯ ಸಂಸ್ಕೃತಿ ಸಮಾಜಕ್ಕೆ ಪೋಷಕವಾಗಿವೆ. ಈ ಸ್ವಾಯತ್ತತೆಯಲ್ಲಿ ಜಾಗತೀಕರಣ - ಮೂಲಭೂತ ವಾದಗಳು ಇರಲು ಸಾಧ್ಯವಿಲ್ಲ. ಅದಕ್ಕೇ ಕೋಮುವಾದಿಗಳು ಹಾಗೂ ಜಾಗತಿಕ ಮಾರುಕಟ್ಟೆ ಶಕ್ತಿಗಳು ಬಹುತ್ವವನ್ನು ಪೋಷಿಸುವ ಸ್ವಾಯತ್ತತೆಯ ಸಮಾಜದ ಬದಲಾಗಿ, ಪ್ರಭುತ್ವವನ್ನು ಪೋಷಿಸುವ ಪ್ರಬಲ ರಾಷ್ಟ್ರೀಯತೆ, ‘ಗ್ಲೋಬಲ್ ವಿಲೇಜ್ ಗಳ ಗುಲ್ಲೆಬ್ಬಿಸುವುದು. ಈ ರಾಷ್ಟ್ರೀಯತೆಯ ಕಲ್ಪನೆ, ಜನತಂತ್ರವನ್ನು ಪೊಳ್ಳಾಗಿಸಿ, ಈ ಎರಡೂ ಶಕ್ತಿಗಳಿಗೆ ಬಹಳ ಸುಲಭವಾಗಿ ಬೇರುಬಿಡಲು ಸಹಕಾರಿಯಾಗಿದೆ. ಇಂಥಲ್ಲಿ ಯಜಮಾನ ಶಕ್ತಿಗಳು ದಬ್ಬಾಳಿಕೆ ನಡೆಸುತ್ತಾ ರಾಷ್ಟ್ರೀಯ ಸರಕಾರಗಳು ದುರ್ಬಲವಾಗಿಬಿಡುತ್ತವೆ. ರಾಷ್ಟ್ರೀಯವಾದಿಗಳ ಸ್ವದೇಶೀಯೂ ಇಂಥ ಜಾಗತೀಕರಣ ಎಜೆಂಡಾದ ಭಾಗವೇ ಆಗಿರುವುದರಿಂದ ಗಾಂಧೀಜಿಯ ಸ್ವದೇಶೀ ಕಲ್ಪನೆಗೆ ತದ್ವಿರುದ್ಧವಾಗಿದೆ.

ಸಂಪೂರ್ಣ ಸ್ವಾಯತ್ತತೆಗೆ ಚಾಲನೆ ನೀಡಬಲ್ಲ ಚಳುವಳಿಗೆ ಯಾವುದು

ಪರ್ಯಾಯ ನೆಲೆಯಾದೀತು? ಬಹುಶಃ ಸ್ಥಳೀಯ ಉತ್ಪಾದನೆ ಮತ್ತು ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಗೆ ಒತ್ತಾಯಿಸುವುದು. ಆದರೆ ಇಲ್ಲಿ ಸ್ವಲ್ಪ ಬದಲಾವಣೆಯ ಅಗತ್ಯವಿದೆ ಎನ್ನುತ್ತಾರೆ ಸುನಿಲ್ ಸಹಸ್ರಬುದ್ಧೆ. ಅಂದು ಉತ್ಪಾದನಾ ವ್ಯವಸ್ಥೆಯೇ ಶೋಷಣೆಯ ನೆಲೆಯಾದ್ದರಿಂದ ಸ್ಥಳೀಯ ಮಟ್ಟಕ್ಕೆ ಉತ್ಪಾದನಾ ಪ್ರಕ್ರಿಯೆಯು ವಿಕೇಂದ್ರೀಕರಣ ಗೊಂಡರೆ, ಆ ಉತ್ಪನ್ನಗಳಿಗೆ ಬೇಡಿಕೆ ಸಹಜಸಿದ್ಧವಾಗಿತ್ತು. ಅಂದು ಸ್ಥಳೀಯ ಮಾರುಕಟ್ಟೆಗಳು ಇಷ್ಟೊಂದು ದುಃಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಗಾಂಧೀಜಿಯ ಗ್ರಾಮ ಸ್ವರಾಜ್ಯ ಕಲ್ಪನೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಉತ್ಪಾದನೆಗೆ ಸ್ಥಳೀಯ ಮಾರುಕಟ್ಟೆಗಿಂತ ಮೊದಲ ಪ್ರಾಶಸ್ತ್ಯವಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಶೋಷಣೆಯು ಸ್ಥಳೀಯ ಉತ್ಪಾದನಾ ಕೇಂದ್ರದಿಂದ ಮಾರುಕಟ್ಟೆ ಕೇಂದ್ರಕ್ಕೆ ಸ್ಥಳಾಂತರಗೊಂಡಿದೆ. ಜಾಗತಿಕ ಮಾರುಕಟ್ಟೆ ಶಕ್ತಿಗಳು ಸ್ಥಳೀಯ ಮಾರುಕಟ್ಟೆಯನ್ನು ಸಂಪೂರ್ಣ ಧ್ವಂಸಮಾಡಿ ಸ್ಥಳೀಯ ಉತ್ಪಾದನಾ ವ್ಯವಸ್ಥೆಯನ್ನೇ ನಿರ್ಮೂಲ ಮಾಡುವ ಹಂತದಲ್ಲಿವೆ.

ಆದರೆ ಇನ್ನೊಂದೆಡೆ ಈ ಕೇಂದ್ರಗಳಲ್ಲೇ ಬದುಕುವ ಹಕ್ಕಿಗಾಗಿ ಹೋರಾಟದ ಹೊಸ ಹೊಸ ಚಳುವಳಿಗಳು ರೂಪುಗೊಳ್ಳುತ್ತಿರುವುದನ್ನೂ ನಾವು ಗಮನಿಸಬಹುದು. ಕಳೆದ ೨೦ ವರ್ಷಗಳಿಂದ ಈ ಸಮುದಾಯಗಳು ರಾಜಕೀಯೇತರ ಸಂಘಟನೆಗಳಾಗಿ ರೂಪುಗೊಂಡು ರಾಜಕೀಯೇತರ ಶಕ್ತಿ ಸಂಚಯಿಸಿಕೊಂಡು ರಾಜಕೀಯ ಪ್ರಭುತ್ವಕ್ಕೆ ಸಕಾರಾತ್ಮಕ ಪ್ರತಿರೋಧ ತೋರಿಸಲು ಆರಂಭಿಸಿವೆ. ಇದನ್ನು ಕಾಣುವ ಕಣ್ಣು ನಮಗೆ ಬೇಕು. ಈ ರಾಜಕೀಯೇತರ ವಿದ್ಯಮಾನದ ಜತೆ ಇನ್ನೊಂದು ಪ್ರಬಲವಾದ ವಿದ್ಯಮಾನವನ್ನೂ ಸಹಸ್ರಬುದ್ಧೆ ಗುರುತಿಸುತ್ತಾರೆ. ಕೇಂದ್ರೀಕೃತ ಉತ್ಪಾದನೆಯ ಬಟ್ಟೆಯ ದೊಡ್ಡ ದೊಡ್ಡ ಗಿರಣಿಗಳು ಇಂದು ಮುಚ್ಚಲ್ಪಟ್ಟು ಬಟ್ಟೆ ಉತ್ಪಾದನೆಯ ಹಲವಾರು ಹಂತಗಳು ಮರಳಿ ವಿಕೇಂದ್ರೀಕೃತ ನೆಲೆಯಲ್ಲಿ ಮನೆಮನೆಗೆ ಮರಳುತ್ತಿವೆ. ಇದರ ಜತೆ, ಕಂಪ್ಯೂಟರ್ ಚಿಪ್ಸ್‌ನಂದ ಹಿಡಿದು, ಹಲವಾರು ಇಲೆಕ್ಟ್ರಾನಿಕ್ ಅರೆ ಸರಕುಗಳು, ಮಾಹಿತಿ ತಂತ್ರಜ್ಞಾನದ 'ಸಾಫ್ಟ್‌ವೇರ್' ಉತ್ಪಾದನೆಗಳೇ ಮುಂತಾದ ಇಲೆಕ್ಟ್ರಾನಿಕ್ ಯುಗದ ಉತ್ಪಾದನೆಯ ಅನೇಕ ಹಂತಗಳು, ಗುಡಿ ಕೈಗಾರಿಕೆಯಂತೆ ಮನೆಮನೆಗೆ ವಿಕೇಂದ್ರೀಕರಣಗೊಳ್ಳುತ್ತಿವೆ. ಇಂದು ಈ ಕ್ಷೇತ್ರಗಳು ಹೊಳಪಿನಿಂದ ಮಿಂಚುತ್ತಿದ್ದರೂ, ಭವಿಷ್ಯದಲ್ಲಿ ಇವೂ ಶೋಷಣೆಗೆ ಒಳಗಾಗುವ ಎಲ್ಲ ಸೂಚನೆಗಳಿವೆ. 'ಸಾಫ್ಟ್‌ವೇರ್' ಕ್ಷೇತ್ರದ ಇಂದಿನ ಬಿಕ್ಕಟ್ಟಿನಲ್ಲಿ ಈಗಾಗಲೇ ನಾವು ಇದನ್ನು ಗಮನಿಸಬಹುದು. ಹೀಗಾಗಿ ಮುಂದಿನ ದಶಕಗಳಲ್ಲಿ ಪಾರಂಪರಿಕ ಲೋಕವಿದ್ಯಾ ವಾರಿಸುದಾರರಾದ ಕುಂಬಾರ, ನೇಕಾರ, ಕೃಷಿಕ ಮುಂತಾದವರಿಂದ ಹಿಡಿದು ಕಂಪ್ಯೂಟರ್ ಚಿಪ್ಸ್, ಸಾಫ್ಟ್‌ವೇರ್‌ಗಳ



ವಾರಿಸುದಾರರವರೆಗೆ ಹಮ್ಮಿಕೊಂಡಿರುವ ಒಂದು ವಿಶಾಲವಾದ ಹೊಸ 'ಸೋಶಿಯಲ್ ಕ್ಲಾಸ್' ಆಗಿ ರೂಪುಗೊಳ್ಳುವ ಸಾಧ್ಯತೆಗಳಿವೆ. ಇವೆಲ್ಲವೂ ಒಟ್ಟಾಗಿ ಸತ್ವಶಾಲಿಯಾಗಿ ತಮ್ಮ ಹೊಸ 'ಪರ್ಯಾಯ ಎಜೆಂಡಾ'ವನ್ನು ಮಂಡಿಸುವ ಎಲ್ಲ ಸಾಧ್ಯತೆಗಳೂ ಇವೆ. ಕಾರಣ, ಈ ಸಮುದಾಯಗಳನ್ನು ಸಂಪೂರ್ಣ ಅಂಚಿಗೆ ತಳ್ಳಿ ದೇಶದ ಪ್ರಮುಖ ವಾಹಿನಿಯಿಂದ ಹೊರಗಿಡುವ ಮೂಲಕ ಈ ರಾಜಕೀಯೇತರ ಶಕ್ತಿಗಳನ್ನು ರಾಜಕೀಯ ಶಕ್ತಿಗೆ ಸಂಪೂರ್ಣ ಅಡಿಯಾಳಾಗಿಸುವುದಕ್ಕೂ ಒಂದು ಮಿತಿ ಬೇಕು.

ಈಗಾಗಲೇ ಲೋಕವಿದ್ಯೆಯ ಸಹಾಯದಿಂದಾಗಿ ಹೊಸ ಸಾಮಾಜಿಕ ವರ್ಗವಾಗಿ ಮರುಹುಟ್ಟು ಪಡೆಯುತ್ತಿರುವ ಈ ವಿದ್ಯೆಯು ಮತ್ತೆ ರಾಜಕೀಯೇತರ ಪ್ರಕ್ರಿಯೆಗಳಿಗೆ ಚಾಲನೆ ಕೊಟ್ಟಿದೆ. ಇಂದು ನಾವು ಹೆಚ್ಚುತ್ತಿರುವ ಮಾನವ ಹಕ್ಕಿನ ಚಳುವಳಿ, ಪರಿಸರ ಚಳುವಳಿ, ನಿರಾಶ್ರಿತರ ಚಳುವಳಿ, ಮಹಿಳಾ ಹಕ್ಕುಗಳ ಚಳುವಳಿ ಮುಂತಾದವುಗಳಲ್ಲಿ ಇದನ್ನು ಗಮನಿಸಬಹುದು. ನರ್ಮದಾ ಬಚಾವೋ ಆಂದೋಲನ, ಜಾಗತೀಕರಣದ ವಿರುದ್ಧ ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತಿರುವ ರೈತರ ಪ್ರತಿಭಟನೆಗಳು, ಅವಿಭಜಿತ ದಕ್ಷಿಣ ಕನ್ನಡದಲ್ಲಿ ನಡೆದ ಕೊಜೆಂಟ್ರಿಕ್ಸ್, ನಾಗಾರ್ಜುನ ವಿದ್ಯುತ್ ಸ್ಥಾವರಗಳ ವಿರುದ್ಧ ಮೀನುಗಾರರ ಚಳುವಳಿ, ಇಂದು ನಡೆಯುತ್ತಿರುವ ಕುದುರೆಮುಖ ಗಣಿಗಾರಿಕೆಗಳ ವಿರುದ್ಧ ಚಳುವಳಿ ಮತ್ತು ಪಶ್ಚಿಮಘಟ್ಟದ ತಪ್ಪಲಲ್ಲಿರುವ ಗಿರಿಜನರ ಬದುಕಿನ ಹಕ್ಕಿನ ಚಳುವಳಿ – ಮುಂತಾದುವುಗಳು ಇದಕ್ಕೆ ಕೆಲವು ನಿದರ್ಶನಗಳಷ್ಟೇ. ಯಾವ ಸಾಮಾಜಿಕ ವ್ಯವಸ್ಥೆಯಲ್ಲೂ ಸರಿಯಾಗಿ ಸೇರಿಕೊಳ್ಳಲಾರದೆ ನಿರಂತರವಾಗಿ ಶೋಷಣೆಗೊಳಗಾಗುತ್ತಿರುವ ಮಹಿಳೆಯರಿಗೆ ಇಲ್ಲೊಂದು ಐತಿಹಾಸಿಕ ಅವಕಾಶವಿದೆ.

ಆದರೆ ಈ ಚಳುವಳಿಗಳು ದೀರ್ಘಾವಧಿಯಲ್ಲಿ ನಿಜಕ್ಕೂ ಜನರ ಏಳಿಗೆಗೆ ಶ್ರಮಿಸಬೇಕಾದರೆ, ಈ ಚಳುವಳಿಗಳ ಬೇಡಿಕೆಗಳು, ಕೆಲಸ ಮಾಡುವ ಕ್ರಮಗಳು, ಖಂಡಿತವಾಗಿಯೂ ಲೋಕವಿದ್ಯೆಯ ಜತೆ ತಾತ್ವಿಕವಾದ ಹಾಗೂ ಕ್ರಿಯಾತ್ಮಕವಾದ ಸಾವಯವ ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಇಂಥ ಚಳುವಳಿಗಳು ರಾಜಕೀಕರಣದ ಪ್ರಕ್ರಿಯೆಯಲ್ಲಿ, ಕೇವಲ ಸೀಮಿತ ಬೇಡಿಕೆ, ಆಸಕ್ತಿಗಳಲ್ಲೇ ಸ್ಥಗಿತಗೊಳ್ಳದೆ, ವಿಶಾಲ ವ್ಯಾಪ್ತಿಯನ್ನು ಪಡಕೊಳ್ಳುತ್ತವೆ. ಅರ್ಥಾತ್ 'ಲೋಕವಿದ್ಯೆ' ಯನ್ನು ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿ ಅಳವಡಿಸಿಕೊಳ್ಳುವ ಯೋಜನೆಯನ್ನು ರೂಪಿಸಿ ಈ ಬೇಡಿಕೆಗಳನ್ನು ತಮ್ಮ ಬೇಡಿಕೆಗಳ ಪಟ್ಟಿಯಲ್ಲಿ ರಾಜಕೀಯೇತರ ಸಮುದಾಯ ಸಂಘಟನೆಗಳು ಸೇರಿಸಿಕೊಳ್ಳಬೇಕು; ಮತ್ತು, ಈ ರಾಜಕೀಯೇತರ ಸಂಘಟನೆ, ರಾಜಕೀಯ ಸಂಘಟನೆಗಳ ನಡುವೆ ನಿರಂತರ ಸಂವಾದ

ನಡೆಯುತ್ತಿರಬೇಕಾಗುತ್ತದೆ.

ಇಂದಿನ ಪ್ರಸ್ತುತ ಸಂದರ್ಭದಲ್ಲಿ, ಈ ಹಿಂದೆ ವಿವರಿಸಿದ ಕಾರಣಗಳಿಗಾಗಿ ಸ್ಥಳೀಯ ಮಾರುಕಟ್ಟೆ, ಸ್ಥಳೀಯ ಉತ್ಪಾದನೆಗಿಂತ ಮೊದಲ ಪ್ರಾಶಸ್ತ್ಯ ಪಡೆಯಬೇಕಾಗಿದೆಯೆಂದೆನಷ್ಟೇ. ಇಲ್ಲೇ ಗಾಂಧೀಜಿಯ ಸ್ವರಾಜ್ ಪ್ರಕ್ರಿಯೆ, ಅಂದರೆ ಉತ್ಪಾದನೆ ಮತ್ತು ಅನುಭೋಗ(consumption)ಗಳು ಸ್ಥಳೀಯವಾಗಿ ತಮ್ಮ ಪ್ರಾಮುಖ್ಯತೆಯನ್ನು ವಿನಿಮಯ ಮಾಡಿಕೊಂಡು ಮರುಹುಟ್ಟು ಪಡೆಯಬೇಕಾಗಿರುವುದು. ಇದಕ್ಕಾಗಿ ಖಾದಿ ಗ್ರಾಮೋದ್ಯೋಗ ಚಳುವಳಿಯನ್ನು ಸ್ಥಳೀಯ ಮಾರುಕಟ್ಟೆ ಚಳುವಳಿಯಾಗಿ ಪರಿವರ್ತಿಸಬೇಕು. ಕೈ ಕಸುಬುದಾರರ, ಕೃಷಿಕರ, ಗುಡ್ಡಗಾಡು ಜನರ, ಮಹಿಳೆಯರ ಸಂಘಟನೆಗಳು ಪರಸ್ಪರ ಕೈಜೋಡಿಸಿ ಒಗ್ಗೂಡಿ, ಸ್ಥಳೀಯ ಮಾರುಕಟ್ಟೆಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಕಾಲ ಪ್ರಾಪ್ತವಾಗಬೇಕು. ಇಂದು ಸ್ಥಳೀಯ ಉತ್ಪಾದನೆಯು ಸ್ಥಳೀಯ ನೆಲೆಯಲ್ಲಿ ಹಿಂದಿನಂತೆ ತಾನೇ ತಾನಾಗಿ ಬೇಡಿಕೆಯನ್ನು ಸೃಷ್ಟಿಸಿಕೊಳ್ಳಲಾರದು. ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಯು ಮೊದಲು ಊರ್ಜಿತಗೊಂಡು, ಈ ಜನಾಂಗಗಳು ಮಾರುಕಟ್ಟೆಯನ್ನು ನಿಯಂತ್ರಿಸುವಂತಾದರೆ ಕೆಲವೇ ತಿಂಗಳುಗಳಲ್ಲಿ ಆ ಪ್ರದೇಶವು ಸಾಮಾನ್ಯ ಬದುಕಿಗೆ ಬೇಕಾದ ಎಲ್ಲಾ ಆವಶ್ಯಕತೆಗಳನ್ನೂ ಉತ್ಪಾದಿಸಿ, ಧಾರಾಳವಾಗಿ ಸ್ಥಳೀಯ ಬಾಜಾರುಗಳಿಗೆ ಹರಿಸಲು ಆರಂಭಿಸಿಬಿಡುತ್ತದೆ. ದೇಶೀ ಜ್ಞಾನ ಮೂಲಗಳು ಇನ್ನೂ ಊರ್ಜಿತ ಸ್ಥಿತಿಯಲ್ಲಿದ್ದು ಈ ಅವಕಾಶಕ್ಕಾಗಿಯೇ ಕಾಯುತ್ತಿವೆ. ಹಾಗಾಗಿ ಈ ಜಾಗತೀಕರಣ ಸಂದರ್ಭದಲ್ಲಿ ಸ್ಥಳೀಯ ಮಾರುಕಟ್ಟೆ ಕ್ರಾಂತಿಯೇ ಅತ್ಯಂತ ಮುಖ್ಯವಾದ ಪ್ರಜಾಪ್ರಭುತ್ವವಾದೀ ಘಟನೆ ಎಂದು ನನ್ನ ಅನಿಸಿಕೆ.

ಆಗ ಈ ಸ್ಥಳೀಯ ಮಾರುಕಟ್ಟೆಯು, ಸರಿಸಮಾನ ವಿನಿಮಯ, ಕೊಡುಕೊಳ್ಳುವಿಕೆಯ ಕೇಂದ್ರವಾಗಿ, ಕ್ರಮೇಣ ರಾಜಕೀಯೇತರ ಶಕ್ತಿಯ ಸಂಘಟಿತ ಚಟುವಟಿಕೆಯ ಕೇಂದ್ರವಾಗುವ ಸಾಧ್ಯತೆ ಪಡೆಯುತ್ತದೆ; ಮತ್ತು ಇದು ಕ್ರಮೇಣ ರಾಜಕೀಯೇತರ ಸಮುದಾಯಗಳ ಸೃಷ್ಟಿ ಸಾಧ್ಯತೆಯನ್ನು ಸ್ವಲ್ಪಕಾಲದಲ್ಲೇ ಆಗಗೊಡುತ್ತದೆ. ಅಂಥ ಸ್ಥಳೀಯ ಮಾರುಕಟ್ಟೆ ಕೇಂದ್ರಗಳ ಸಮಗ್ರಜಾಲ, ಜಾಗತಿಕ ಮಾರುಕಟ್ಟೆ ವ್ಯವಸ್ಥೆಯನ್ನೂ ನಿಯಂತ್ರಿಸಬಲ್ಲುದು; ಮಾತ್ರವಲ್ಲ, ರಾಷ್ಟ್ರದ ರಾಜಕೀಯ ಪ್ರಭುತ್ವವನ್ನೂ ನಿಯಂತ್ರಿಸಬಲ್ಲುದು.

ಆದರೆ ಈ ಪ್ರಕ್ರಿಯೆಗೆ ತೊಡಕಿರುವುದು ನಾನು ಹಿಂದೆ ಪ್ರಸ್ತಾಪಿಸಿದಂತೆ ರಾಜಕೀಯವಾಗಿ ಸಂಘಟಿಸಲ್ಪಟ್ಟಿರುವ ವೈಜ್ಞಾನಿಕ ನೆಲೆಗಟ್ಟಿನ ಪಠ್ಯ ಪುಸ್ತಕಗಳ ಆಧುನಿಕ ಶಿಕ್ಷಣದಲ್ಲಿ; ಮತ್ತು ನಿರ್ದಿಷ್ಟ ರೀತಿಯಲ್ಲಿ ಸಾಗುವ ನಮ್ಮ ಇಂದಿನ ಬೌದ್ಧಿಕ ಚಿಂತನೆಯ ದಾರಿಯಲ್ಲಿ. ಈ ಚಿಂತನೆಯ ಮಹಾಕಥನ ರೂಪಕದಲ್ಲಿ, ಡಿ.ಆರ್.



ನಾಗರಾಜ್ ಅವರು ಎನ್ನುವಂತೆ, ''ವಸಾಹತೀಕೃತ ಸಮಾಜಗಳ ಬಗ್ಗೆ ಒಂದು ಮುಗ್ಧವಾದ ಏಕರೂಪೀ ಕಲ್ಪನೆಯಿದೆ. ಇದು ಪಾಶ್ಚಾತ್ಯ ಅಭಿವೃದ್ಧಿ ಪಥದ ಹೊರಗೆ ವಿವಿಧ ಸ್ತರಗಳ ಬಹುಮುಖೀ ಸ್ವತಂತ್ರ ಜಗತ್ತೊಂದು ಇರಲು ಸಾಧ್ಯವೆಂದು ಪರಿಗಣಿಸುವುದಿಲ್ಲ... (ನಾವು) ಕಾಣುವ ರೀತಿಯು ಇಷ್ಟೊಂದು ಶಿಕ್ಷಿತವೂ ಶಾಸ್ತ್ರೀಯವೂ ಆಗಿಬಿಟ್ಟಾಗ ಯಾವ ಲೋಕವೂ ಎದುರಾಗುವುದಿಲ್ಲ....'' ಹಾಗಾಗಿ, ''ಒಂದು ನಿರ್ದಿಷ್ಟ ಬಗೆಯ ಜ್ಞಾನ, ಒಂದು ನಿರ್ದಿಷ್ಟ ಬಗೆಯ ಚಿಂತನಕ್ರಮವನ್ನು ಪ್ರಚೋದಿಸಿ ಉಳಿದೆಲ್ಲ ಸಾಧ್ಯತೆಗಳನ್ನು ಅವುಗಳ ಸೃಷ್ಟಿ ಪ್ರತಿಭೆಗಳನ್ನು ಅಲ್ಲಗಳೆಯುವ ಬೌದ್ಧಿಕ ಜಗತ್ತಿನಲ್ಲಿ ಆದಿಮ ಪ್ರಳಯವೇ ಅತ್ಯಂತ ಸೃಜನಶೀಲ ಸ್ಥಿತಿ... ಈ ಬೌದ್ಧಿಕ ಪ್ರಳಯ ಹೊಸಬಗೆಯ ಸಂಯೋಜನೆಗಳಿಗೆ ದಾರಿ ಮಾಡಿಕೊಡುವುದು'' ಎಂದು ಡಿ.ಆರ್. ಅಭಿಪ್ರಾಯಪಡುತ್ತಾರೆ. ಆದ್ದರಿಂದಲೇ ರಾಜಕೀಯವಾಗಿ ಸಂಘಟಿಸಲ್ಪಟ್ಟಿರುವ ಈ ಆಧುನಿಕ ಶಿಕ್ಷಣದ ಸಮಗ್ರಮೂಲವನ್ನೇ ಪ್ರಶ್ನಿಸುವ ಮೂಲಕ, ಸಮಾಜದಲ್ಲಿ ರಾಜಕೀಯೇತರ ಶಕ್ತಿಯ ಅಭಿವೃದ್ಧಿಗೆ ಲೋಕವಿದ್ಯೆಯ ತಳಗಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯನ್ನು 'ರ್‍ಯಾಡಿಕಲ್' ಆಗಿ ಪುನರ್ರಚಿಸಬೇಕಾಗಿದೆ. ''ಈ ದೇಶವನ್ನು ಸಮಸ್ತ ಪ್ರಜೆಗಳ ಹಿತಕ್ಕೆ ಪೂರಕವಾಗಿ ನಡೆಸಬೇಕಾದರೆ ಕಳೆದ ಹಲವಾರು ದಶಕಗಳಿಂದ ಕಲಿಯುತ್ತ ಬಂದ ಶಿಕ್ಷಣದ ಭಾರವನ್ನು ನಾವು ಮೊದಲು ಕಳಚಿಕೊಳ್ಳಬೇಕು'' ಎಂದು ೧೯೪೭ರ ಮೊದಲೇ ಹೇಳಿದ್ದ ಗಾಂಧೀಜಿಯೇ ಈ ಮಹತ್ವದ ಬದಲಾವಣೆಗೆ ಮತ್ತೊಮ್ಮೆ ನಮಗೆ ಆರಂಭದ ನೆಲೆ. ಗಾಂಧೀಜಿ ಬ್ರಿಟಿಷರ ವಿರುದ್ಧ ತನ್ನ ಪ್ರತಿರೋಧದ ಆಕೃತಿಗಳ ಆಯ್ಕೆಗಾಗಿ ಮತ್ತೆ ಮತ್ತೆ ಮರಳುತ್ತಿದ್ದ ಸಾಮಾನ್ಯ ಜನರ ಲೋಕವಿದ್ಯೆಯ ನೆಲೆಗಟ್ಟಿನಲ್ಲಿ ಜಾಗತಿಕ ಶಕ್ತಿಗಳನ್ನು ದಂಗುಪಡಿಸುವ, ಅವುಗಳಿಗೆ ತಿರುಮಂತ್ರವಾಗಬಹುದಾದ, ತೀರ ಅಗ್ರಾಹ್ಯವಾದ ವಿದ್ರೋಹೀ ಪ್ರತಿಭೆಯಿದೆ ಎಂದು ನನ್ನ ನಂಬಿಕೆ.

ಇತ್ತೀಚೆಗೆ ನಿಧನರಾದ ಪರಿಸರವಾದಿ **ಶ್ರೀ ಶಂಪಾ ದೈತೋಟ**
ಹಿರಿಯ ಸಾಹಿತಿ, ವಿಮರ್ಶಕ **ಶ್ರೀ ಗೌರೀಶ ಕಾಯ್ಕಿಣಿ**
ಪ್ರಸಿದ್ಧ ನಟ, ರಂಗತಜ್ಞ **ಶ್ರೀ ಮನೋಹರ ಸಿಂಗ್**
ರಂಗನಿರ್ದೇಶಕ **ಶ್ರೀ ಜಯತೀರ್ಥ ಜೋಶಿ**
ಅವರಿಗೆ ನೀನಾಸಮ್‌ನ ಶ್ರದ್ಧಾಂಜಲಿ

# ಸಾವ ಸಮ್ಮುಖದಲ್ಲಿ ಜೀವನಾದ
## ಬೇಂದ್ರೆಯವರ ‘ನಾದಲೀಲೆ’ : ಒಂದು ಅನುಭವ

ಎಸ್.ಆರ್. ವಿಜಯಶಂಕರ

*‘‘ಕಥೆ ಆಯಿತೇ ಅಣ್ಣ, ಬಹಳ ಸಣ್ಣ*
*ಕಥೆಯ ಮೈಗಿಂತ ಮಿಗಿಲದರ ಬಣ್ಣ’’*
*– ದ.ರಾ. ಬೇಂದ್ರೆ (‘ಕನಸಿನಕಥೆ’ ಕವನದಲ್ಲಿ)*

*‘‘ಬೇಂದ್ರೆ, ಮುಖ್ಯವಾಗಿ, ಪ್ರಜ್ಞೆಯ ವಿವಿಧ ಅವಸ್ಥೆಗಳನ್ನು ಕನ್ನಡದಲ್ಲಿ ಅನನ್ಯವೆಂಬಂತೆ ಸೃಷ್ಟಿಸಿರುವ ಕವಿ’’*
*– ಡಾ|| ಯು.ಆರ್. ಅನಂತಮೂರ್ತಿ (‘ಪೂರ್ವಾಪರ’ ಸಂಕಲನದಲ್ಲಿ)*

ದಿವಂಗತ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ಅಂಬಿಕಾತನಯದತ್ತ) ಅವರ ‘ನಾದಲೀಲೆ’ ಕವನ ಸಂಕಲನದ ಪ್ರಥಮ ಪ್ರಕಟಣೆ ಇಂದಿಗೆ ೬೪ ವರುಷಗಳ ಹಿಂದೆ, ೧೯೩೮ನೇ ಇಸವಿಯಲ್ಲಿ, ಮಾಸ್ತಿಯವರ ಮುನ್ನುಡಿಯೊಂದಿಗೆ. ಅದರ ‘ನಾದಲೀಲೆ’ ಎಂಬ ಕವನ ನಿಖರವಾಗಿ ಪ್ರಕಟವಾದ ವರುಷ ನನಗೆ ತಿಳಿದಿಲ್ಲ. ಆದರೆ ೨೦೦೨ನೇ ಇಸವಿಯಲ್ಲಿ ವೈಯಕ್ತಿಕವಾದೊಂದು ಸಂದರ್ಭದಲ್ಲಿ ನನ್ನ ವಿಚಾರದ, ಭಾವದ ಭಾಗವಾಗಿ ‘ನಾದಲೀಲೆ’ ಕವನ ನನ್ನೊಳಗೆ ಜೀವ ತಳೆಯಿತು. ಆಗ ಬೇಂದ್ರೆಯವರ ‘ನಾದಲೀಲೆ’ ಕವನವನ್ನು ಸಾವು-ಜೀವದ ಆಟದಂತೆ ಪರಿಭಾವಿಸಿದ ನನ್ನ ಖಾಸಗಿ ಕಾವ್ಯಾನುಭವವನ್ನು ಹಂಚಿಕೊಳ್ಳುವುದೇ ಈ ಬರಹದ ಉದ್ದೇಶ.

ಬೇಂದ್ರೆಯವರ ‘ನಾದಲೀಲೆ’ ಕವನದ ಪಠ್ಯ ಹೀಗಿದೆ:

*೧*

*ಕೋಲು ಸಖೀ, ಚಂದ್ರಮುಖೀ, ಕೋಲೆ ನಾದಲೀಲೆ ||ಪ||*

*ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ*
*ತರಳ ಎರಳೆ, ಚಿಗುರ ಚಿಗುರೆ, ಹೂವು ಹೂವು ಹಲ್ಲೆ*



*ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ*
*ಅತ್ತಣಿಂದ ಬೇಟೆಗಾರ ಬರುವ ನಾನು ಬಲ್ಲೆ*
*ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ*
*ಕೋಲು ಸಖೀ....*

*೨*
*ಬೀರುತಿರುವ ಪ್ರಾಣವಾಯು ಹೀರುತಿಹವೆ ನೀರೆ*
*ಕರೆವ ಕರುವು, ಕುಣಿವ ಮಣಕ, ತೊರೆವ ಗೋಗಭೀರೆ,*
*ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ*
*ಕಾಣೆ ಕೊಳಲಿನವನ ಎನುವೆ, ಎಲ್ಲು ಇಹನು ಬಾರೆ*
*ಬೀರುತಿರುವ ಪ್ರಾಣವಾಯು ಹೀರುತಿಹವೆ ನೀರೆ*
*ಕೋಲು ಸಖೀ....*

*೩*
*ಬೆಳ್ಳಿ ಚುಕ್ಕೆ ಚಿಕ್ಕೆಯಾಗಿ ಮುಳುಗಿತಲ್ಲೆ; ಬಾಲೆ*
*ಮುಕುಲ, ಅಲರು, ಮಲರು, ಪಸರ ಕಂಡು ಕಣ್ಣು ಸೋಲೆ*
*ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ*
*ಕಾದಲನೆಡೆ ಬೇಡ, ಬಹಳು, ಕಾದಲೆ ಹೂಮಾಲೆ!*
*ಬೆಳ್ಳಿ ಚುಕ್ಕೆ ಚಿಕ್ಕೆಯಾಗಿ ಮುಳುಗಿತಲ್ಲೆ ಬಾಲೆ*
*ಕೋಲು ಸಖೀ....*

*೪*
*ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ, ನಾರಿ.*
*ಮುಗಿಲಬಾಯ ಗಾಳಿಕೊಳಲ ಬೆಳಕ ಹಾಡ ಬೀರಿ*
*(ಕಂಗೊಳಿಸುವ ಕೆಂಪು ಇರಲಿ, ಕಂಗೆಡಿಸುವ ಮಂಜು ಬರಲಿ)*
*ಕಳೆಯಲಿಲ್ಲೆ ಕತ್ತಲಂಥ ಕತ್ತಲವೆ ಜಾರಿ ?*
*ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ, ನಾರಿ*
*ಕೋಲು ಸಖೀ....*

ಈ ಓದಿನ ಬಳಿಕ ನನ್ನ ಖಾಸಗಿ ಅನುಭವದ ಹಿನ್ನೆಲೆ ಹೇಳಬೇಕು. ಅದು ಜೀವವನ್ನು ಅಪಾಯಕ್ಕೆ ಒಡ್ಡಿದ ಒಂದು ಆಕಸ್ಮಿಕ ಅನಾರೋಗ್ಯದ ವಿಚಾರ.

ಕಳೆದ ತಿಂಗಳು (ಜುಲಾಯಿ ೨೦೦೨) ದೇಹದ ಚೈತನ್ಯವನ್ನು ಹಿಂಡಿ ಹಿಪ್ಪೆ ಮಾಡಿದ ನಾಲ್ಕು ದಿನಗಳ ವಿಪರೀತ ಜ್ವರ ಬಂತು. ತಜ್ಞ ವೈದ್ಯರು ವೈರಲ್‌ಜ್ವರ ಎಂದು ಔಷಧಿ ನೀಡಿದರು. ಐದನೇ ದಿನ ರಾತ್ರೆ ನನ್ನನ್ನು ಪರೀಕ್ಷಿಸಲು ನಿತ್ಯ ಮನೆಗೆ ಬರುತ್ತಿದ್ದ

ಚರ್ಮರೋಗ ತಜ್ಞನಾದ ನನ್ನ ಹೆಂಡತಿಯ ತಮ್ಮ ನನ್ನ ಮೈಯಲ್ಲಿ ಪುಟ್ಟ ರಕ್ತನಾಳಗಳು ಅಲ್ಲಿಲ್ಲಿ ಒಡೆದು ಚರ್ಮದಲ್ಲಿ ರಕ್ತ ಮೆಲ್ಲಗೆ ಒಸರುವುದನ್ನು ಗಮನಿಸಿ, ಅದಕ್ಕೆ ತಕ್ಷಣ ಚಿಕಿತ್ಸೆಯ ಅಗತ್ಯವಿದೆಯೆಂದು ರಾತ್ರೆ ಹನ್ನೊಂದು ಗಂಟೆಗೆ, ತಕ್ಷಣ ಬಂದ ನನ್ನ ತಮ್ಮನ ಕಾರಲ್ಲಿ ಕೊಂಡೊಯ್ದು, ನನ್ನನ್ನು ಬೆಂಗಳೂರಿನ ಸೈಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಸೇರಿಸಿದ. ಮುಂದಿನ ಎರಡು ವಾರಗಳ ಕಾಲ ನಾನು ಅಲ್ಲಿದ್ದೆ.

ರಕ್ತವನ್ನು ಹೆಪ್ಪುಗಟ್ಟಿಸಲು ನೆತ್ತರಿನೊಳಗೆ ಹದಿಮೂರು ಪರಿಕರಗಳಿವೆ. ಈ ಹದಿಮೂರು ಅಂಶಗಳಿಗೆ ನಾಯಕ ಪ್ಲೇಟ್‌ಲೆಟ್ (Platelet) ಎಂಬ ರಕ್ತಕಣ. ಇದು ಬಿಳಿ, ಕೆಂಪು ರಕ್ತಕಣಗಳಂತೆ ರಕ್ತದಲ್ಲಿ ಇರಬೇಕಾದ ಅಂಶ. ಈ ಪ್ಲೇಟ್‌ಲೆಟ್ ಕಣಗಳ ಆಜ್ಞೆಯಂತೆ ಇತರ ಹನ್ನೆರಡು ಅಂಶಗಳೂ ಸೇರಿ ಗಾಯಗೊಂಡಾಗ ರಕ್ತ ಹೆಪ್ಪುಗಟ್ಟುತ್ತದೆ. ಗಾಯದಿಂದ ರಕ್ತಸೋರುವುದು ನಿಲ್ಲುತ್ತದೆ. ದೇಹದ ಒಳಗೆ ಹೃದಯದ ಪ್ರತಿ ಬಡಿತಕ್ಕೂ ಚಲಿಸುವ ರಕ್ತದ ನಿರಂತರ ಚಲನೆ ಇದೆ. ದೇಹದೊಳಗೆ ರಕ್ತಹರಿಯುವಾಗ ಅಲ್ಲಲ್ಲಿ ಸಣ್ಣಪುಟ್ಟ ಸಹಜ ರಕ್ತಸ್ರಾವಗಳಾಗುತ್ತಾ ಇರುತ್ತವೆ. ಆ ಸ್ರಾವವನ್ನು ಈ ಪ್ಲೇಟ್‌ಲೆಟ್ ಕಣಗಳು ಸ್ವಾಭಾವಿಕವಾಗಿ ಕಟ್ಟುತ್ತವೆ. ಹೀಗೆ ನೆತ್ತರು ಕಟ್ಟಿಸಲು ರಕ್ತದಲ್ಲಿ ಪ್ಲೇಟ್‌ಲೆಟ್ ಕಣಗಳು ಕನಿಷ್ಠ ಒಂದೂವರೆ ಲಕ್ಷ ಇರಬೇಕು. ಆ ಸಂದರ್ಭದಲ್ಲಿ ಈ ಕಣಗಳು ನನ್ನ ರಕ್ತದಲ್ಲಿ ಕೇವಲ ಸಾವಿರದ ಇನ್ನೂರಕ್ಕೆ ಇಳಿದು ದೇಹದ ಒಳಗೆ ಎಲ್ಲಿ ಬೇಕಾದರೂ (ಮೆದುಳು, ಎದೆ, ಹೊಟ್ಟೆ, ಕರುಳು, ಮೂತ್ರಕೋಶ ಇತ್ಯಾದಿ) ರಕ್ತಸ್ರಾವ ಉಂಟಾಗಿ ಯಾವ ಕ್ಷಣದಲ್ಲೂ ಜೀವಕ್ಕೂ ಅಪಾಯವಾಗಬಲ್ಲ ಬೆದರಿಕೆ ಒಡ್ಡಿತ್ತು.

ಒಡನೆಯೇ, ಬೆಂಗಳೂರಿನಲ್ಲೇ ಇರುವ ನನ್ನ ಸಹೋದರನ ರಕ್ತದಿಂದ ಪ್ಲೇಟ್‌ಲೆಟ್ ಕಣಗಳನ್ನು ತೆಗೆದು ನನ್ನ ದೇಹಕ್ಕೆ ಸೇರಿಸಲಾಯಿತು. ದೂರದ ಊರಿನಲ್ಲಿದ್ದ ನನ್ನ ಇನ್ನೊಬ್ಬ ತಮ್ಮ ತಕ್ಷಣ ಹೊರಟು ರಕ್ತಕಣಗಳನ್ನು ನೀಡಬಲ್ಲ ನನ್ನ ಕುಟುಂಬದವರನ್ನು ಕಾರಲ್ಲಿ ತುಂಬಿಕೊಂಡು ಬೆಂಗಳೂರು ತಲುಪಿದ. ಸಹೋದರನ ರಕ್ತದಿಂದ ಮೊದಲು ನೀಡಿದ್ದ ಪ್ಲೇಟ್‌ಲೆಟ್ ಕಣಗಳು ನನ್ನ ದೇಹದೊಳಗೆ ಸಾಯತೊಡಗಿದವು. ರಕ್ತಕಣಗಳ ಸಂಖ್ಯೆ ಹೀಗೇಕೆ ಇಳಿಯುತ್ತಿವೆ ಎಂದು ಪರೀಕ್ಷಿಸಲು ಸೊಂಟದ ಒಂದು ಎಲುಬನ್ನು ಚುಚ್ಚಿ ಅದರ ಟೊಳ್ಳಿನ ಒಳಗಿನ ಮಜ್ಜೆಯನ್ನು (Bone Marrow) ತೆಗೆದು ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಬೇಕಾದ ಹೊಸ ರಕ್ತಕಣಗಳು ಉತ್ಪತ್ತಿಯಾಗುತ್ತಿವೆಯೇ? ಅಥವಾ ರಕ್ತದ ಕ್ಯಾನ್ಸರ್ ಏನಾದರೂ ಇದೆಯೇ ಎಂಬುದನ್ನು ತಿಳಿಯುವುದು ಉದ್ದೇಶ.

ಎರಡನೇ ಸಲ ನನ್ನ ಇನ್ನೊಬ್ಬ ತಮ್ಮನ ದೇಹದಿಂದ ರಕ್ತಕಣಗಳನ್ನು ತೆಗೆದು



ನೀಡುವುದೆಂದು ನಿರ್ಧರಿಸಲಾಯಿತು. ಆ ಸಂದರ್ಭದಲ್ಲಿ ನನಗೆ ಚಿಕಿತ್ಸೆ ನೀಡುತ್ತಿದ್ದ ಆಸ್ಪತ್ರೆಯ ಮುಖ್ಯ ವೈದ್ಯರು ನನ್ನ ಬಳಿ ಬಂದು, ಪುನಃ ನೀಡುವ ರಕ್ತಕಣಗಳನ್ನು ರಕ್ಷಿಸಲು ಕೆಲವು ಗಂಭೀರ ಔಷಧಗಳನ್ನು ನೀಡುವುದಾಗಿ ಹೇಳಿ, ಭಾರತದಲ್ಲಿ ಸಾಧ್ಯವಿರುವ ಅತ್ಯುತ್ತಮ ಚಿಕಿತ್ಸೆ ನೀಡಿ ಪ್ರಯತ್ನಿಸುತ್ತೇವೆ; ಸಹಾಯಕ್ಕಾಗಿ ದೇವರನ್ನೂ ಪ್ರಾರ್ಥಿಸೋಣ; ಶಾಂತಚಿತ್ತರಾಗಿ – ಎಂದು, ನಾನು ಉದ್ವೇಗಗೊಳ್ಳಬಾರದೆಂದು ಸೂಚಿಸಿದರು. (ಉದ್ವೇಗಗೊಂಡರೆ ರಕ್ತದ ಒತ್ತಡ ಏರುಪೇರಾಗಿ ರಕ್ತಸ್ರಾವವಾಗುವ ಅಪಾಯ.) ಪ್ರತಿ ಗಂಟೆಗೂ ನಿಖರವಾದ ರಕ್ತದ ಒತ್ತಡ ದಾಖಲು ಇಡುವಂತೆ ತಿಳಿಸಿದರು.

ಸದಾ ನನ್ನ ಬಳಿಯೇ ಇದ್ದ ಸ್ವತಃ ತಜ್ಞ ವೈದ್ಯರಾದ ನನ್ನ ಸ್ವಂತ ತಮ್ಮ, ನನ್ನ ಹೆಂಡತಿಯ ತಮ್ಮ ಹಾಗೂ ಅಣ್ಣ ಎಲ್ಲರಲ್ಲೂ ಆತಂಕ, ಚಿಂತೆ. ಮನೆ ಮಂದಿಯೇ ಆದ ತಜ್ಞ ಡಾಕ್ಟರುಗಳ ಆತಂಕ ಕಂಡು ಕುಟುಂಬದ ಇತರರೂ ಮನಸ್ಸಿನೊಳಗೆ ಕಂಗಾಲಾಗಿಬಿಟ್ಟಿದ್ದರು. ಮಲಗಿದ್ದಾಗ ಮಂಚತಾಕಿಯೋ, ಬಚ್ಚಲಿಗೆ ಹೋಗುವಾಗ ಗೋಡೆ ಏನಾದರೂ ತಗುಲಿ ತಲೆಯೊಳಗೆ ಪುಟ್ಟ ನರ ಅದುರಿ ರಕ್ತಸ್ರಾವವಾದರೂ ಅಪಾಯ ಎಂದು ಹಗಲಿರುಳೂ ಜಾಗ್ರತೆ. ಬ್ಲೇಡು ತಾಗಬಹುದಾದ್ದರಿಂದ ಗಡ್ಡ ತೆಗೆಯಬೇಡಿ, ಬ್ರಶ್ ತಾಗಬಹುದಾದ್ದರಿಂದ ಹಲ್ಲು ಉಜ್ಜಬೇಡಿ – ಹೀಗೆ ರಕ್ತಸ್ರಾವ ಆಗದ ಹಾಗೆ ಸಕಲ ಮುಂಜಾಗರೂಕತೆಗಳು.

ಇದರ ನಡುವೆ ನಾನು ಕೆಲಸ ಮಾಡುವ ಕಂಪೆನಿಯ ಅಧಿಕಾರಿಗಳು ಬಂದು ಹೆಚ್ಚಿನ ಚಿಕಿತ್ಸೆಗಾಗಿ ವೆಲ್ಲೂರು, ಮದ್ರಾಸು ಅಥವಾ ಬೊಂಬಾಯಿಗೆ ಏರ್‌ಲಿಫ್ಟ್ ಮಾಡಬೇಕೆ ಎಂದು ವಿಚಾರಿಸಹತ್ತಿದರು. ಆಸ್ಪತ್ರೆಗೆ ಎಷ್ಟೇ ಖರ್ಚಾದರೂ ಭರಿಸುವ ಪತ್ರ ಕಳುಹಿಸಿದರು. ಅಮೆರಿಕಾದಲ್ಲಿದ್ದ ನನ್ನ ಮೇಲಧಿಕಾರಿ ಫೋನುಮಾಡಿ ಯಾವುದಕ್ಕೂ ಚಿಂತೆ ಬೇಡ ಎಂದರು. ಅವರ ಪರವಾಗಿ ಇನ್ನೊಬ್ಬ ಅಧಿಕಾರಿ ಬಂದು ನಾನು ಕೆಲಸ ಮಾಡುವ ಕಂಪೆನಿ ಅವಶ್ಯಕತೆ ಇದ್ದರೆ ವಿಶೇಷ ಸಂದರ್ಭದಲ್ಲಿ ೫೦ ಲಕ್ಷ ರೂಪಾಯಿಗಳನ್ನು ಚಿಕಿತ್ಸೆಗಾಗಿ ಖರ್ಚುಮಾಡಬಲ್ಲದೆಂದೂ, ಭಾರತದಲ್ಲಾಗಲೀ ಎಲ್ಲೇ ಆಗಲಿ ಸರಿಯಾದ ಚಿಕಿತ್ಸೆಯಾಗುವಲ್ಲಿಗೆ ಒಯ್ಯಬಹುದೆಂದೂ ಸೂಚಿಸಿದರು. ಇಂಗ್ಲೆಂಡಿನಲ್ಲಿ ರಕ್ತದ ಕ್ಯಾನ್ಸರಿಗೆ ಉತ್ತಮ ಚಿಕಿತ್ಸೆ ಇದೆಯಾದ್ದರಿಂದ ವೆಚ್ಚದ ಬಗ್ಗೆ ಚಿಂತೆಬೇಡ ಎಂಬುದನ್ನು ಪರೋಕ್ಷವಾಗಿ ಸೂಚಿಸುವುದು ಅವರ ಉದ್ದೇಶ. ಹದಗೆಟ್ಟ ನನ್ನ ರಕ್ತದ ಆರೋಗ್ಯ, ಆತಂಕಗೊಂಡ ವೈದ್ಯರು, ಆಕಸ್ಮಿಕ ಆಘಾತದಿಂದ ತತ್ತರಗೊಂಡ ಕುಟುಂಬ, ಅದರ ಜೊತೆ ಎಷ್ಟು ಖರ್ಚಾದರೂ ಪರವಾಗಿಲ್ಲ, ಎಲ್ಲಿ ಬೇಕಾದರೂ ಚಿಕಿತ್ಸೆ ಮಾಡಿಸೋಣ ಎಂಬ ಸದಾಶಯದ ಕಂಪೆನಿ ಅಧಿಕಾರಿಗಳು –

ಇವೆಲ್ಲಾ ಒಟ್ಟು ಸೇರಿ ಜೀವಕ್ಕೆ ಅಪಾಯ ಬಂದರೂ ಬರಬಹುದು ಎಂಬುದನ್ನು ಅರಿವಿಗೆ ತರುವ ಒಂದು ವಾತಾವರಣ ಸೃಷ್ಟಿಸಿತ್ತು. ಇಂತಹ ಸಂದರ್ಭದಲ್ಲಿ ಸಹಜವಾಗಿ ಮೃತ್ಯುಪ್ರಜ್ಞೆ ತಿಳಿವಿಗೆ ಬರುತ್ತದೆ.

ಇದರ ನಡುವೆ ಸೊಂಟದ ಎಲುಬು ಚುಚ್ಚಿ ಮಜ್ಜೆ ತೆಗೆಯಲು ನೀಡಿದ ಅರೆ ಅರಿವಳಿಕೆ ಚುಚ್ಚುಮದ್ದಿನಿಂದಾಗಿ ಅರ್ಧ ನಿದ್ರೆ ಎಚ್ಚರದ ಜೊಂಪು. ಪ್ರಾಣಕ್ಕೂ ಅಪಾಯವಾಗಬಲ್ಲ ಸಾಧ್ಯತೆ ಇದೆ ಎಂಬ ಇಂತಹ ಒಂದು ವಾತಾವರಣದಲ್ಲಿ – ನಿದ್ರೆ -ಎಚ್ಚರಗಳ ನನ್ನ ಸ್ಥಿತಿಯಲ್ಲಿ 'ಅತ್ತಣಿಂದ ಬೇಟೆಗಾರ ಬರುವ ನಾನು ಬಲ್ಲೆ' ಎಂಬ ಕವಿ ಬೇಂದ್ರೆಯ ಬೇಟೆಗಾರನ ಅರಿವು ಹಾಗೂ ಅದನ್ನು ಕಾವ್ಯನಾಯಕ ಮೀರುವ ಕ್ರಮ ಹೇಗೋ ನನ್ನ ಪ್ರಜ್ಞೆಯೊಳಗೆ ಮೂಡಿಬಂತು.

ಸುತ್ತಲೂ ಕುಟುಂಬದವರು, ಬಂಧು ಬಳಗದವರು, ಸ್ನೇಹಿತರು, ಸಹೋದ್ಯೋಗಿಗಳು ಹೇಗೋ ಸುದ್ದಿ ತಿಳಿದು ಫೋನು ಮಾಡುತ್ತಿದ್ದ ಪರಿಚಿತರು – ಎಲ್ಲರ ನಿರಂತರ ಪ್ರೀತಿ ಹಾಗೂ ಬೇಗನೆ ಗುಣಮುಖವಾಗಲೆಂಬ ಹಾರೈಕೆ. ನನ್ನೊಳಗೆ 'ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ ನಾರಿ' ಎಂಬ ಸಾವನ್ನು ಮೀರಿ ಜೀವನ ಸೌಂದರ್ಯದ ಉತ್ಕಟತೆಯನ್ನು ಹೇಳುವ ಬೇಂದ್ರೆ ಸಾಲುಗಳು.

ಆಸ್ಪತ್ರೆಗೆ ಸೇರಿದ ಐದನೇ ದಿನ ನಾನು ಸಂಪೂರ್ಣ ಪ್ರಾಣಾಪಾಯದಿಂದ ಪಾರಾಗಿರುವುದಾಗಿಯೂ ಇನ್ನೇನೂ ಭಯವಿಲ್ಲವೆಂದೂ ಮತ್ತೊಂದಷ್ಟು ದಿನ ಆಸ್ಪತ್ರೆಯಲ್ಲಿರಬೇಕಾಗಬಹುದೆಂದೂ ಆಸ್ಪತ್ರೆಯ ವೈದ್ಯರುಗಳು ತಿಳಿಸಿದರು. ಸುತ್ತಲಿದ್ದ ದುಗುಡ ಮಾಯವಾಗಿ ಮನೆಯವರೆಲ್ಲರ ಮುಖದಲ್ಲಿ ನಗೆ ಅರಳಿತು. ಹೀಗೆ ನಾನು ವೈದ್ಯರು ತಿಳಿದಂತೆ ಸಾವಿನ ಅಪಾಯದ ಮುಖಾಮುಖಿಯಲ್ಲಿದ್ದಾಗ ಬೇಂದ್ರೆಯ 'ನಾದಲೀಲೆ' ನನ್ನ ಅಂತರಂಗ ಪ್ರಜ್ಞೆಯಲ್ಲಿ ಹೇಗೆ ಒದಗಿಬಂತು ಎಂಬುದನ್ನು ನನಗೆ ನಾನೇ ಈಗ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾ ಆ ಅನುಭವ ರೂಪತಳೆದ ಕ್ರಮದಲ್ಲೇ ಆದಷ್ಟು ದಾಖಲಿಸುವ ಪ್ರಯತ್ನ ಮಾಡುತ್ತಿದ್ದೇನೆ.

••• ••• •••

ಬೇಂದ್ರೆಯವರ ಈ ಬೇಟೆಗಾರ ನನ್ನ ಗಮನ ಸೆಳೆದದ್ದು ಸುಮಾರು ಇಪ್ಪತ್ತನಾಲ್ಕು ವರುಷಗಳ ಹಿಂದೆ. ಆಗ ನಾನು ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದೆ. ಒಂದು ಸಂಜೆ, ಕನ್ನಡ ವಿಮರ್ಶಕ ಜಿ.ಎಚ್. ನಾಯಕರ ಮನೆಯಲ್ಲಿ ಮೀರಕ್ಕ ಕೊಟ್ಟ ತಿಂಡಿ ತಿನ್ನುತ್ತಾ ಹರಟುತ್ತಿದ್ದಾಗ 'ನಾದಲೀಲೆ' ಕವನದ ಬಗ್ಗೆ ಯಾಕೋ ಮಾತುಬಂತು. ನಾಯಕರು ''ನೋಡ್ರೀ ಬೇಂದ್ರೆಯ ಪ್ರಜ್ಞಾವಲಯ; ಅತ್ತಣಿಂದ ಬೇಟೆಗಾರ ಯಾವಾಗ ಬೇಕಾದರೂ ಬರಲೂಬಹುದು. ಅದು ಡೆತ್ (Death). ಆ ಸಾವಿನ ಜೊತೆ ಈ ಎಲ್ಲಾ ಜೀವಕ್ರಿಯೆ



ಗಳು. ಇದು ಬಹಳ ಸಂಕೀರ್ಣವಾದ ಅರಿವು. ನನ್ನ ಲೆಕ್ಕದಲ್ಲಿ ಬೇಂದ್ರೆಯ ಅತ್ಯುತ್ತಮ ಕವನಗಳಲ್ಲಿ ಒಂದು'' ಎಂಬ ಅರ್ಥದ ಮಾತುಗಳನ್ನು ಹೇಳಿದರು. (ಆ ಬಳಿಕ ಜಿ.ಎಚ್. ನಾಯಕರು ಸಂಪಾದಿಸಿ, ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಹೊಸಗನ್ನಡ ಕವಿತೆ' ಎಂಬ ಅಂಥಾಲಜಿಯಲ್ಲಿ 'ನಾದಲೀಲೆ' ಕವನ ಸೇರಿದೆ.) ಅಂದಿನಿಂದ 'ನಾದಲೀಲೆ'ಯ ಜೀವನ ಸಮೃದ್ಧಿ, ಕೋಲಾಟದ ಉತ್ಸಾಹ, ಉಲ್ಲಾಸ, ಹೂವು, ಹುಲ್ಲು, ತಂಗಾಳಿಯ ಬೆಳಗಿನ ಬೆಳಕಿನಲ್ಲಿ ಸಮೃದ್ಧಿಯ ಪ್ರಾಣವಾಯು ಹೀರುವ ತರಳ ಎರಳೆಯ ಹಿಂದೆ ಅತ್ತಣಿಂದ ಬರಬಹುದಾದ ಬೇಟೆಗಾರ ನನ್ನ ನೆನಪಿನಲ್ಲಿ ಶಾಶ್ವತವಾಗಿ ಉಳಿದು ಹೋದ.

ಆಸ್ಪತ್ರೆಯಲ್ಲಿ ಎಲುಬು ಚುಚ್ಚಲು ನೀಡಿದ ಅರಿವಳಿಕೆಯ ಅರೆ ಎಚ್ಚರ ನಿದ್ರೆಯ ಜೊಂಪಿನಲ್ಲಿ, ಈ ಬೇಟೆಗಾರ ಹೇಗಿರುತ್ತಾನೆ ಎಂದು ಕಾಣಲು ನಾನು ಪ್ರಯತ್ನಿಸುತ್ತಿದ್ದೆ. ಅವನು ಕೇವಲ ಮೃತ್ಯು ಆಗಿರಬಹುದೆ ಎಂಬ ಯೋಚನೆ. ಮೃತ್ಯು ಎಂದರೆ ಒಂದು ಶಬ್ದ. ಭಾಷೆಯೊಂದರ ಪದಕ್ಕಿಂತ ಆಚೆ ಅದು ಏನು? ಹಾಗಂದರೆ ಸಾಯುವುದೆ? ಅಂದರೆ ಏನು? ಅದು ಹೇಗಿರುತ್ತದೆ? ಅದು ಜೀವ ನಿಲ್ಲುವಾಗ ಏನೂ ಇಲ್ಲದಂತಾಗುವ ಕತ್ತಲು ಇರಬಹುದೆ ಎಂಬ ಸಂಶಯ.

ಆ ಕತ್ತಲಿನ ಕಲ್ಪನೆಯಲ್ಲಿ ನನ್ನ ನೆನಪಿಗೆ ಬಂದುದು ದಶಕಗಳ ಹಿಂದೆ ನಾನು ನೋಡಿದ ಬರ್ಗ್‌ಮನ್‌ನ 'ಸೆವೆನ್ತ್ ಸೀಲ್' ಸಿನಿಮಾದ ಒಂದು ದೃಶ್ಯ. ಅದರಲ್ಲಿ, ಸಮುದ್ರದ ಅಲೆಗಳ ನಿರಂತರ ಚಲನೆಯ ಹಿನ್ನೆಲೆಯಲ್ಲಿ ನಾಯಕನೊಡನೆ ಚೆಸ್ ಆಟದ ದೊಡ್ಡ ಮ್ಯಾಟ್‌ನಲ್ಲಿ ಡೆತ್ (Death) ನಿರಂತರವಾಗಿ ಚದುರಂಗ ಆಡುತ್ತಾ ಇರುತ್ತದೆ. ಅವರು ಒಬ್ಬರನ್ನೊಬ್ಬರು ಸೋಲಿಸುವ ಪ್ರಯತ್ನದಲ್ಲಿದ್ದಾರೆ. ಆ ಚದುರಂಗ ಆಡುವ ಮೃತ್ಯುವಿಗೆ ಇಡೀ ದೇಹದ ಹಾಗೂ ತಲೆಯ ಹಿಂಭಾಗವನ್ನು ಮುಚ್ಚುವ ಕಪ್ಪಗಿನ ದೊಡ್ಡ ದೊಗಲೆ ಕೋಟಿನಂತಹ ಒಂದು ಡ್ರೆಸ್.

ಆದರೆ, 'ನಾದಲೀಲೆ'ಯ ಬೇಟೆಗಾರ ಕಪ್ಪಗಿನ ಕಾಸ್ಟ್ಯೂಮಿನವನಲ್ಲ ಅನಿಸುತ್ತಿತ್ತು. ಆ ಬೇಟೆಗಾರನ ಬಗ್ಗೆ ಯೋಚಿಸುವಾಗ ನಾನು ಪ್ರಾಥಮಿಕ ಶಾಲೆಯಲ್ಲಿ ನನ್ನ ಹಳ್ಳಿಯಲ್ಲಿ ಓದುತ್ತಿದ್ದಾಗ ಸ್ಕೂಲ್‌ಡೇಯಲ್ಲಿ ನೋಡಿದ ಬೇಟೆಗಾರನ ನೃತ್ಯದ ಒಂದು ನೆನಪು ಮೂಡಿತು. ಅದರಲ್ಲಿ ಸ್ಕೂಲಿನ ರಂಗಮಂದಿರದಲ್ಲಿ ಹಾಕಿದ ಕಾಡಿನ ಚಿತ್ರದ ಪರದೆಯ ಹಿನ್ನೆಲೆಯಲ್ಲಿ ಒಬ್ಬ ಬೇಟೆಗಾರ ನೃತ್ಯ ಮಾಡುತ್ತಾ ಬಂದಿದ್ದ. ಅವನ ಕೈಯಲ್ಲಿ ಬಿಲ್ಲು, ತಲೆಗೆ ಗರಿ, ಮೈಗೆ ಚಿರತೆ ಬಣ್ಣದ ಬಟ್ಟೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುವ ಬೇಟೆಗಾರ.[೧] 'ನಾದಲೀಲೆ'ಯಲ್ಲೂ ಕೋಲಾಟದ ಕುಣಿತ.

ಈ ನೃತ್ಯದ ಬೇಟೆಗಾರ ಮನಸ್ಸಿಗೆ ಬಂದೊಡನೆ ಬರ್ಗ್‌ಮನ್‌ನ 'ಡೆತ್'

ನನ್ನೊಳಗಿನಿಂದ ಮಾಯವಾದ. ನನಗನ್ನಿಸಿದ್ದು, ಬರ್ಗ್‌ಮನ್‌ನ 'ಡೆತ್' ನಾಯಕನನ್ನು ಸೋಲಿಸುವ ಚದುರಂಗದ ಆಟದಲ್ಲಿದ್ದಾನೆ. ತೆರೆಗಳು ಚಲಿಸುವ ಕಾಲ ಇರಬಹುದು. ಬೇಂದ್ರೆಯ ಬೇಟೆಗಾರ ಅತ್ತಣಿಂದಲೂ ಕುಣಿಯುತ್ತಲೇ ಬರಬೇಕಷ್ಟೇ. ಯಾಕೆಂದರೆ 'ಕೋಲು ಸಖೀ ಚಂದ್ರಮುಖೀ' ಎಂದು ಕೋಲಾಟದ ಕುಣಿತದಲ್ಲಿ ಕಾವ್ಯನಾಯಕ ಇದ್ದಾನೆ. ಈ ಕೋಲಾಟದ ಕುಣಿತ ಇರುವುದರಿಂದ ಅತ್ತಣಿಂದ ಆಕಸ್ಮಿಕವಾಗಿ ಬರಬಹುದಾದವನಾದರೂ ಅವನ ಪ್ರವೇಶ ಕುಣಿಯದೆ ಹೇಗೆ ಸಾಧ್ಯ? ಹಾಗಾಗಿ, ಬರ್ಗ್‌ಮನ್‌ನ 'ಡೆತ್'ನಂತೆ ಅವನು ನಿಶ್ಚಲವಾಗಿ ಕುಳಿತು ಹೊಂಚು ಹಾಕುವವನಲ್ಲ. ಅವನು ಕಪ್ಪಗೆ ಇರುವುದೂ ಸಾಧ್ಯವಿಲ್ಲ. ಯಾಕಂದರೆ ಅವನು ಬರುವುದು ಕತ್ತಲಂಥ ಕತ್ತಲವೇ ಜಾರಿದ ಬಳಿಕ. ಕಂಗೆಡಿಸುವ ಮಂಜು ಕಳೆದು ಬೆಳಗಾತದ ಕಂಗೊಳಿಸುವ ಕೆಂಪು ಮುಂದೆ ಬರುವಾಗ. ಅವ ಈ ಜಿಂಕೆ, ಕುಣಿವ ಮಣಕ, ಗಾಳಿ, ಹೂವು, ಹುಲ್ಲು ಇವುಗಳೊಡನೆ – ಪ್ರಕೃತಿಯ ಜೀವಧಾರಣೆಯ ನಡುವೆಯೇ ಕುಣಿಯುವವ ಅನಿಸಿ ಬಿಟ್ಟಿತು. ಯಾಕೋ ಏನೋ ಅಡಿಗರ 'ಜೀವನ ನಿಧಾನ ಶ್ರುತಿ ಶುದ್ಧಿ ಮೊರೆವ ಕರಾವು' ಸಾಲು ನೆನಪಾಯಿತು. ಆದರೆ ಕವಿ ಅಡಿಗರ ವರ್ಧಮಾನ ಕವನದ ಆ ಸಾಲಿನ ಹಿಂದು ಮುಂದುಗಳು ಕೂಡಿ ಬರಲಿಲ್ಲ.[೨]

ಬದಲಾಗಿ, ಈ ಬೇಟೆಗಾರನೆ 'ವಿಧಿ' ಇರಬಹುದೆ ಎಂಬ ಒಂದು ಅಸ್ಪಷ್ಟ ಕಲ್ಪನೆ. ಅರೆನಿದ್ರೆ ಅರ್ಧ ಎಚ್ಚರ. ಹಾಗಿದ್ದರೆ ವಿಧಿ ಎಂದರೆ ಎಲ್ಲವೂ ಮೊದಲೇ ನಿರ್ಣಯಿಸಲ್ಪಟ್ಟ ಒಂದು ವ್ಯವಸ್ಥೆಯೇ? ಅಡಿಗರ 'ಅಳುವ ಕಡಲೊಳೂ ತೇಲಿ ಬರುತಲಿದೆ/ ನಗೆಯ ಹಾಯಿದೋಣಿ' ಎಂಬ ಪದ್ಯದಲ್ಲಿ ('ಇದು ಬಾಳು' ಕವನ, 'ಭಾವತರಂಗ' ಸಂಕಲನ) 'ಯಾರ ಲೀಲೆಗೋ ಯಾರೊ ಏನೊ ಗುರಿಯಿರದೆ ಬಿಟ್ಟ ಬಾಣ' ಎನ್ನುತ್ತಾರೆ.[೩] ಈ ಬೇಟೆಗಾರನೂ ಏನಾದರೂ ಗುರಿಯಿರದೆ ಬಾಣ ಬಿಡುವವನೆ? ಅದು ಸಾಧ್ಯವಿಲ್ಲ. ಬೇಟೆಗಾರನಂತೂ ಗುರಿ ಇಟ್ಟೇ ಬಾಣಹೂಡುವವ. ಆದರೆ ಇಟ್ಟ ಗುರಿ ತಪ್ಪಲೂ ಬಹುದು. ಯಾಕಂದರೆ ಇಲ್ಲಿ ಜೀವದ ಕುಣಿತ ಇದೆ. ಬಾಣ ಬರುವಾಗ ಜೀವದ ಕುಣಿತ ಆ ಕಡೆ ಹೆಜ್ಜೆ ಇಟ್ಟರೆ ಗುರಿ ತಪ್ಪಬಹುದು. ಅಕಸ್ಮಾತ್ ಗುರಿ ತಪ್ಪದೇ ಹೋದರೂ ಬೇಟೆಗಾರನ ಬಾಣಕ್ಕೆ ಸಿಕ್ಕಿ, ಬಿದ್ದು ಉರುಳುವುದೂ ಈ ನಿರಂತರವಾದ ಜೀವರಾಶಿಯ ಕೋಲಾಟದ ಕುಣಿತದ ಒಂದು ಭಾಗವೇ. ಜೀವದ ಕುಣಿತ ಕುಣಿಯಬೇಕು.[೪] ಬೇಟೆಗಾರನೂ ಕುಣಿಯುವ ಸಮಗ್ರ ಜೀವರಾಶಿಗಳ ಒಂದು ಭಾಗವೆ. ಅದಕ್ಕೆ ಭಯ ಯಾಕೆ ಎಂಬ ಭಾವ ಬಂದಿತು.

ದೇಹಕ್ಕೆ ಅದರ ಅಪಾಯಗಳನ್ನು ಸರಿಪಡಿಸಿಕೊಳ್ಳುವ ಶಕ್ತಿ ಇದೆ. ವೈದ್ಯರ ಕೆಲಸ ದೇಹದ ಈ ಸ್ವರಕ್ಷಣೆಯ ಶಕ್ತಿಯ ಜೊತೆ ಕೈ ಜೋಡಿಸುವುದು. ನನ್ನ ಸುತ್ತಲಿದ್ದ



ಅನೇಕ ವೈದ್ಯರೂ ನನ್ನ ದೇಹವೂ ಈ ವಿಶ್ವ ಪ್ರಕೃತಿಯ ಜೀವ ಜಾಲದ ನಿರಂತರ ಕುಣಿತವೆಂಬ ಚಲನೆಯ ಒಂದು ಭಾಗವೆ. ದೇಹದೊಳಗಿನ ರಕ್ತಸಂಚಾರ, ಶ್ವಾಸೋಚ್ಛ್ವಾಸಗಳೂ ಚಲನೆಯೇ. ದೇಹದ ಒಳಗಿನ ಹಾಗೂ ಹೊರಗಿನ ಚಲನೆಗಳು ಈ ಸಮಸ್ತ ವಿಶ್ವದ ಒಟ್ಟೂ ಚಲನೆಯ ಭಾಗವೆ. ಅದರ ಜೊತೆ ಸಮಶ್ರುತಿ ಇದ್ದಷ್ಟು ಕಾಲ ಉಳಿಯುತ್ತದೆ. ಇಲ್ಲವಾದರೆ ಇಲ್ಲ. ಇದ್ದಷ್ಟು ಹೊತ್ತು ಜೀವ ಜಗತ್ತಿನ ಈ ನಿರಂತರ ಕುಣಿತದ ತಾಳ-ಲಯಗಳಲ್ಲಿ ಮಗ್ನನಾಗಿರುವುದು ಮುಖ್ಯ. ಬೇಟೆಗಾರ ಮರಣ ಭಯವಾಗಿ ಕಾಡಬಾರದು ಎಂಬ ಭಾವ ಪ್ರೇರಣೆಯಾದಂತೆ ಭಾಸವಾಯಿತು.

ಅದು ಅರಿವು ತಪ್ಪಿಸಲು ನೀಡಿದ ಚುಚ್ಚುಮದ್ದಿನ ನಿದ್ರೆಯ ಕನಸೋ ಅಥವಾ ನನ್ನ ಆಗಿನ ತಿಳುವಳಿಕೆಯೋ ಎಂದು ಈಗ ಹೇಳುವುದು ಕಷ್ಟ. ಒಟ್ಟಿನಲ್ಲಿ ಅನಿಸಿದ್ದು: ಈ ಬೇಟೆಗಾರನ ಜೊತೆ ಸೋಲು ಗೆಲುವಿನ ಆಟ ಆಡುವುದಲ್ಲ; ಬಂದಾಗ ಅವನ ಜೊತೆ ಕುಣಿಯುವುದು. ಈ ತಾಳ-ಲಯಗಳ ನಾದ ಉಂಟುಮಾಡುವ ಜೀವಪ್ರಕೃತಿಯ ಲೀಲೆಯಲ್ಲಿ ಬೇಟೆಗಾರನಿಗೂ ಕುಣಿಯದೆ ಬೇರೆ ಗತಿಯೇ ಇಲ್ಲ ಎಂಬ, ಸಾವನ್ನೂ ಬದುಕಿನ ಪ್ರೇಮದಲ್ಲಿ ತಬ್ಬಿಕೊಳ್ಳಬಹುದಾದ, ಯಾವ ಭಾವೋದ್ರೇಕವೂ ಇಲ್ಲದ, ಇದು ಸಹಜವಾದ್ದು ಎಂಬ ಒಂದು ಮಾನಸಿಕ ಸ್ಥಿತಿ ಬಂದು ಬಿಟ್ಟಿತ್ತು ಎಂದು ನನಗೆ ಈಗ ತೋರುತ್ತದೆ.

ಆ ದಿನ ಸಂಜೆ ಎಲುಬಿನ ಮಜ್ಜೆಯ ವರದಿ ಬಂತು. ರಕ್ತದ ಕ್ಯಾನ್ಸರಿನ ಯಾವ ಅಪಾಯವೂ ಇಲ್ಲ. ಎಲುಬಿನ ಒಳಗೆ ನನ್ನ ದೇಹಕ್ಕೆ ಬೇಕಾದ ರಕ್ತಕಣಗಳ ನಿರಂತರ ಸೃಷ್ಟಿ ಆಗುತ್ತಲೇ ಇದೆ. ಆದರೆ ರಕ್ತಕ್ಕೆ ಸೇರಿದೊಡನೆ ಅದು ನಾಶವಾಗುತ್ತಿದೆ. ಆ ಸಮಸ್ಯೆ ಪರಿಹಾರವಾಗುವ ಮೊದಲು ದೇಹದೊಳಗೆ ರಕ್ತಸೋರಿ ಅಪಾಯವಾಗಬಹುದು. ನನ್ನ ಸಹೋದರನ ರಕ್ತದಿಂದ ಬೇಕಾದ ಕಣಗಳನ್ನು ತೆಗೆದು ನನ್ನ ರಕ್ತಕ್ಕೆ ಸೇರಿಸತೊಡಗಿದ್ದರಿಂದ ಕನಿಷ್ಠ ಮುಂದಿನ ಹನ್ನೆರಡು ಗಂಟೆಗಳ ಕಾಲ ಏನೂ ಅಪಾಯ ಆಗದು ಎಂಬ ತುಸು ನೆಮ್ಮದಿಯ ಭಾವ ಆಸ್ಪತ್ರೆಯ ನನ್ನ ಮಂಚದ ಸುತ್ತಲೂ ಪಸರಿಸಿತು.

••• ••• •••

ಗಂಟೆಗೊಮ್ಮೆ ಏನೋ ಒಂದು ರಕ್ತಪರೀಕ್ಷೆ. ಸೂಜಿ ಚುಚ್ಚಿ ನೆತ್ತರು ತೆಗೆದಲ್ಲೆಲ್ಲಾ ರಕ್ತ ಹೆಪ್ಪುಗಟ್ಟುವುದು ನಿಧಾನವಾಗಿ ರೂಪಾಯಿಯಗಲ ನೀಲಿ ಮಚ್ಚೆ. ಕೈಯ ನರಕ್ಕೊಂದು ಟ್ಯಾಗ್‌ನಂತೆ ಸೂಜಿ ಚುಚ್ಚಿ ನಿರಂತರವಾಗಿ ಅದರ ಮೂಲಕ ಒಂದಲ್ಲ ಒಂದು ಔಷಧಿ ತಳ್ಳುತ್ತಾ ಇದ್ದರು. ದೇಹದೊಳಗೆ ಸದಾ ಹರಿಯುತ್ತಿದ್ದ ಯಾವ ಯಾವುದೋ ಮದ್ದುಗಳ ನಡುವೆ ನನಗೆ ಬಹು ಪ್ರಿಯವಾದ ಬೇಂದ್ರೆಯವರ ಕೆಲವು ಸಾಲುಗಳು

ಮನಸ್ಸಿನಲ್ಲಿ ಸುತ್ತುತ್ತಿದ್ದವು. ಅದರಲ್ಲಿ ಒಂದು 'ಅಂಬಿಕಾತನಯದತ್ತ' ಎಂಬ ಕವನದ್ದು:

*ಯಾವ ಯೋಗ ನಿದ್ರೆಯಲ್ಲಿ ಏನು ಕನಸ ಕಂಡೆನೋ।*
*ಯಾರ ಹಾಲನುಂಡೆನೋ।।*
*ಈ ವಿಶ್ವ ಜಾಲದಲ್ಲಿ ಬಂದೆ ಅದಕೆ ಮಿಡುಕುತ।*
*ಅದರ ಧಾರೆ ಹುಡುಕುತ।।*

ಇನ್ನೊಂದು ಸಾಲು 'ಕಣ್ಣಕಾಣಿಕೆ' ಕವನದ್ದು. (ಇವೆರಡೂ 'ಗಂಗಾವತರಣ' ಸಂಕಲನದಲ್ಲಿರುವ ಪದ್ಯಗಳು)

*ಕಲ್ಪದಾದಿಯಲ್ಲೆ ನನ್ನ ನಿನ್ನ ವಿರಹವಾಗಿ।*
*ಎಲ್ಲೊ ಏನೊ ನಿನ್ನ ಹುಡುಕಿ ಕಾಂಬ ಕಣ್ಣೆ ಹೋಗಿ*
*ಮರವೆಗೊಂಡು ಬಿದ್ದೆ ನಾನು ನೆಲದ ಮಣ್ಣು ತಾಗಿ।।*

*ಅಂತರಂಗದಾ ಮೃದಂಗ ಅಂತು ತೋಂ ತನಾನಾ*
*ಚಿತ್ತ ತಾಳ ಬಾರಿಸುತ್ತಲಿತ್ತು ಝುಂ ಝಣಾಣಾ।*
*ನೆನವು ತಂತಿ ಮೀಟುತಿತ್ತು ತಂ ತನನನ ತಾನಾ।।*

ಈ ಸಾಲುಗಳು ನೆನಪಿಗೆ ಬಂದವೇ ಹೊರತು ಆ ಕವನಗಳ ಸಂದರ್ಭಗಳು ಕೂಡಿಬರಲಿಲ್ಲ. ಯಾಕೋ ಏನೋ ಅವು ನನ್ನ ಮನಸ್ಸೊಳಗೆ ಕೂತಿದ್ದ 'ನಾದಲೀಲೆ'ಯ ಬೇಟೆಗಾರನ ಸುತ್ತಲೇ ಹೊಂಚುಹಾಕುತ್ತಿದ್ದವು. ಯೋಗನಿದ್ರೆಯಲ್ಲಿ ಪವಡಿಸಿರುವ ಮಹಾವಿಷ್ಣು ಸರ್ವಾಂತ್ಯದ ಪ್ರಳಯದಲ್ಲಿ ಎಲೆಯಮೇಲೆ ಕಾಲಬೆಟ್ಟು ಚೀಪುತ್ತಾ ಮಲಗಿರುವ ಮುಗ್ಧ ಮಗು.[೫] ತಾಯಿಯ ಹಾಲನ್ನುಣ್ಣುವ ಮಗುವಿನ ಮನೋಸ್ಥಿತಿಯಲ್ಲಿ ಮಾತ್ರ ಯೋಗನಿದ್ರೆಯ ಕನಸು ಸಾಧ್ಯವೇ? ಅಥವಾ ಮಗುವಾಗಿ ಹಾಲುಣ್ಣುವ ಸ್ಥಿತಿ ಯೋಗನಿದ್ರೆಯ ಕನಸಿಗೆ ಸಮಾನವಾದ್ದೆ? ನಲುವತ್ತು ದಾಟಿದ ಮಧ್ಯವಯಸ್ಸಿನ ನನ್ನಲ್ಲಿ ಈ ಮಗುವಿನ ಮನಸ್ಸು ಮಾಯವಾಗಿದೆ. ಅಗಾಧವಾದ ಈ ವಿಶ್ವಜಾಲದ ಎದುರು ಚುಕ್ಕೆಗಿಂತ ಚಿಕ್ಕದಾದ ಕಂಪ್ಯೂಟರ್ ಜಾಲದ ಅಮೆರಿಕಾದ ಕಂಪೆನಿಯೊಂದರ ಕೆಲಸದೊಳಗೆ ಮುಚ್ಚಿ ಮುಳುಗಿಹೋಗಿದ್ದೇನೆ. ನನ್ನೊಳಗೆ ಎಲ್ಲೋ ಹುದುಗಿರುವ ಮಗುವಿನ ಮನಸ್ಸನ್ನು ಪುನಃ ಪಡೆಯದೆ ಈ ನಾದಲೀಲೆಯ ಕೋಲಾಟದ ಕುಣಿತದಲ್ಲಿ ಭಾಗವಹಿಸಲು ಸಾಧ್ಯವೇ?[೬]

'ಕಾಣೆ ಕೊಳಲಿನವನ ಎನುವೆ, ಎಲ್ಲು ಇಹನು ಬಾರೆ' ಎಂದು ನಾದಲೀಲೆಯ ನಾಯಕ ಕವನದ ನಾಯಕಿಗೆ ಹೇಳುತ್ತಿದ್ದಾನೆ. ಕೊಳಲಿನ ಕೃಷ್ಣ ಪ್ರೇಮದ ದ್ಯೋತಕ. ಜೀವಪ್ರೀತಿಯ ಮುಗ್ಧತೆಗೂ ಪ್ರತೀಕ. ಗಂಡು ಹೆಣ್ಣಿನ ಪ್ರೇಮದಲ್ಲಿ ಜೀವ ಸಂಕುಲ



ಗೊಳ್ಳಬೇಕು. ಈ ಪ್ರೇಮದ ಆವಿರ್ಭಾವದಲ್ಲೆ ಮಗು ಹುಟ್ಟಬೇಕು. ಹಾಗಾಗಲು ಮನಸ್ಸಿನಲ್ಲಿ ಮಗುಭಾವ ಜೀವಂತವಿರಬೇಕು. ಆಗ ಮಾತ್ರ ಕೊಳಲಿನವನನ್ನು ಕಾಣಲು ಸಾಧ್ಯ. 'ಕೊಳಲಿನವ' ಕೇವಲ ಗೋಕುಲದ, ಪುರಾಣದ ಕೃಷ್ಣ ಮಾತ್ರ ಅಲ್ಲ. ಅವ ಎಲ್ಲಾ ಕಡೆ ಜೀವದ ಉಸಿರನ್ನು ಪ್ರೇಮದ ಕೊಳಲಿನಲ್ಲಿ ತುಂಬುವವ.

ಹಾಗಾದರೆ ಕೋಲುಸಖೀ ಎಂದು ಹಾಡುತ್ತಿರುವುದು, ನಾಟ್ಯವಾಡುತ್ತಿರುವುದು ಇನ್ನೊಬ್ಬಳು ಹೆಣ್ಣೆ? ಇಬ್ಬರು ಅಥವಾ ಅನೇಕ ಹೆಣ್ಣುಗಳು ತಮ್ಮ ಕೋಲಾಟದ ತನ್ಮಯತೆಯಲ್ಲಿ ಜೀವಸೃಷ್ಟಿಯ ಕೊಳಲಿನವನನ್ನು ಎಲ್ಲೆಲ್ಲು ಕಾಣುತ್ತಿದ್ದಾರೆಯೆ? ಆದರೆ ಕೋಲಾಟ, ಕಂಡಹಾಗೆ ಗಂಡು ಹೆಣ್ಣುಗಳು ಜೊತೆಯಾಗಿ ಹಾಡಿ ಕುಣಿದು ಆಡುವ ನಾಟ್ಯ. ಆ ಕೋಲಾಟದಲ್ಲಿ ಒಬ್ಬನು ಕೊಳಲಿನವನೆ? ಅಲ್ಲ. ಎಲ್ಲೆಲ್ಲೂ ಇರುವ ಕೊಳಲಿನವನ ಜೀವಶಕ್ತಿ ಎಲ್ಲರಲ್ಲಿ ಸೇರಿಕೊಂಡಿದೆ. ಜೀವದ ಉಸಿರೇ ಕೊಳಲು. ಅವ ಕೇವಲ ಕೃಷ್ಣನಲ್ಲ. ಅವನು ಕೊಳಲಿನಿಂದ ಈ ಸಖಿಯರ ನಾಟ್ಯಕ್ಕೂ ನಾದಕ್ಕೂ ತಾಳಲಯದ ಶ್ರುತಿಯಲ್ಲಿ ಸೇರಿಕೊಂಡು ಜೀವದ ಆಟ ಆಡಬಲ್ಲವನು. ಕೃಷ್ಣನೂ ಸತ್ತುದು ಬೇಟೆಗಾರ ಜಿಂಕೆಯೆಂದು ಹೊಡೆದ ಬಾಣ ತಾಗಿ. ಬೇಟೆಗಾರ ಕೊಳಲಿನವನನ್ನೂ ಬಿಟ್ಟವನಲ್ಲ. ಔಷಧಿಯ ನಿದ್ರೆ ಎಚ್ಚರಗಳ ಸಂಗಮದಲ್ಲಿ ಕೊಂಡಿಕಳಚುವ ನೆನಪುಗಳು.

ಕಲ್ಪದಾದಿಯಲ್ಲಿ ಉಂಟಾದ ವಿರಹದ ಬಳಿಕ, ನೆಲದ ಮಣ್ಣುತಾಗಿ, ಮರವೆಗೊಂಡು ಬಿದ್ದಿರುವಾಗ, ಅವನ ಹುಡುಕಿ ಕಾಂಬ ಹೊಸ ಕಣ್ಣು ಹಚ್ಚುವವನೋ ಕೊಲ್ಲಬಲ್ಲ ಈ ಬೇಟೆಗಾರ? ಅರ್ಥಾತ್ ಕೊಂದೂ ಬದುಕಿಸುವ ಕೆಲಸ. ಅದು ಸುಟ್ಟು ಹುಟ್ಟಿಸುವ ಭಾವ. ಮೂಲರತಿಯ ತೇವ ಸೋಕುವ ಬೇಟದ ಬಗೆ ಅದು.[೭]

*ಹಣೆಯ ಕಣ್ಣು ಹುರಿದ ಮೇಲನಂಗವಾದ ಭಾವ*

*ತಾನೆ ರಸವೆ ಆಯ್ತು ಸೋಕೆ ಮೂಲ ರತಿಯ ತೇವ*
*ಕಣ್ಣೆನಾರತಿಯನು ಎತ್ತಿ ಒತ್ತಿ ಬಂತು ಜೀವ।।* *(ಕವನ: ಕಣ್ಣಕಾಣಿಕೆ)*

••• ••• •••

ಮಾರನೆದಿನ ನನ್ನ ಒತ್ತಿನ ತಮ್ಮನ ದೇಹದಿಂದ ಹೀರಿ ಮೊದಲ ಬಾರಿ ನೀಡಿದ್ದರಕ್ತದ ಪ್ಲೇಟ್‌ಲೆಟ್ ಕಣಗಳನ್ನೆಲ್ಲಾ ನನ್ನ ದೇಹದ ಒಳಗಿನ ವ್ಯವಸ್ಥೆಯೇ ಕೊಂದು ಹಾಕಿದೆ. ಪುನಃ ಕಣಗಳ ಸಂಖ್ಯೆ ಒಂಭತ್ತು ಸಾವಿರದಿಂದ ಕೆಳಗೆ ಇಳಿಯತೊಡಗಿದೆ. ಕಮ್ಮಿಯಾಗಿದ್ದ ಬಿಳಿ ರಕ್ತಕಣಗಳು ದೇಹದಲ್ಲಿ ವೃದ್ಧಿಸಿವೆ. ಆದರೆ ಈ ಹೊಸ ಬಿಳಿ ರಕ್ತಕಣ

ಗಳಿಗೆ ಯಾವುದು ವೈರಿ ಯಾವನು ಗೆಳೆಯ ಎಂಬುದು ತಿಳಿಯದೆ ದೇಹದೊಳಗಿನ ಪ್ಲೇಟ್‌ಲೆಟ್ ಕಣಗಳನ್ನೆಲ್ಲಾ ಯದ್ವಾತದ್ವಾ ಕೊಂದುಹಾಕುತ್ತಿವೆ. ದೇಹದೊಳಗೆ ಇಮ್ಯುನಿಟಿ ಸಿಸ್ಟಮ್ ಇದ್ದಕ್ಕಿದ್ದಂತೆ ವಿಪರೀತ ಏರುಪೇರಾಗಿದೆ. ಅದಕ್ಕೆ ಡೆಂಗು, ಪಾರ್ವೊ, ಅಥವಾ ಎಬಲ ಹೀಗೆ ಯಾವುದಾದರೂ ವೈರಸ್ ಕಾರಣವೋ, ಅಥವಾ ಏನಾದರೂ ಬ್ಯಾಕ್ಟೀರಿಯಾಗಳೆ (ಲೈಪ್ರೋ ಸ್ಪೆರೋಸಿಸ್ ಎಂಬ ಪಿತ್ತಕೋಶ, ಕರಳುಗಳಿಗೆ ತಗಲುವ ರೋಗ) ಅಥವಾ ಯಾವುದಾದರೂ ಔಷಧಿಯ ಈ ತನಕ ತಿಳಿಯದಿದ್ದ ದುಷ್ಪರಿಣಾಮವೋ ? ಯಾವುದೂ ಇದಮಿತ್ಥಂ ಎಂಬ ಪರೀಕ್ಷೆಗೆ ಸಿಗುತ್ತಿಲ್ಲ.

ಹೊರಗಿನಿಂದ ಹೊಸತಾದ ಪ್ಲೇಟ್‌ಲೆಟ್ ರಕ್ತಕಣಗಳನ್ನು ತುಂಬಿಸಬೇಕು. ದೇಹವೇ ಉತ್ಪಾದಿಸುತ್ತಿರುವ ರಕ್ತಕಣಗಳನ್ನು ರಕ್ಷಿಸಬೇಕು. ದೇಹದ ಒಳಗೆ ಎಲ್ಲೂ ರಕ್ತಸ್ರಾವವಾಗಬಾರದು. ನನಗೋ ಅಸಾಧ್ಯವಾದ, ತಡೆಯಲಾರದ ಹೊಟ್ಟೆನೋವು, ನಿಧಾನವಾಗಿ ಹೆಚ್ಚುತ್ತಿರುವ ತಲೆನೋವು. ಹೊಟ್ಟೆಯೊಳಗೆಲ್ಲಾದರೂ ಸಣ್ಣದಾಗಿ ರಕ್ತಸ್ರಾವ ಪ್ರಾರಂಭವಾಗಿದ್ದರೆ ಏನುಗತಿ ಒಂದು ಎಂ.ಡಿ. ಓದಿರುವ ವೈದ್ಯನಾದ ನನ್ನ ಕೊನೆಯ ತಮ್ಮನಿಗೆ ದಿಗಿಲು. ಗಂಟೆಗೊಮ್ಮೆ ರಕ್ತದ ಒತ್ತಡ ಪರೀಕ್ಷೆ, ಶಾಂತಚಿತ್ತರಾಗಿರಿ ಎಂದು ವೈದ್ಯರ ಸಲಹೆ. ನನ್ನ ತಮ್ಮ ಅವನ ದೇಹದಿಂದ ಬೇಕಾದ ರಕ್ತಕಣಗಳನ್ನು ಸಂಗ್ರಹಿಸಿ ತರಲು ಹೊರಟ. ನನಗೆ, ಆ ಬೇಟೆಗಾರನನ್ನು ಜೀವಶಕ್ತಿಯ ಆಟದಲ್ಲಿ ನಾದಲೀಲೆಯಲ್ಲಿ ಮೀರುವ ಬಗ್ಗೆ ಯಾರಲ್ಲಾದರೂ ಮಾತಾಡುವ ಆಸೆ. ಆಸ್ಪತ್ರೆಯ ಮಂಚದ ಬಳಿ ಮಡಿಕೇರಿಯಿಂದ ನನ್ನನ್ನು ನೋಡಲು ಬಂದಿದ್ದ ಬಾಲಸುಬ್ರಹ್ಮಣ್ಯ ಕಂಜರ್ಪಣೆ ತಲ್ಲಣಗೊಂಡು ಕೂತಿದ್ದ. ಅವನೊಡನೆ ಬೇಂದ್ರೆಯ ಬೇಟೆಗಾರನ ಬಗ್ಗೆ ಹೇಳಹೊರಟಾಗ, ಅವನು, ನೀನೀಗ ಆಯಾಸಗೊಳ್ಳಬಾರದು, ಸ್ವಲ್ಪ ಕಣ್ಣುಮುಚ್ಚಿ ನಿದ್ರಿಸಲು ಪ್ರಯತ್ನಿಸು ಎಂದ.

ನನಗೆ ಅದೇ ನಿದ್ರೆ ಎಚ್ಚರಗಳ ಗುಂಗು. ಸಾಮಾನ್ಯ ಸ್ಥಿತಿಯಲ್ಲಿ ಒಬ್ಬನ ದೇಹ ಒಂದು ತಿಂಗಳಲ್ಲಿ ಅದರ ಇಮ್ಯುನಿಟಿ ಸಿಸ್ಟಮ್‌ಗಾಗಿ ಉತ್ಪಾದಿಸುವಷ್ಟು ಸ್ಟಿರಾಯ್ಡ್‌ನ್ನು ಔಷಧಿರೂಪದಲ್ಲಿ ಒಂದು ಗಂಟೆಯ ಅವಧಿಯಲ್ಲಿ, ಪ್ಲೇಟ್‌ಲೆಟ್ ಕಣಗಳನ್ನು ರಕ್ಷಿಸುವುದಕ್ಕಾಗಿ, ನನ್ನ ದೇಹಕ್ಕೆ ನೀಡುತ್ತಿದ್ದರು. ಬಿಳಿರಕ್ತಕಣಗಳನ್ನು ನಿಯಂತ್ರಿಸುವುದಕ್ಕೆ ಅದು ಸಹಕಾರಿ. ಸ್ಟಿರಾಯ್ಡ್ ದೇಹದಲ್ಲಿ ಹುಸಿಯಾದ ಚೈತನ್ಯವನ್ನೂ ಉಲ್ಲಾಸವನ್ನೂ ಸೃಷ್ಟಿಸುತ್ತದೆ. ಆ ಮಂಪರಿನಲ್ಲಿ ಬೇಟೆಗಾರನನ್ನು ಲಕ್ಷಿಸದೆ ಎಲ್ಲೂ ಇರುವ ಕೊಳಲಿನವನ ಚಿತ್ರ ಹೆಚ್ಚು ಗೋಚರಿಸತೊಡಗಿತು.

ಕೋಲು ಸಖೀ ಎಂದು ಕೋಲಾಟದ ನೃತ್ಯವನ್ನು ನಾದಲೀಲೆ ಮಾಡುವ ತಾಳ-ಲಯದ ಶುದ್ಧಿಯೇ ಬ್ರಹ್ಮಾಂಡದ ಚಲನೆಯ ರೂಪದಂತೆ ಭಾಸವಾಯಿತು. ಆ



ಜೀವನೋತ್ಸಾಹದ ಕುಣಿತವೂ ನಾದದಲ್ಲಿ ಸೇರಿಕೊಂಡ 'ಲೀಲೆ' ಯ ಅವಿಭಾಜ್ಯವಾದೊಂದು ಅಂಗದಂತಿದೆ. ಅಂತಹ ಜೀವದ ಲೀಲೆಗೆ ಶ್ರುತಿ ಸೇರಿಸಬಲ್ಲವನು ಎಲ್ಲೂ ಇರುವ ಕೊಳಲಿನವನು. ಹೊರ ಕಣ್ಣಿಗೆ ಕಾಣದೆಯೂ, ಕುಣಿತದೊಳಗಿನ ನಾದದಿಂದ ಕಿವಿಯ ಮೂಲಕ ಗೋಚರಿಸಬಲ್ಲ ಸಮಶ್ರುತಿಯವನು. ಅವನ ಕೊಳಲು ಕೇವಲ ಗಾಳಿಯೂದುವ ಕೊಳವೆ. ಆದರೆ ಅದು ಜೀವ ಪ್ರೇಮದ ಪ್ರಾಣತುಂಬುವ ಗಾಳಿ.

ಕೊಳಲಿನೊಳಗೆ ಪ್ರಾಣತುಂಬುವ ಗಾಳಿಯ ನೆನಪಿನಿಂದ 'ನಾದಲೀಲೆ' ಪ್ರಾಣವಾಯು ಕೇಂದ್ರಿತವಾಗಿ ಕಾಣತೊಡಗಿತು. ಬೇಟೆಗಾರನ ಬಾಣ ಉಸಿರನ್ನು ನಿಲ್ಲಿಸುವಂತಹದ್ದು. ನಾದಲೀಲೆಯ ಜೀವತನ್ಮಯತೆ ಪ್ರಾಣವಾಯುವನ್ನು ಪ್ರೇರೇಪಿಸುವಂತಹದ್ದು. ಎಲ್ಲಿತ್ತೊ ಏನೋ. ಅನಾಯಾಸವಾಗಿ ಎಚ್ಚರದ ಕನಸಿನಲ್ಲಿ ಎಂಬಂತೆ ಕವನದ ಅನೇಕ ವಿವರಗಳು ಒಂದರ ಮೇಲೊಂದು ಕೂಡಿ ಬಂದು ಕಾಣತೊಡಗಿದವು.

ಆ ಜಿಂಕೆಗಳು ಕತ್ತಲೆ ಕಳೆದು, ಮುಂಜಾವದ ಗಾಳಿಯನ್ನು (ಎಲರು) ಮೂಸಿ ನೋಡುತಿರುವವು. ಅಲ್ಲಿನ ನಸು ಬೆಳಕು, ಬೀರುತ್ತಿರುವ ಪ್ರಾಣವಾಯುವನ್ನು ಹೀರುತ್ತಾ ಇರುವ 'ಕರೆವ ಕರುವು, ಕುಣಿವ ಮಣಕ, ತೊರೆವ ಗೋಗಭೀರೆ' ಗಳು ಉತ್ತು ಬಿತ್ತುವ ಪ್ರಕೃತಿಗೆ ಪೋಷಕವಾಗಿರುವ ಸಾಕುಪ್ರಾಣಿಗಳು. ಉಲ್ಲಾಸದಲ್ಲಿ ಕುಣಿವ ದನದ ಕರು, ಸುಂದರವಾದ ಎಳೆ ಎಮ್ಮೆ ಕರು (ಮಣಕ) ಮನುಷ್ಯರಿಗೆ ನಿತ್ಯ ಕಾಣುವ ಇನ್ನೊಂದು ಬಗೆಯ ಜೀವಸಮೂಹ. ಜೀವ ಚೈತನ್ಯದ ಅಭಿರೂಪಗಳು. ಅಲ್ಲಿ ಬೇಟೆಗಾರ ಪ್ರತ್ಯಕ್ಷ ಬರಲಾರ. ಆದರೆ ಪರೋಕ್ಷವಾಗಿ ಕೊಳಲಿನವನಂತೆ ಎಲ್ಲಾ ಕಡೆ ಅವನಿದ್ದಾನೆ. ಆದರೂ ಪ್ರಾಣಿಸಂಕುಲ ಬೇಟೆಗಾರನ ಭಯವನ್ನು ಮೀರಿದೆ. ಪ್ರಾಣವಾಯುವನ್ನು ಹೀರುವ ಕ್ರಮದಲ್ಲೇ ಜೀವ ಚೈತನ್ಯ ಬೇಟೆಗಾರನನ್ನು ಮರೆತು ಬದುಕುವ ಕ್ರಮ ಅಡಗಿದೆ ಅನಿಸಿತು.

ಈ ಪ್ರಾಣವಾಯುವಾದರೋ ಬಹು ಸುಂದರವಾದ್ದು. ಸುವಾಸನೆ ಉಳ್ಳದ್ದು. ಬೆಳ್ಳಿ ಚುಕ್ಕೆ (ಬೆಳೆಗಾತ ಚಿಕ್ಕದಾಗುತ್ತಾ ಮಾಯವಾಗುವ ಶುಕ್ರಗ್ರಹ) ಸಣ್ಣದಾಗುತ್ತಾ (ಚಿಕ್ಕೆಯಾಗಿ) ಮುಳುಗುವ ಮುಂಜಾವಿನ ಎಲರಿನಲ್ಲಿ ಚಿಗುರು, ಹೂಗಳ ಅಹ್ಲಾದ ಇದೆ. ಅದು ಪ್ರಾಣವಾಯುವಾದ ಬಳಿಕ ಅರೆ ಬಿರಿದ ಮೊಗ್ಗೆಯ (ಮುಕುಲ) ವಿಕಾಸಗೊಂಡ ಹೂವಿನ (ಅಲರು) ಅರಳಿದ ಪುಷ್ಪದ (ಮಲರು) ಸುವಾಸನೆಯ ಹರಡುವಿಕೆ (ಪಸರು) ಸೇರಿದೆ. ಪ್ರಾಣವಾಯು ಗಂಧಶಾಲಿ ಪ್ರಕೃತಿಯ ಆಹ್ಲಾದವಾಗಿ ವ್ಯಾಪಿಸಿದೆ. ಜೊತೆಗೆ ಅರೆಬಿರಿದ ಮೊಗ್ಗೆ (ಮುಕುಲ) ಬೆಳೆದು ಅರಳಿ ಪ್ರಕೃತಿ ತುಂಬಾ ಪಸರಿಸಿ ನೋಡುವಲ್ಲೆಲ್ಲಾ ಕಣ್ಣು ಸೋಲುವಂತಾಗಿದೆ. ಹಾಗೆ ಹಬ್ಬಿದ ಪುಷ್ಪರಾಶಿಗಳೇ

ದುಂಡಗಾದ ದೊಡ್ಡ ಮಾಲೆಯಾಗಿದೆ. ನಲ್ಲನೆಡೆಗೆ (ಕಾದಲ) ನಲ್ಲೆ (ಕಾದಲೆ) ಖಂಡಿತಾ ಬಹಳು. ಸಮಸ್ತ ವಿಶ್ವವೇ ಈ ಸಮಾಗಮದಲ್ಲಿ ತೊಡಗಿಕೊಂಡಂತೆ, ಅವಳ ಬಳಿ ಸಮಸ್ತ ಪ್ರಕೃತಿಯೇ ಒಂದು ಪುಷ್ಪಮಾಲೆಯಾಗಿದೆ.

ಅರರೆ, ಈ ತರಳ ಎರಳೆ ಹರಿಣಿಗಳಿದ್ದಲ್ಲಿ ಕೈಯಲ್ಲಿ ಹೂಮಾಲೆ ಹಿಡಿದ ನಲ್ಲೆ, ನಲ್ಲರು. ಇನ್ನಿಲ್ಲಿ ಬೇಟೆಗಾರನಿಗೇನು ಕೆಲಸ? ಈ ನಲ್ಲನಲ್ಲೆಯರ ಸುತ್ತ ಕೋಲು ಸಖೀ ಚಂದ್ರಮುಖೀ ಎಂದು ಸುಗ್ಗಿಯ ಉತ್ಸಾಹದ ಕೋಲಾಟ ನಡೆಯುತ್ತಿದೆ. ಇನ್ನೀಗ ಹೂಮಾಲೆ ಹಿಡಿದವರೂ ಕುಣಿಯಬೇಕೆ? ಪ್ರಶ್ನೆಗಳು. ಉತ್ತರವಿಲ್ಲ. ಎಚ್ಚರಗೊಂಡಾಗ ತಲೆನೋವು, ವಿಪರೀತ ಹೊಟ್ಟೆನೋವು. ಕಣ್ಣುಮುಚ್ಚಿದರೆ ಏನೇನೋ ಅಸ್ಪಷ್ಟ ಚಿತ್ರಗಳು (ಅದು ಸ್ಟಿರಾಯ್ಡ್ ಔಷಧಿಯ ಸೈಡ್ ಎಫೆಕ್ಟ್‌ಗಳಲ್ಲಿ ಒಂದು ಎಂದು ಆಮೇಲೆ ತಿಳಿಯಿತು). ಹಾಗೆ ಕಣ್ಣುಬಾಡಿ ತುಸು ನಿದ್ರೆಗೆ ಜಾರುವಂತಾದರೆ ಕೋಲಾಟದಂತಹ ಯಾವುದೋ ಒಂದು ನೃತ್ಯ, ಅಸ್ಪಷ್ಟ ಸಂಗೀತ. ಸುಂದರವಾದ ಹೂದೋಟದಂತಹ ಬನ.

ವೈದ್ಯನಾದ ನನ್ನ ತಮ್ಮ ಅವನ ರಕ್ತದಿಂದ ಬೇರ್ಪಡಿಸಿದ ಪ್ಲೇಟ್‌ಲೆಟ್ ಕಣಗಳ ಪ್ಯಾಕೆಟ್ ಹಿಡಿದುಕೊಂಡು ಬಂದ. ಆ ಕಣಗಳನ್ನು ನನ್ನ ದೇಹದೊಳಗೆ ತುಂಬಿಸಿ ಒಂದು ಗಂಟೆ ಬಳಿಕ ಪುನಃ ಸೂಜಿ ಚುಚ್ಚಿ ರಕ್ತತೆಗೆದು ಕಣಗಳ ಪರೀಕ್ಷೆ. ನಾನು ಬಹಳ ಆಯಾಸಗೊಂಡಿದ್ದೆ. ಮೈಕೈ ನೋವು. ಎಲುಬಿಗೆ ಚುಚ್ಚಿದ ಬೇನೆ. ನನಗೇ ಅರಿಯದಂತೆ ಗಾಢನಿದ್ರೆಗೆ ಸಂದು ಹೋಗಿದ್ದೆ.[೯]

ರಾತ್ರಿ ಯಾವಾಗಲೋ ಎಚ್ಚರ ಅಥವಾ ಅದು ಎಚ್ಚರವಾದಂತೆ ಕನಸೋ, ಈಗ ಹೇಳಲಾರೆ. ಪುರಾತನವಾದ ನಮ್ಮ ಊರುಮನೆಯಲ್ಲಿ (ಅದು ೧೮೫೯ರಲ್ಲಿ ನನ್ನ ಅಜ್ಜನ ಅಜ್ಜ ಕಟ್ಟಿಸಿದ ಮನೆ) ನನ್ನ ಚಿಕ್ಕಪ್ಪ ಪೂಜೆ ಮಾಡಿ ಮಂಗಳಾರತಿಗೆ ಊದುತ್ತಿದ್ದ ಶಂಖ ನನ್ನ ಬಳಿ ಹಾಸಿಗೆಯಲ್ಲಿದೆ. ಅರರೆ ಇದು ಶಂಖವಲ್ಲ, ನಾದಲೀಲೆ ಸಂಕಲನದ ಮುಖಪುಟದ ಚಿತ್ರ.[೧೦] ಈ ಪುಸ್ತಕ ಇಲ್ಲಿಗೆ ಹೇಗೆ ಬಂತು? ನಾನು ಆಸ್ಪತ್ರೆಯಲ್ಲಿ ಓದಲು ಹೆಂಡತಿಯಲ್ಲಿ ತರಲು ಹೇಳಿದ್ದು ಅರ್ಧ ಓದಿ ಇಟ್ಟಿದ್ದ ಜಿ.ಎಚ್. ನಾಯಕರ 'ಹರಿಶ್ಚಂದ್ರಕಾವ್ಯ' ದ ಮೇಲಿನ ವಿಮರ್ಶೆ, 'ಗುಣಗೌರವ' ಹಾಗೂ ಇತ್ತೀಚೆಗೆ ಬಂದ ಆಲನಹಳ್ಳಿಯ ಸಮಗ್ರ ಕಥೆಗಳ ಸಂಕಲನ. 'ನಾದಲೀಲೆ' ಪುಸ್ತಕ ತರಲು ಹೇಳಿಲ್ಲ. ಬಹುಶಃ ಸ್ಟಿರಾಯ್ಡ್ ಔಷಧಿಯ ಭ್ರಮೆಯಾಗಿರಬಹುದು. ಬೆಳಿಗ್ಗೆ ಎಂಟುಗಂಟೆಗೆ ಮುಖ್ಯ ಡಾಕ್ಟರು ಬರುವಾಗ ರಕ್ತಕಣಗಳ ಪರೀಕ್ಷೆಯ ಹೊಸ ರಿಪೋರ್ಟು ಬೇಕು. ಹಾಗಾಗಿ ನಸುಕಿಗೆ ಮೊದಲೆ ರಕ್ತ ತೆಗೆಯಲು ದಾದಿ ಎಬ್ಬಿಸುತ್ತಾಳೆ. ಬೆಳಗಿನ ತನಕ ಚೆನ್ನಾಗಿ ನಿದ್ದೆ ಮಾಡಬೇಕು.



ಕನಸೋ, ಎಚ್ಚರವೋ, ಭ್ರಮೆಯೋ ಎಂದು ಈಗ ಹೇಳಲಾರದಂತಹ ಸುಂದರವಾದ ಬೆಳಗಾತ. ಆಹ್ಲಾದ ಚೈತನ್ಯದ ಸುಗ್ಗಿ. ತಿರುಚೆಂದೂರಿನ ಕಡಲ ಕಿನಾರೆಯಲ್ಲಿ[೧೧] ದಶಕಗಳ ಹಿಂದೆ ನೋಡಿದ ದುಂಡಗಿನ ಕೆಂಪಗಿನ ಸೂರ್ಯೋದಯ. ಕತ್ತಲಿನ ಹಿಂಸೆಯೆಲ್ಲಾ ಕಳೆದೇ ಹೋಗಿದೆ. (ಕಳೆಯಲಿಲ್ಲೆ ಕತ್ತಲಂಥ ಕತ್ತಲವೇ ಜಾರಿ? ಕೇಳುವ ಪ್ರಶ್ನೆಯ ರೆಟರಿಕ್‌ನಲ್ಲೆ ಸಮಾಧಾನ ಉತ್ತರ ಅಡಗಿದೆ.) ನೆನಪಿಗೆ ಬಂದ ಒಂದು ವಾಕ್ಯ 'ಮುಗಿಲ ಬಾಯ ಗಾಳಿ ಕೊಳಲ ಬೆಳಕ ಹಾಡ ಬೀರಿ.' ಇದೇನಿದು! ಭೂಮಿ ಆಕಾಶಗಳನ್ನು ಒಟ್ಟಿಗೆ ಬೆಸೆಯುವ ಗಾಳಿ ಕೊಳಲು. ಇದು ಕರೆವ ಕರುವನ್ನು ಸೆಳೆವ ಗೋಪಾಲನ ಬಿದಿರು ಕೊಳಲಲ್ಲ. ಕೊಳಲಿನವನು ಎಲ್ಲು ಇಹನು ಎಂದರೆ ಆಕಾಶಭೂಮಿಯನ್ನು ಒಂದು ಮಾಡುವವನೆ? ಇಲ್ಲೀಗ ಅದು ಮುಗಿಲ ಬಾಯ ಗಾಳಿಕೊಳಲು. ಇನ್ನೊಂದು ಕಡೆ ಅದು 'ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ!' ಎಂಬ ಬೇಂದ್ರೆಯ ('ಹಕ್ಕಿ ಹಾರುತಿದೆ ನೋಡಿದಿರಾ?' ಕವನ) ಸಾಲಲ್ಲವೆ? ನೆನಪು ಸ್ಪಷ್ಟವಾಗಲಿಲ್ಲ.

'ಮುಗಿಲ ಬಾಯ ಗಾಳಿ ಕೊಳಲ ಬೆಳಕ ಹಾಡ ಬೀರಿ/ಕಳೆಯಲಿಲ್ಲೆ ಕತ್ತಲಂಥ ಕತ್ತಲವೇ ಜಾರಿ?' ಇನ್ನು ಕೊಳಲಿನವನ ಕಾಣೆ ಎಂಬುದು ಸಾಧ್ಯವಿಲ್ಲ. ಕೃಷ್ಣನ (ಕೊಳಲಿನವ) ವಿಶ್ವರೂಪದರ್ಶನದಂತೆ ಮೂರ್ತೀಕರಣಗೊಂಡ (Personification) ಮುಗಿಲು. ಅದರ ಬಾಯಲ್ಲಿ ಇರುವುದು ಗಾಳಿಯ ಕೊಳಲು. (ಹಾಗೆಯೇ ಮುಗಿಲಿನ ಬಾಯಿಯೂ ಗಾಳಿಗೆ ಕೊಳಲು.) ಪ್ರೇಮದ ಲಹರಿ, ಜೀವ ಪ್ರಾಣದ ಉಸಿರು, ವಿಶ್ವ ಶ್ರುತಿಯ ನಾದ ಎಲ್ಲಾ ಒಂದು ನಿರಂತರ ನಾಟ್ಯದಲ್ಲಿ ತೊಡಗಿದ, ಜೀವ-ಸಾವು ಸೇರಿಕೊಂಡ ಚಲನೆಯ ಒಂದು ಆಟದಂತೆ (ಲೀಲೆ) ಕೊಳಲೇ ಗಾಳಿಯಾಗಿ ಗಾಳಿಯೇ ಕೊಳಲಾಗಿ ಸೇರಿಕೊಂಡಿದೆ. ಮುಗಿಲಿನಿಂದ ಮಳೆ, ಬೆಳೆ, ಬಿತ್ತನೆ, ಜೀವರಾಶಿಯ ಚಿಗುರು.

ಆ ಕೊಳಲಿನಿಂದ ಮುಂಜಾವದ ಎಲರು ಪ್ರಾಣವಾಯುವಾಗಿ ಭೂಮಿ ಆಕಾಶಗಳನ್ನು ವ್ಯಾಪಿಸಬಲ್ಲದು. ಈ ಗಾಳಿ ಕೊಳಲು ಬೀರುವುದು ಬೆಳಕಿನ ಹಾಡನ್ನು. ಪುನಃ ಕಣ್ಣು, ಕಿವಿಗಳ ಅನುಭವ.[೧೨] ಮೈಯನ್ನು (ತ್ವಚೆ) ಸ್ಪರ್ಶಿಸುವ ಗಾಳಿ. ಆ ಗಾಳಿಯಲ್ಲಿ ಮೂಗಿಗೆ ತಾಕುವ ಅಲರು, ಮಲರುಗಳ ಕಂಪು. ನಾಲಗೆಯಿಂದ (ಗಾಳಿ ಮೂಲಕ) ಹಾಡುವ ಹಾಡು. ಹೀಗೆ ಪಂಚೇಂದ್ರಿಯಗಳ ಮೂಲಕ ಪ್ರವೇಶಿಸಿ ಬದುಕಿನ ಪ್ರೀತಿಯ ಜೀವಚೈತನ್ಯವನ್ನು ಅಂತರಾಳದ ಅನುಭವವಾಗಿ ಪಡಿಮೂಡಿಸುವ ಗಾಳಿಕೊಳಲು ಪ್ರಾಣವಾಯುವಾಗಿ ಆವರಿಸಿದೆ. ಹಿಂದೆ ಕೊಳಲಿನವನು ಎಲ್ಲು ಇಹನು ಎಂದುದು ಈಗ ಮುಗಿಲ ಬಾಯ ಗಾಳಿಕೊಳಲ ಮೂಲಕ ವಿಸ್ತರಿಸಿ ಪೃಥ್ವಿ ಅಂತರಿಕ್ಷ

ಗಳಲ್ಲಿ ವ್ಯಾಪಿಸಿದೆ. ಸಹೃದಯರಿಗೆ ಇದೊಂದು ಅತ್ಯದ್ಭುತವಾದ 'ಕಾವ್ಯಾನುಭವ'.

ಇಲ್ಲಿ ಮುಗಿಲ ಬಾಯ ಗಾಳಿಕೊಳಲು ಬೀರುವಂತಹದ್ದು ಬೆಳಕಿನ ಹಾಡು. 'ಬೀರು' ಎಂದರೆ 'ಹರಡು' (Spread) 'ಪ್ರಸಾರ ಮಾಡು' (broadcast) ಎಂಬ ಹಾಡು (ಧ್ವನಿ) ಹಾಗೂ ಬೆಳಕು ಎರಡಕ್ಕೂ ಹೊಂದುವ ಅರ್ಥ ಇವೆ. ರೈತನು ಹೊಲದಲ್ಲಿ ಭತ್ತದ ನೇಜಿ ಹಾಕಲು ಬಿತ್ತನೆ ಬೀಜಗಳನ್ನು ಬೀರುತ್ತಾನೆ. ಮುಂದೆ ಅವು ಬೆಳೆಯುತ್ತವೆ. 'ನಾದ' ಲೀಲೆಗೆ ಇಲ್ಲಿ 'ಹಾಡು' ಇದೆ. ಆದರೆ ಅದು ಬೆಳಕಿನ ಹಾಡು. ಕತ್ತಲನ್ನು ಕಳೆದು ಅದು ಬೆಳಗಾಗಿ ದಿನವಾಗಿ ಬೆಳೆಯುತ್ತದೆ. ಬೆಳಕು ಕಿವಿಗಲ್ಲ. ಆದರೆ, ಇಲ್ಲಿ ಬೆಳಗಿಗೂ ನಾದಮಯವಾದ ಹಾಡಿನ ಒಂದು ಲಯವಿದೆ. ಹಾಡಿಗೂ ಬೆಳಗುವ ಹೊಳಪಿದೆ. ಅಂತಹ ಬೆಳಕ ಹಾಡನ್ನು ಮುಗಿಲು (ಆಕಾಶ) ಬೀರಿದಾಗ (ಅದು ಕತ್ತಲನ್ನು ಕಳೆದು ಬೆಳಕನ್ನು ತರುವ ಹಾಡು) ಗಾಳಿ ಕೊಳಲಿನ ಪ್ರೇಮ ಚೈತನ್ಯ ಆವಾಹನೆಗೊಂಡು ಕಂಗೊಳಿಸುವ ಕೆಂಪು ಇರಲಿ; ಬೇಕಾದರೆ ಕಂಗೆಡಿಸುವ ಮಂಜು ಬರಲಿ ಎಂಬ ಆತ್ಮವಿಶ್ವಾಸ ಮೂಡುತ್ತದೆ. ಈ ಆತ್ಮವಿಶ್ವಾಸ ಬೇಟೆಗಾರನನ್ನು ಮರೆಸಿ ಬಿಡುತ್ತದೆ. ಅಲ್ಲಿ ಬೇಟೆ ಇಲ್ಲ. ಅದೆಲ್ಲ ಒಂದು ಆಟವಾಗಿ ತೋರುತ್ತದೆ.

ಆಟವೆಂದರೆ ಮಗುವಿನ ಆಟ. ಸೃಷ್ಟಿ ಕ್ರಿಯೆಯಲ್ಲಿ ಕೂಡುವ ಬೇಟದ ಆಟ. ಅದೂ ಬೇಟದ ಒಂದು ಬಗೆ (ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ, ನಾರಿ.) ಈ ಜಗವೆಂಬ ನಾಟಕ ರಂಗದ ಒಂದು ಆಟ. 'ನಾದಲೀಲೆ'ಯ ಕೋಲಾಟದ ಭಾಗವಾದ ಆಟ. 'ಲೀಲೆ'ಯೆಂಬ ಆಧ್ಯಾತ್ಮಿಕ ಕಲ್ಪನೆಯ ಅಂಗವಾದ ಆಟ. ನಾದವೇ ಲೀಲೆಯಾದ ಸೃಷ್ಟಿಯ ಆವರ್ತನ ಲಯದ ತಾಳಮೇಳಗಳು ಕೂಡುವ ಸಮಶ್ರುತಿಯ ಆಟ. ಬ್ರಹ್ಮಾಂಡದ ಲೀಲೆಯನ್ನು ಹಿಡಿದಿಡುವ ಬೇಟದ ಬಗೆ ಅದು.

ಆಸ್ಪತ್ರೆಯ ಮಂಚದಲ್ಲಿ ಮಲಗಿದ್ದಾಗ ಇಷ್ಟು ಸ್ಪಷ್ಟವಾದ ಕಲ್ಪನೆ ಬಂದಿತ್ತೆಂದು ಹೇಳಲಾರೆ. ಕತ್ತಲು ಕಳೆದ ಸುಂದರ ಬೆಳಗಿನ ಒಂದು ಕಲ್ಪನೆ ಸ್ಪಷ್ಟವಿತ್ತು. ಅದು ಬೇಂದ್ರೆಯ 'ಬೆಳಗು' ಕವನವನ್ನು (ಮೂಡಲ ಮನೆಯಾ ಮುತ್ತಿನ ನೀರಿನ/ಎರಕsವ ಹೊಯ್ದಾ) 'ಬೆಳ್ಳಿ ಮೋಡ' ಸಿನಿಮಾದಲ್ಲಿ ಹಾಡಿದ ದಾಟಿಯ ನೆನಪು ತಂದಿತ್ತು. ಅಲ್ಲಿ ಬೆಳಕಿನ ಸಂಭ್ರಮ ಸಮೃದ್ಧಿ. ಬೇಟೆಗಾರ ಮಾಯವಾದ ಅಥವಾ ಆ ಬೇಟೆಗಾರ ಈ ಬ್ರಹ್ಮಾಂಡವನ್ನು ಆವರಿಸಿರುವ ಮಧುರ ನಾದದ ಜೀವ ತಂತುಗಳ ಸೃಷ್ಟಿಲೀಲೆಯ ಭಾಗವಾಗಿ ಸೇರಿಹೋದಂತೆ ನನಗೆ ಭಾಸವಾಯಿತು. ಅದು ಅರೆಪ್ರಜ್ಞಾವಸ್ಥೆಯ ಅಥವಾ ಸುಷುಪ್ತ ಸ್ಥಿತಿ ಎನ್ನಬಹುದಾದ ಕನಸು ಎಚ್ಚರಗಳ ಸಂಗಮದ ಅನುಭವವೂ ಆಗಿದ್ದಿರಬಹುದು. ಭಾವಸ್ಮೃತಿಯಲ್ಲಿ ಅವೆಲ್ಲಾ ಬಹುಶಃ ಕಲಸಿಕೊಳ್ಳುತ್ತಿದ್ದವೇನೊ.

ಬೆಳಗಾತ ನಾಲ್ಕೂವರೆ ಗಂಟೆಗೆ ದಾದಿ ಬಂದು ಎಬ್ಬಿಸಿದಳು. ಆ ದಾದಿ



ಕ್ರಿಶ್ಚಿಯನ್ ಸನ್ಯಾಸಿನಿ. – ವಿಜಯಶಂಕರ್, ಈ ತನಕ ನಿನಗೆ ಬೇಕಾದ ರಕ್ತಕಣಗಳು ಏರುತ್ತಾ ಇಲ್ಲ ಅಲ್ಲವೆ? ನಾನು ಪರೀಕ್ಷೆಗೆ ನಿನ್ನ ರಕ್ತ ತೆಗೆಯುವ ಮೊದಲು ಸರ್ವಶಕ್ತನಾದ ದೇವರನ್ನು ಪ್ರಾರ್ಥಿಸುತ್ತೇನೆ. ನಿನ್ನ ರಕ್ತದ ಪ್ಲೇಟ್‌ಲೆಟ್ ಕಣಗಳು ವೃದ್ಧಿಸಲಿ – ಎಂದು ಇಂಗ್ಲಿಷಿನಲ್ಲಿ ಹೇಳಿ ಸೂಜಿ ಚುಚ್ಚಿದಳು.

ಬೆಳಿಗ್ಗೆ ಎಂಟು ಗಂಟೆಗೆ ರಕ್ತಪರೀಕ್ಷೆಯ ವರದಿ ಬಂತು. ರಾತ್ರಿಯ ಎಂಟು ಗಂಟೆಗಳ ಅವಧಿಯಲ್ಲಿ ಹತ್ತು ಸಾವಿರಕ್ಕೆ ತುಸು ಅಧಿಕ ರಕ್ತಕಣಗಲು ಮಾತ್ರ ಸತ್ತಿದ್ದವು. ನನ್ನ ವೈದ್ಯ ಸಹೋದರನ ದೇಹದಿಂದ ನೀಡಿದ್ದರಲ್ಲಿ ನಲವತ್ತು ಸಾವಿರ ಕಣಗಳು ಬದುಕಿ ಉಳಿದಿದ್ದವು. ಬೆಳಿಗ್ಗೆ ಬಂದ ಮುಖ್ಯ ವೈದ್ಯರು, ಇನ್ನೊಂದು ದಿನಕ್ಕೆ ಏನೂ ಅಪಾಯ ವಾಗದು. ರಕ್ತ ಕಣಗಳು ಹದಿನೈದು ಸಾವಿರದಿಂದ ಕೆಳಗಿಳಿಯುವವರೆಗೆ ಹೊರಗಿನಿಂದ ಹೊಸ ಕಣಗಳನ್ನು ನೀಡುವುದು ಬೇಡ. ಔಷಧಿಯಲ್ಲೇ ನಿಯಂತ್ರಿಸೋಣ. ದೇಹ ವ್ಯವಸ್ಥೆ ಸಹಕಾರ ನೀಡುವ ಸೂಚನೆ ಪ್ರಾರಂಭಿಸಿದೆ ಎಂದರು. ಮತ್ತೆರಡು ದಿನಗಳಲ್ಲಿ ವೈದ್ಯರು, ನಾನು ಪ್ರಾಣಾಪಾಯದಿಂದ ಸಂಪೂರ್ಣ ಪಾರಾಗಿರುವುದಾಗಿಯೂ ಮತ್ತೊಂದು ವಾರದೊಳಗೆ ಆಸ್ಪತ್ರೆಯಿಂದ ಬಿಡುಗಡೆಮಾಡಲು ಸಾಧ್ಯವಾಗಲೂ ಬಹುದು ಎಂದು ಘೋಷಿಸಿದರು. ನನ್ನ ಹೆಂಡತಿ, ಮಕ್ಕಳು, ತಂದೆ, ತಾಯಿ, ತಮ್ಮಂದಿರು, ತಂಗಿ, ಅತ್ತೆ, ಮಾವ, ಭಾವಂದಿರು, ನಾದಿನಿಯರು – ಎಲ್ಲರ ಮುಖದಲ್ಲೂ ನಗು, ಸಂತೋಷ, ನಿರುದ್ವಿಗ್ನತೆಯ ಭಾವ.

ಆಸ್ಪತ್ರೆಯಲ್ಲಿ ನನಗೊಂದು ಅಚ್ಚರಿಯ ವಿಚಾರ. ದೇಹಕ್ಕೆ ಅಪಾಯ ಇದ್ದಷ್ಟು ಕಾಲ ಪ್ರತಿ ಗಂಟೆಗೊಮ್ಮೆ ದಾಖಲಿಸುತ್ತಿದ್ದ ರಕ್ತದ ಒತ್ತಡ ಪರೀಕ್ಷೆಯಲ್ಲಿ ಏನೂ ಏರು ಪೇರೂ ಇರಲಿಲ್ಲ. ಸಮಾಧಾನದ ಸಹಜ ಒತ್ತಡ. ನನ್ನದು ರಕ್ತ ಸಂಬಂಧಿ ರೋಗ. ಆದರೂ ಎಲ್ಲೂ ಉದ್ವಿಗ್ನತೆಯಿಂದ ರಕ್ತದ ಒತ್ತಡ ಹೆಚ್ಚುಕಮ್ಮಿಯಾಗಿ ಏನೇ ತೊಂದರೆ ಅಥವಾ ಆಂತರಿಕ ರಕ್ತಸ್ರಾವ ಆಗಲಿಲ್ಲ. 'ಬೇಟೆಗಾರ'ನನ್ನು ನಾನು ಸ್ವೀಕರಿಸಿದ ರೀತಿ (ಕ್ರಮ) ಕಾರಣವೆ? ನಾನೇನೂ ಹೇಳಲಾರೆ. ಆದರೆ ವೈದ್ಯರುಗಳು ಹೇಳಿದರು – ನಿನ್ನ ಶಾಂತ ಸ್ವಭಾವ ಸಹಕರಿಸಿದೆ. ಗುಣವಾಗಲು ಶೇಕಡಾ ನಲವತ್ತು ಭಾಗ ನಿನ್ನ ವಿಲ್ ಪವರ್ ಕಾರಣ. ಮತ್ತೊಬ್ಬ ವೈದ್ಯರ ಪ್ರಕಾರ ಆಯುರ್ವೇದ ಶಾಸ್ತ್ರ ಹೇಳುವ ದೇಹದೊಳಗಿನ ಪ್ರಾಣಾಗ್ನಿ ನನ್ನೊಳಗೆ ಬಲಿಷ್ಠವಾಗಿದ್ದು ನನ್ನನ್ನು ಅಪಾಯದಿಂದ ಕಾಪಾಡಿದ್ದು. ಇನ್ನೊಬ್ಬ ವೈದ್ಯರ ಪ್ರಕಾರ ಸದೃಢವಾಗಿದ್ದ ನನ್ನ ಇತರ ದೇಹಾರೋಗ್ಯ ರಕ್ತದ ಈ ಆಕಸ್ಮಿಕ ಅಪಘಾತದಿಂದ ಪಾರು ಮಾಡಿದ್ದು.

ವರ್ತಮಾನ ತಿಳಿದ ನನ್ನ ಗುರುಗಳಾದ ಡಾ।। ಯು.ಆರ್. ಅನಂತಮೂರ್ತಿ ಯವರು ಮಾರನೆದಿನ ಫೋನುಮಾಡಿ, ''ವಿಚಾರ ತಿಳಿಯಿತಪ್ಪಾ ವಿಜಯ. ಬದುಕಿನ

ಪ್ರೀತಿ ನಮ್ಮನ್ನು ರಕ್ಷಿಸುವುದು. ಬದುಕುವ ಬಯಕೆ ಜೊತೆಗೆ ದೈವಕೃಪೆಯೂ ಇರಬೇಕು. ನೀನು ಉದ್ಯೋಗದಲ್ಲಿ ಸಾಕಷ್ಟು ಸಾಧನೆ ಮಾಡಿರುವಿ. ದೇಹವನ್ನಿನ್ನು ದಂಡಿಸಬೇಡ. ಸಂಗೀತವೆಂದರೆ ನಿನಗೆ ಮೋಹ. ಇಷ್ಟವಾದ್ದನ್ನು ಓದುತ್ತಾ ಬೇಕಾದ ಸಂಗೀತ ಕೇಳುತ್ತಾ ಸ್ವಲ್ಪ ಹಾಯಾಗಿರು'' ಎಂದರು. ಸುದ್ದಿ ತಿಳಿದು ಊರಿನಿಂದ ಆಸ್ಪತ್ರೆಗೆ ಫೋನುಮಾಡಿ ಮಾತಾಡಿದ ಸುಬ್ರಾಯ ಚೊಕ್ಕಾಡಿಯವರಲ್ಲಿ ನಿಮಗೆ ಬೇಂದ್ರೆಯ 'ನಾದಲೀಲೆ' ಕವನ ಇಷ್ಟವೆ ಎಂದು ಕೇಳಿದೆ.

## ಭಾಗ - ೨

ಎರಡು ವಾರಗಳ ಆಸ್ಪತ್ರೆವಾಸ ಮುಗಿಸಿ ಮನೆಗೆ ಬಂದವ 'ನಾದಲೀಲೆ' ಸಂಕಲನ ಬಿಡಿಸಿದೆ. ಕವನದ ಭಾವ ಸಂದರ್ಭದಲ್ಲಿ ಬೇಂದ್ರೆಯವರು ಹೀಗೆ ಬರೆದಿದ್ದಾರೆ:

''ಜೀವನದ ತಾಲ-ಲಯಾನುಸಾರಿತ್ವದಲ್ಲಿ ಒಂದು ನಾದತನ್ಮಯತೆ ಇದೆ. ಮರಣದ ಭಯ ಬೇತಾಲಕ್ಕೆ ಎಳೆಯುವುದು. ಜೀವನದ ತನ್ಮಯತೆ ಬೆಳಕು, ಹೂವು, ಹರಿಣಿ, ಹಸುಗಳ ಜೀವನದಲ್ಲೂ ದಿನವೂ ಕಂಗೊಳಿಸುವುದು.''

ನನ್ನ ಮನೆಯಲ್ಲಿದ್ದ ಪುಸ್ತಕಗಳಲ್ಲಿ 'ನಾದಲೀಲೆ' ಬಗ್ಗೆ ಯಾರು ಏನು ಬರೆದಿದ್ದಾರೆಂದು ಹುಡುಕಿದೆ. ಕೀರ್ತಿನಾಥ ಕುರ್ತಕೋಟಿ, ಜಿ.ಎಸ್. ಆಮೂರ, ಯು.ಆರ್. ಅನಂತಮೂರ್ತಿ, ಶಂಕರ ಮೊಕಾಶಿ ಪುಣೇಕರ್, ರಾಜೇಂದ್ರ ಚೆನ್ನಿ, ಮಲ್ಲೇಪುರಂ ಜಿ. ವೆಂಕಟೇಶ್, ಕೆ.ವಿ. ತಿರುಮಲೇಶ್, ಸಿ.ಕೆ. ನಾವಲಗಿ, ಬಿ.ಎಚ್. ಶ್ರೀಧರ, ಬನ್ನಂಜೆ ಗೋವಿಂದಾಚಾರ್ಯ, ಸುಮತೀಂದ್ರ ನಾಡಿಗ, ತೀ.ನಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಚ್.ಎಸ್. ರಾಘವೇಂದ್ರರಾವ್, ವಾಮನ ಬೇಂದ್ರೆ, ಕೆ.ಸಿ. ಶಿವಾರೆಡ್ಡಿ, ಜಿ.ಎಚ್. ನಾಯಕ, ಬೇಂದ್ರೆ ಬಗ್ಗೆ ಬರೆದಿದ್ದಾರೆ. ಆದರೆ ಅವರ ಪುಸ್ತಕಗಳಲ್ಲಿ 'ನಾದಲೀಲೆ' ಬಗ್ಗೆ ಮಾತಿಲ್ಲ. (ಈ ಲೇಖನ ಬರೆದ ಬಳಿಕ 'ನಾದಲೀಲೆ' ಬಗ್ಗೆ ಜಿ.ಎಚ್. ನಾಯಕರು ಮಾಡಿದ ಭಾಷಣದ ಅಚ್ಚಾದ ಪ್ರತಿ ಓದಲು ದೊರಕಿತು. ಪ್ರಕಟಣೆಗೆ ಮೊದಲು ಅವರ ಮಾತುಗಳನ್ನು ಈ ಲೇಖನದಲ್ಲಿ ಸೇರಿಸಿಕೊಂಡಿದ್ದೇನೆ.)

ಡಾ|| ರುಕ್ಮಿಣಿ ಪರ್ವತಿ ಅವರು 'ಅಂಬಿಕಾತನಯದತ್ತರ ಭಾವಗೀತೆಗಳು' ಎಂಬ ಕರ್ನಾಟಕ ವಿಶ್ವವಿದ್ಯಾಲಯದ ಪಿ.ಎಚ್.ಡಿ ಪದವಿ ಪಡೆದ ಪ್ರೌಢಪ್ರಬಂಧದಲ್ಲಿ (ಪುಸ್ತಕ ಪ್ರಕಟಣೆ ಮೈಸೂರಿನ ಉಷಾ ಸಾಹಿತ್ಯ ಮಾಲೆ) ಈ ಪದ್ಯ ವಿಶೇಷವಾಗಿ ಚಿಕ್ಕ ಮಕ್ಕಳ ಮನಸ್ಸನ್ನು ಸೆಳೆದಿದೆ ಎಂದು ಹೇಳುತ್ತಾರೆ. ಮುಂದುವರಿದ ಅವರು ''ಬೇಂದ್ರೆಯವರ ಪತ್ನಿ ತಾಪತ್ರಯಗಳಿಂದ ಕುಗ್ಗಿಹೋದಾಗ ಅವಳಿಗೆ ಧೈರ್ಯ



ಕೊಡಲು ಅಂಬಿಕಾತನಯದತ್ತರು ಪ್ರಾಣ ಭಯವಿಲ್ಲದೆ ಮೇಯುವ ಪ್ರಾಣಿಗಳ, ಇನ್ನೊಬ್ಬರ ಸುಖಕ್ಕಾಗಿ ಅರಳುವ ಹೂವುಗಳ ಉಪಮೆಗಳಿಂದ ಕೂಡಿದ 'ನಾದಲೀಲೆ' ಕವನವನ್ನು ಸೃಷ್ಟಿಸಿದ್ದಾರೆ'' ಎಂದು ಬರೆಯುತ್ತಾರೆ. ಈ ರೀತಿಯಲ್ಲಿ ಬರೆಯುತ್ತಾ ಹೋದ ಅವರ ವಿಶ್ಲೇಷಣೆ ನನಗೆ ಒಪ್ಪಿಗೆಯಾಗಲಿಲ್ಲ, ಮಾತ್ರವಲ್ಲ ಇಂತಹ ಬರಹಗಳು ಕವನಕ್ಕೆ ನ್ಯಾಯ ನೀಡುವುದಿಲ್ಲ ಎಂದೂ ಅನಿಸಿತು.

ಡಾ|| ಡಿ.ಆರ್. ನಾಗರಾಜ್ ಅವರು ಬೇಂದ್ರೆಯವರ 'ನೃತ್ಯಯಜ್ಞ' ಕವನದ ಬಗ್ಗೆ ಬರೆಯುತ್ತಾ (ಅಮೃತ ಮತ್ತು ಗರುಡ ವಿಮರ್ಶಾ ಸಂಕಲನ) 'ನಾದಲೀಲೆ' ಕುರಿತು ಹೀಗೆ ಹೇಳುತ್ತಾರೆ:

'ನಾದಲೀಲೆ'ಯಲ್ಲಿ ಕೊನೆಯ ತನಕ ಅಪಾಯದ, ಬೇಟೆಗಾರನ ಭೀತಿ ಮುಂದುವರಿದು ಪರಿವರ್ತನೆಯಾಗುತ್ತದೆ. 'ಬೇಟೆಯಲ್ಲ, ಆಟವೆಲ್ಲ, ಬೇಟದ ಬಗೆ' ಎಂಬ ಅರಿವು ಮೂಡಿ ಅದು ಮೂಲ ಪ್ರೇಮದಲ್ಲಿ ಒಂದಾಗುತ್ತದೆ. ಚಕ್ರ ತಿರುಗಿ ಸಾಮರಸ್ಯಕ್ಕೆ ನಿಲ್ಲುತ್ತದೆ. ಕುತೂಹಲದ ಸಂಗತಿ ಎಂದರೆ, ಈ ವಿನ್ಯಾಸಕ್ಕೆ ವಿರುದ್ಧವಾದ ಕವನಗಳೂ ಬೇಂದ್ರೆಯವರಲ್ಲಿ ಸಾಕಷ್ಟಿವೆ. ಅಂಥ ಒಂದು ವಿಶಿಷ್ಟ ಕೃತಿ 'ನೃತ್ಯಯಜ್ಞ'.

ಡಾ|| ಜಿ.ಎಸ್. ಶಿವರುದ್ರಪ್ಪನವರು, ಬೇಂದ್ರೆ: ಮಂಥನ ಚರ್ಚೆಯಲ್ಲಿ (ಅಡಿಗ, ಕಣವಿಯವರೊಡನೆ ಶೂದ್ರ - ನವೆಂಬರ್ ೧೯೮೧ನೇ ಇಸವಿ ಸಂಚಿಕೆ) ನಾದಲೀಲೆ ಕವನಗಳನ್ನು ಬಹಳ ಜನ ಗಮನಿಸಲಿಲ್ಲ ಎನ್ನುತ್ತಾರೆ. ಮುಂದುವರಿದ ಜಿಎಸ್‌ಎಸ್ ನಾದಲೀಲೆ ತುಂಬಾ 'ಮಿಸ್ಟಿಕ್' ಕವನಗಳಿವೆ ಎಂದು ಹೇಳುತ್ತಾರೆ. ಜಿಎಸ್‌ಎಸ್ ಹೇಳುವ ಮಾತುಗಳು: ''ತನ್ನ ಒಳಗಿನ ಅಂತರಂಗ, ಅದರ ತಾಕಲಾಟಗಳು ಅನ್ನೋದು ಕೇವಲ ಸಾಮಾಜಿಕವಾದದ್ದಾಗಲೀ, ಕೌಟುಂಬಿಕ ವಾದದ್ದಾಗಲೀ ಮಾತ್ರ ಆಗುವುದಿಲ್ಲ. ಒಂದು ಮನಸ್ಸು ಬೇರೊಂದು Higher Mind ಅಂತ ಏನು ಕರೀತೀವಿ ಅದರೊಂದಿಗೆ ಸಂವಾದ ಸ್ಥಾಪಿಸಿಕೊಳ್ಳುವ ಸಂದರ್ಭದ ಅನೇಕ ತಾಕಲಾಟಗಳನ್ನು ನಾವು ಆ ಪದ್ಯಗಳಲ್ಲಿ ಇಮೇಜ್‌ಗಳಲ್ಲಿ ಕಾಣ್ತೇವಿ. ಮೊದಲ ಪದ್ಯ 'ನಾದಲೀಲೆ' ಯಲ್ಲೂ ಅಷ್ಟೇ: 'ಕಂಗೊಳಿಸುವ ಕೆಂಪು ಮುಂದೆ ಕಂಗೆಡಿಸುವ ಮಂಜು ಹಿಂದೆ' ಸಾಲಿನಲ್ಲಿ ಮನುಷ್ಯನ ಅಸ್ತಿತ್ವದ ಬಗ್ಗೆ ಚರ್ಚೆಮಾಡ್ತಾರೆ. Existence ಕುರಿತು, ಹಿಂದನ್ನು ಕುರಿತು, ಮುಂದನ್ನು ಕುರಿತು, ಇದರಲ್ಲಿ ನಮ್ಮ ದಾರಿ ಏನು ಅನ್ನೋದನ್ನ ಕುರಿತು, ಒಂದು ರೀತಿಯ ಅನುಭಾವಿಕ ಅನ್ವೇಷಣೆ ಕೂಡ ಅದರಲ್ಲಿ ಆಗುತ್ತದೆ.''

ಪ್ರೊ|| ಜಿ.ಎಚ್. ನಾಯಕರು 'ನಾದಲೀಲೆ'ಯನ್ನು ಬೇಂದ್ರೆಯವರ ಪ್ರಾತಿನಿಧಿಕ ಕವನಗಳಲ್ಲಿ ಒಂದೆಂದು ಭಾವಿಸುತ್ತಾರೆ. ಬೇಂದ್ರೆಯವರ ಶಕ್ತಿ, ಮಿತಿ ಎರಡೂ ಬಿಂಬಗೊಳ್ಳುವಂತಹ ಕವನಗಳಲ್ಲಿ ಇದೂ ಒಂದೆಂದು ಜಿ.ಎಚ್. ನಾಯಕರು ತಮ್ಮ

ಅನೇಕ ಭಾಷಣಗಳಲ್ಲಿ ಹೇಳುತ್ತಾ ಬಂದಿದ್ದಾರೆಂದು ನನ್ನ ಅನೇಕ ಮಿತ್ರರು ತಿಳಿಸಿದರು. (ಬೇಂದ್ರೆ ಕುರಿತಾದ ಅವರ ಭಾಷಣ ಕೇಳುವ ಅವಕಾಶ ನನಗೆ ಇನ್ನೂ ದೊರಕಿಲ್ಲ) ಜಿ.ಎಚ್. ನಾಯಕರು ಮಂಡ್ಯದ ಸರ್ಕಾರಿ ಮಹಿಳಾ ಮಹಾ ವಿದ್ಯಾಲಯದ 'ಸಾಹಿತ್ಯಕೂಟ'ದಲ್ಲಿ 'ಬೇಂದ್ರೆ ಕಾವ್ಯ: ನಾದ, ಅರ್ಥ, ಅರಿವು' ಎಂಬ ಉಪನ್ಯಾಸವನ್ನು ೨೩-೨-೨೦೦೧ರಂದು ನೀಡಿದ್ದರು. ಅಲ್ಲಿ 'ನಾದಲೀಲೆ' ಕವನದ ಕುರಿತು ಮಾಡಿದ ಅರ್ಥವ್ಯಾಖ್ಯಾನ, ಅದೇ ಕಾಲೇಜಿನ ವಾರ್ಷಿಕ ಪತ್ರಿಕೆಯಲ್ಲಿ (ನೆಲದ ಸಿರಿ - ೨೦೦೧) ಪ್ರಕಟವಾಗಿದೆ. 'ನಾದಲೀಲೆ' ಯ ನಾಲ್ಕು ಪುಟಗಳ ಈ ಪ್ರಾಯೋಗಿಕ ವಿಮರ್ಶೆಯಲ್ಲಿ ಜಿ.ಎಚ್. ನಾಯಕರ ವಿಮರ್ಶೆಯ ಮೂಲ್ಯಮಾಪನ ಗುಣವೂ ಗೋಚರಿಸುತ್ತದೆ. ಅದನ್ನು ಹೀಗೆ ಸಂಗ್ರಹಿಸಬಹುದು:

''ಈ ಕವನದಲ್ಲಿ ನಾದ ಗುಣದ ಸಮೃದ್ಧಿ ಇದೆ. ಕವನ ಪ್ರತಿಮಾ ವಿಧಾನದಲ್ಲಿ ಬೆಳೆದಿದೆ. ಚಿತ್ರವತ್ತಾದ ಸನ್ನಿವೇಶಗಳ ಸೃಷ್ಟಿ ಇದೆ. ಮೊದಲಿನಿಂದ ಕೊನೆಯವರೆಗೂ ಧ್ವನಿಶಕ್ತಿಯು ಪ್ರತಿಮೆಗಳ ಮೂಲಕ, ಮಾತ್ರವಲ್ಲ ಪದ ಪ್ರಯೋಗಗಳಲ್ಲಿಯೂ ಅನುರಣಿಸುತ್ತಿದೆ. ಕವನದಲ್ಲಿ ಅನುಭವವನ್ನು ಅರಿವಿನ ನೆಲೆಗೆ ವಿಸ್ತರಿಸಿ ತಾತ್ವಿಕ ನಿಲುವನ್ನು ಪ್ರತಿಪಾದಿಸುವ ಅಥವಾ ತಾತ್ವಿಕ ತಿಳಿವಳಿಕೆಯನ್ನು ಹಾಯಿಸುವ ಉತ್ಸಾಹ ಉದ್ದೇಶ ಇದೆ...

''ಕವನದ ಮೊದಲ ಮೂರು ಪದ್ಯಭಾಗಗಳ ಕ್ರಿಯಾಕೇಂದ್ರವು ಅನುಕ್ರಮವಾಗಿ ಕಾಡಿನಲ್ಲಿ, ನಾಡಿನಲ್ಲಿ, ಬೀಡಿನಲ್ಲಿ ಇದೆ. ಕೊನೆಯ ಪದ್ಯಭಾಗದಲ್ಲಿ ಹಿಂದಿನ ಪದ್ಯಭಾಗಗಳಲ್ಲಿ ಧ್ವನಿತವಾಗುತ್ತ ಬಂದದ್ದಕ್ಕೆ ತಾತ್ವಿಕ ವ್ಯಾಖ್ಯಾನವನ್ನು ನೀಡಲಾಗಿದೆ. ಈ ಅರಿವಿನ ಸ್ವರೂಪ ಯಾವ ಬಗೆಯದು ?...

''ಈ ಕವನದ ಚಿತ್ರಕ ಶಕ್ತಿ, ಪ್ರತಿಮಾ ವಿಧಾನದಲ್ಲಿ ಕವನ ಕಟ್ಟುವ ಕಲೆಗಾರಿಕೆ, ಧ್ವನಿಶಕ್ತಿಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳುವ ಪ್ರತಿಭಾಶಕ್ತಿ ಅನನ್ಯವಾಗಿದೆ; ಸ್ವೋಪಜ್ಞವಾಗಿದೆ. ಆದರೆ ಕವನ ಪರಿಣಾಮಗೊಳಿಸಿದ ಅರಿವು ಅನನ್ಯ, ಸ್ವೋಪಜ್ಞ ಎನ್ನಬಹುದೆ ? ಇದು ಇಲ್ಲಿ ಎದುರಾಗುವ ಪ್ರಶ್ನೆ.''

ಬೇಂದ್ರೆ ಬಗ್ಗೆ ಬಹಳಷ್ಟು ಬರೆದಿರುವ ಪ್ರೊ|| ಕೀರ್ತಿನಾಥ ಕುರ್ತಕೋಟಿಯವರು 'ನಾದಲೀಲೆ' ಬಗ್ಗೆ ಯಾಕೆ ಬರೆದಿಲ್ಲ ಎಂದು ನನಗೆ ಬಹಳ ಕುತೂಹಲವಾಯಿತು. ಧಾರವಾಡದ ಅವರ ಮನೆಗೆ ಫೋನು ಮಾಡಿದೆ. ಆ ಹೊತ್ತಿಗೆ ಅವರೂ ನನ್ನ 'ನಾದಲೀಲೆ' ಅನುಭವವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿದ್ದರು. ಜ್ವರದಿಂದ ಆಸ್ಪತ್ರೆ ಸೇರಿದ್ದ ಅವರ ಪತ್ನಿ ಒಂದು ದಿನ ಕೋಮಾದಲ್ಲಿದ್ದು ಆಗತಾನೆ ಕಣ್ಣುಬಿಟ್ಟಿದ್ದರು. ನಿರಂತರ ಡಯಾಲಿಸಿಸ್



ಚಿಕಿತ್ಸೆಯಲ್ಲಿರುವ ಅವರ ಒಬ್ಬ ಪುತ್ರ ರಕ್ತದ ಒತ್ತಡ ಏರುಪೇರಾಗಿ ಆತಂಕದಿಂದ ಆಸ್ಪತ್ರೆಯಲ್ಲಿದ್ದು ಆಗತಾನೆ ಹಿಂತಿರುಗಿದ್ದರು. ''ಆ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಲ್ಲೆ. ಕಾವ್ಯವೂ ಲೈಫ್ ಸೇವರ್[೧೩] (Life Saver ಜೀವರಕ್ಷಕ) ಆಗುವುದು ಹೀಗೆ'' ಎಂದರು. ಈ ಕವನದ ಬಗ್ಗೆ ನೀವು ಯಾಕೆ ಏನೂ ಈ ತನಕ ಬರೆದಿಲ್ಲ ಎಂದು ಪುನಃ ಕೇಳಿದರೆ, ನನ್ನನ್ನೆ ಬರೆಯುವಂತೆ ಪ್ರೇರೇಪಿಸಿದರು.

ನನ್ನ ಪ್ರಜ್ಞೆಯಲ್ಲಿ ಹೇಗೋ ಇಳಿದ ಒಂದು ಕವನ ಹೀಗೆ ನನಗೆ ಒದಗಿ ಬಂದಿದೆ. ವಿಮರ್ಶಾಪಾಂಡಿತ್ಯದ ದೃಷ್ಟಿಯಿಂದ ಈ ರೀತಿ ಕಾವ್ಯಕ್ಕೆ ಪ್ರತಿಕ್ರಿಯಿಸುವುದು ಸರಿಯೋ ತಪ್ಪೋ ಎಂಬುದು ನನಗೆ ಇಲ್ಲಿ ಮುಖ್ಯವಲ್ಲ. ಒಂದು ವಿಶಿಷ್ಟ ಸಂದರ್ಭದಲ್ಲಿ ನಾನು ಅನುಭವಿಸಿದ 'ನಾದಲೀಲೆ' ಕವನದ ಸ್ಪರ್ಶಸುಖವನ್ನು ಹೀಗೆ ಹಂಚಿಕೊಳ್ಳುವುದು ಅದರ ಅಂತಃಸತ್ವವನ್ನು ಗುರುತಿಸಿದ ಒಂದು ರೀತಿ ಎಂದು ನಾನು ತಿಳಿಯುತ್ತೇನೆ. ಇದರಿಂದಾಗಿ, ಬದುಕಿನ ಜೀವಂತವಾದ ಇತರ ಸಹಜ ಸಂದರ್ಭಗಳಲ್ಲಿ ಉತ್ತಮ ಕಾವ್ಯಾನುಭವ ಸಿದ್ಧಿಸಲು ಏನೂ ತೊಂದರೆಯಾಗದು. ಡಾ|| ಯು.ಆರ್. ಅನಂತಮೂರ್ತಿಯವರು ಹೇಳಿದಂತೆ (ಪೂರ್ವಾಪರ) ''ಬೇಂದ್ರೆ, ಮುಖ್ಯವಾಗಿ ಪ್ರಜ್ಞೆಯ ವಿವಿಧ ಅವಸ್ಥೆಗಳನ್ನು ಕನ್ನಡದಲ್ಲಿ ಅನನ್ಯವೆಂಬಂತೆ ಸೃಷ್ಟಿಸಿರುವ ಕವಿ.''

ಬೇಂದ್ರೆ ಕಾವ್ಯಾನುಭವದ ಎದುರು ನನ್ನ ಅನುಭವದ ನಿರೂಪಣೆ ಸಪ್ಪೆ ಅನಿಸಿದರೆ ಅದಕ್ಕೆ ಕಾವ್ಯದ ಶ್ರೇಷ್ಠತೆಯೇ ಕಾರಣ. ಕವಿ ಅನುಭವವೊಂದನ್ನು ಭಾಷೆಯಲ್ಲಿ ಸೃಜಿಸಿದಾಗ ಕಾವ್ಯಾನುಭವ ಸೃಷ್ಟಿಕರ್ತನನ್ನೇ ಮೀರಿ ಪಡೆಯುವ ಆಳ, ವೈಶಾಲ್ಯಗಳ ಬಗ್ಗೆ ಕಾವ್ಯ ಮೀಮಾಂಸೆಯಲ್ಲಿ ಸಾಕಷ್ಟು ಚರ್ಚೆಗಳಾಗಿವೆ. ಕಾವ್ಯಾನುಭವ ಹಾಗೂ ಅದರ ಆಸ್ವಾದನೆಯ ಪರಿಕಲ್ಪನೆಗಳಿಗೆ ಸಂಬಂಧಿಸಿದ ವಿಚಾರವದು. ಇಲ್ಲಿ ಬೇಂದ್ರೆ ಕಾವ್ಯ ಇಂದಿನ ಅನುಭವದ ನಿಕಷದಲ್ಲೂ ಪರೀಕ್ಷಿಸಿಕೊಂಡು ಶ್ರೇಷ್ಠ ಕಾವ್ಯದ ಸಾರ್ವಕಾಲಿಕ ಸತ್ಯವನ್ನೇ ಪ್ರತಿಪಾದಿಸಿದೆ.[೧೪]

**ಟಿಪ್ಪಣಿಗಳು ಮತ್ತು ಉಲ್ಲೇಖ:**

೧. ಕಳೆದ ದಶಕದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕೇಂದ್ರ ನೃತ್ಯ ಅಕಾಡೆಮಿಯವರು ವಿಭಿನ್ನ ಕೊರಿಯಾಗ್ರಫಿ ನಾಟ್ಯಪ್ರದರ್ಶನ ಉತ್ಸವವನ್ನು ಏರ್ಪಡಿಸಿದ್ದರು. ಅದರಲ್ಲಿ ಕೇರಳದ ಕೊರಿಯಾಗ್ರಫರ್ ಒಬ್ಬರು (ಹೆಸರು ಯಾವುದೂ ನೆನಪಾಗುತ್ತಿಲ್ಲ) ಸಾವನ್ನು ಕೇಂದ್ರವಾಗಿಟ್ಟುಕೊಂಡು ಬಹುಸುಂದರವಾದ ಕೊರಿಯಾಗ್ರಫಿ ನಾಟ್ಯಪ್ರದರ್ಶಿಸಿದ್ದರು. ನಾನು ಮತ್ತು ಎಚ್.ಎಂ.ಟಿ.ಯ ಗೆಳೆಯ ಕೆ. ರಾಮದಾಸ್ ಆ ಎಲ್ಲಾದಿನಗಳ ಪ್ರದರ್ಶನ ನೋಡಿದ್ದೆವು.

ಸಾವಿನ ಬಗೆಗಿನ ಆ ಪ್ರದರ್ಶನದಲ್ಲಿ – ಕೈಗಾರಿಕೆ, ಅಪಘಾತ, ರೋಗ ಹೀಗೆ ಬದುಕಿನ ವಿವಿಧ ಮಜಲುಗಳಲ್ಲಿ ಹೊಕ್ಕು ಹೊರಡುವ ಸಾವು, ಆದರೆ ಧೀರನಾದ ಪೂರ್ಣಾಯುಷಿ ಒಬ್ಬ, ಸಹಸ್ರ ಚಂದ್ರರನ್ನು ಕಾಣುವ ಚೈತನ್ಯ ಉಳ್ಳವನು, ಬಿಳಿ ವಸ್ತ್ರಧಾರಿಯಾಗಿ, ಕಪ್ಪು ಬಟ್ಟೆತೊಟ್ಟ ಸಾವು ವಿವಿಧ ರೀತಿಯಲ್ಲಿ ಪಂಥಾಹ್ವಾನದ ಪಟ್ಟಿನಂತೆ ವಿಭಿನ್ನ ಹೆಜ್ಜೆ ಹಾಕಿ ಕುಣಿದಾಗ ತಾನೂ ಮೃತ್ಯುವಿನ ಕೈ ಅಮುಕಿಹಿಡಿದು ಸಮರಸದ ತಾಳಲಯದಲ್ಲಿ ನರ್ತಿಸುತ್ತಾನೆ. ಅವನು ಸಾವನ್ನೂ ಮಣಿಸುವ ಆಶಯಪಾತ್ರ. ಬಹು ಅದ್ಭುತವಾಗಿ ಮೂಡಿ ಬಂದಿದ್ದ ಆ ನೃತ್ಯ ಸಂಯೋಜನೆ ಅಪರೋಕ್ಷವಾಗಿ 'ನಾದಲೀಲೆ' ಆಸ್ವತ್ರೆಯಲ್ಲಿ ನನ್ನೊಳಗೆ ಹರಡಿಕೊಂಡ ಕ್ರಮದಲ್ಲಿ ಎಲ್ಲೋ ಸೇರಿಕೊಂಡಿದ್ದಿರಬಹುದು ಎಂದು ಈಗ ಅನಿಸುತ್ತದೆ.

೨. ಗೋಪಾಲಕೃಷ್ಣ ಅಡಿಗರ 'ವರ್ಧಮಾನ' ಕವನದ ಕೊನೆಯ ನಾಲ್ಕು ಸಾಲುಗಳು:

''ಗಹ್ವರದ ಮುಖ ಅಲ್ಲಿ; ಆಚೆ ಬಯಲ ಬರಾವು;  
ಹಣ್ಣು ಹಂಪಲು ಹಸುರ ಬಲ್ಲೆ, ಬಲ್ಲೆ;  
ಜೀವನನಿಧಾನಶ್ರುತಿ ಶುದ್ಧಿ ಮೊರೆವ ಕರಾವು;  
ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ.''

ಎಂಬಲ್ಲಿಯೂ ಕತ್ತಲೆ ಕಳೆದ, ಸುಂದರ ಬೆಳಕು ಹಸುರು ಹಾಗು ಜೀವಶಕ್ತಿಯ ವಿಕಾಸದ ಇತ್ಯಾತ್ಮಕ (positive) ಸ್ವೀಕಾರ ಇದೆ ಎಂಬುದನ್ನು ಗಮನಿಸಬೇಕು.

೩. ಗೋಪಾಲಕೃಷ್ಣ ಅಡಿಗರ 'ಭಾವತರಂಗ' ಸಂಕಲನದ 'ಇದು ಬಾಳು' ಕವನದ ಐದನೇ ಭಾಗ.

''ಆಶೆಯೆಂಬ ತಳವೊಡೆದ ದೋಣಿಯಲಿ  
ದೂರತೀರಯಾನ;  
ಯಾರಲೀಲೆಗೋ ಯಾರೊ ಏನೊ ಗುರಿ  
ಯಿರದೆ ಬಿಟ್ಟಬಾಣ!''

ಇಲ್ಲಿ ಅಡಿಗರು ಗುರಿ-ಇರದೆ ಇದನ್ನು 'ಗುರಿಯಿರದೆ' ಎಂಬ ಯಕಾರ ಆಗಮಸಂಧಿ ಯನ್ನು ಉಳಿಸಿಯೂ ಸಂಯೋಜನೆಯನ್ನು ಒಡೆದು ಎರಡು ವಾಕ್ಯಗಳಲ್ಲಿ ಇಟ್ಟು 'ಯಾರ ಲೀಲೆಗೋ ಯಾರೊ ಏನೊ ಗುರಿ' ಎಂದು ಒಂದು ಅರ್ಥವನ್ನೂ ಉಳಿಸಿಕೊಳ್ಳುತ್ತಾರೆ. ಇನ್ನೊಂದು ಅರ್ಥದಲ್ಲಿ 'ಗುರಿಯಿರದೆ ಬಿಟ್ಟಬಾಣ' ಎಂದಾಗ ವಿಧಿವಾದದ ಸಕಲ ನಿಯಂತ್ರಣ ಮೂಲತತ್ವವನ್ನೇ ಪ್ರಶ್ನಿಸುತ್ತಾರೆ. ಈ ವಿವರಗಳೆಲ್ಲಾ 'ನಾದಲೀಲೆ'ಯ 'ಬೇಟೆಗಾರ'ನ ಪತ್ತೆಯಲ್ಲಿ ತೊಡಗಿದ್ದ ಮನಸ್ಸಿಗೆ ಹೊಳೆದಿರಲಿಲ್ಲ.

೪. 'ಗರಿ' ಕವನ ಸಂಕಲನದ 'ಕುಣಿಯೋಣು ಬಾರ!' ಎಂಬೊಂದು ನಲ್ವಾಡುವಿನಲ್ಲಿ ಬೇಂದ್ರೆಯ ಸಾಲುಗಳು:

''ನಾನಲ್ಲ  
ನೀನಲ್ಲ  
ನನ್ನಲ್ಲಿ ನೀನಿಲ್ಲ  
ಸಾವಿನ ನೋವಿಲ್ಲ। ಕುಣಿಯೋಣು ಬಾರ  
ಕುಣಿಯೋಣು ಬಾ।।



ಇದ್ದದ್ದು ಮರೆಯೋಣ  
ಇಲ್ಲದ್ದು ತೆರೆಯೋಣ  
ಹಾಲ್ಜೇನು ಸುರಿಯೋಣ। ಕುಣಿಯೋಣು ಬಾರ  
ಕುಣಿಯೋಣು ಬಾ।।''

ಕುಣಿಯತೊಡಗಿದಾಗ ಸಾವು ಮರೆಯಾಗುತ್ತದೆ (ಸಾವಿನ ನೋವಿಲ್ಲ). ನಾಟ್ಯ ಬೇಂದ್ರೆಗೆ ಒಂದು ಲಯಕಾರಿ ಸಾಮರಸ್ಯ. 'ನೃತ್ಯ ಯಜ್ಞ' ಕವನದ ಈ ಸಾಲುಗಳನ್ನು ಗಮನಿಸಬಹುದು.

''ಜಗವೆಲ್ಲವೂ ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೀ  
ಸಖಿ ಸಂಮುಖ ತಲ್ಲೀನತೆಯಲಿ ಏಕಾಕಿ''  
''ಅಕ್ಷರದೀ ಬ್ರಹ್ಮ ಕೃತ್ಯ ನಿತ್ಯದ ಈ ನೃತ್ಯ  
ಚಿತ್ತದಲ್ಲಿ ಚಿತ್ರಿಸುತಿರೆ, ಮರ್ತ್ಯವಹುದಮರ್ತ್ಯ''  
''ಪುರುಷನಿದಿರು ಪ್ರಕೃತಿ ಕುಣಿವುದೆಂದು ಸಾಂಖ್ಯಸೂತ್ರ  
ಪ್ರಕೃತಿ ಸಾಕ್ಷಿ ಪುರುಷ ನಾಟ್ಯ ನವೋನವ ವಿಚಿತ್ರ''

'ನೃತ್ಯಯಜ್ಞ'ದ ಬಗ್ಗೆ ಡಿ.ಆರ್. ನಾಗರಾಜ, ಮೊಕಾಶಿ, ಕುರ್ತಕೋಟಿ ಚರ್ಚಿಸಬಲ್ಲ ಮಾತುಗಳನ್ನು ಬರೆದಿದ್ದಾರೆ. ಅದರ ಚರ್ಚೆ ಈಗ ಬೇಡ. ಮುಖ್ಯವಾದ ಮಾತೆಂದರೆ ಬೇಂದ್ರೆಗೆ 'ನೃತ್ಯ' ಎಂದೂ ಒಬ್ಬನ ನಾಟ್ಯವಾಗಿರಲೇ ಇಲ್ಲ. 'ನಾಟ್ಯ' ಒಂದು 'ಪ್ರವೃತ್ತಿ' ಯಾಗಿ ಅಲ್ಲಿಂದ ಅದು ವಿಸ್ತರಿಸುತ್ತಾ ಪ್ರಕೃತಿ-ಪುರುಷರ ನೆಲೆಗೂ; ಅದನ್ನು ದಾಟಿದ ತಾತ್ವಿಕ ನೆಲೆಗಳಿಗೂ ವಿಸ್ತರಿಸಿದೆ.

'ನಾಟ್ಯ' ಒಂದು ದೈಹಿಕ ಚಲನೆ ಹಾಗೂ ಮಾನಸಿಕ 'ತನ್ಮಯತೆ' ಎರಡು ಕ್ರಿಯೆಗಳನ್ನೂ ಉದ್ದೀಪಿಸುತ್ತದೆ. ಈ ತಲ್ಲೀನತೆಯಲ್ಲಿ ಕುಣಿತದ ಜೀವ ಹೊರಗಿನ ಚರ ಜಗತ್ತಿನ ಜೊತೆ ಸಾಮರಸ್ಯ ಪಡೆಯುತ್ತದೆ. ಮನುಷ್ಯ ಭೂಮಿಯ ಮೇಲೆ ಚಲನೆಯಲ್ಲಿದ್ದಾನೆ. ಹಾಗೆ ಭೂಮಿ ಸೂರ್ಯನ ಸುತ್ತ, ಸೂರ್ಯ ಮತ್ಯಾವುದೋ ನಕ್ಷತ್ರದ ಕಡೆ ಚಲಿಸುತ್ತಿದ್ದಾನೆ. ಸಮಸ್ತ ಬ್ರಹ್ಮಾಂಡವೇ ಒಂದು ಚಲನೆಯ ಜಗತ್ತು. ಅದರಲ್ಲಿ ಚಲಿಸುತ್ತಿರುವ ಮನುಷ್ಯನ ಒಳಗೂ, ಉಸಿರಾಟ, ರಕ್ತಪರಿಚಲನೆ, ಮನಸ್ಸಿನ ಯೋಚನೆಗಳ ಚಲನೆ. ಜೊತೆಗೆ ಹಗಲು ರಾತ್ರಿ, ಗಾಳಿ ನೀರುಗಳ ಚಲನೆ. ಇಂತಹ ವಿಶ್ವದ ನಿರಂತರ ಚಲನೆ ಜೊತೆ ಸಮಶ್ರುತಿಯಲ್ಲಿದ್ದಾಗ ಮಾತ್ರ ಬದುಕು. ಆಗ ಅದು ನಾಟ್ಯ. ಅಂತಹ ಕುಣಿತದಲ್ಲಿ ಸಾವಿನ ನೋವಿಲ್ಲ, ಈ ವಿಶ್ವ ಚಲನೆ (ನಾಟ್ಯ) ಯ ಸಮಶ್ರುತಿ ತಪ್ಪಿದಾಗ ಅದು ಮರಣಮುಖವಾಗಬೇಕಾಗುತ್ತದೆ.

೫. ಬೇಂದ್ರೆಯವರ 'ಸಂಚಯ' ಕವನ ಸಂಕಲನದ 'ಚಾಂಗದೇವ ಪಾಸಷ್ಟಿ' ಕವನದ ಈ ಕೆಳಗಿನ ಸಾಲುಗಳನ್ನೂ ನೆನಪಿಸಿಕೊಳ್ಳಬಹುದು.

''ಕಡಲು ಕಡಲು ಒಂದೊಡಲು ಆಗಿ ಪ್ರಳ  
ಯದಲಿ ನೀರೆ ನೀರು  
ಉಗಮ ಸಂಗಮಗಳೆರಡ ನುಂಗಿ ನ  
ನ್ನೊಳಗೆ ನೀನೆ ಸೇರು''

೬. ಕಾವ್ಯಾನುಭವದ ಭಿನ್ನತೆಯನ್ನು ಗುರುತಿಸಲು ಬೇಂದ್ರೆಯವರ 'ಜೀವಲಹರಿ' ಸಂಕಲನದ 'ನಾದಬೇಕು' ಎಂಬ ಕವನದ ಜೊತೆ ಹೋಲಿಸಬಹುದು. 'ನಾದಬೇಕು' ಕವನದಲ್ಲಿ 'ನಾದ'

ದ ಹೇಳಿಕೆಗಳಿವೆ. 'ಜೀವಲಹರಿ' ಸಂಕಲನ ೧೯೫೭ರಲ್ಲಿ ಅಂದರೆ ನಾದಲೀಲೆ ಬಂದು ೧೯ ವರುಷಗಳ ಬಳಿಕ ಪ್ರಕಟವಾಗಿದೆ. 'ನಾದಬೇಕು' ಕವನದಲ್ಲಿ 'ನಾದ' ದ ಮೂಲಕ ತಾತ್ವಿಕ ಆಳ ಅಗಲಗಳನ್ನು ವಿಸ್ತರಿಸಿಹೇಳುವ ಪ್ರಯತ್ನ ಇದೆ. ಆದರೆ ಇದು 'ನಾದಲೀಲೆ' ಯಂತಹ ಯಶಸ್ವಿ ಕವನ ಅಲ್ಲ. ಅಡಿಗರು ಬೇಂದ್ರೆ ಬಗ್ಗೆ ಹೇಳಿದ ತತ್ವಪದದ (ಶೂದ್ರ ನವೆಂಬರ್ ೧೯೮೧ನೇ ಸಂಚಿಕೆ) ನೆನಪು ಬರುವಂತಿದೆ.

೭. 'ಕಣ್ಣಿನಾರತಿ' ಹಾಗೂ 'ಎತ್ತಿಒತ್ತಿಬಂತು ಜೀವ' ತನ್ನ ವಿಶೇಷಾರ್ಥಗಳನ್ನು ಗುಪ್ತವಾಗಿ ಸೂಚಿಸುತ್ತದೆ. ಮೂಲರತಿಯ 'ತೇವ' ಎಂಬ ಪದಕ್ಕೆ ಲೈಂಗಿಕ ಸಂದರ್ಭದ ಒಂದು ಅರ್ಥವ್ಯಾಪ್ತಿಯೂ ಇದೆ. ಆ ಅರ್ಥದಲ್ಲಿ 'ಒತ್ತಿ ಬಂತು ಜೀವ' ಗರ್ಭಾಂಕುರವನ್ನೂ ಸೂಚಿಸಬಲ್ಲದು. ಆ 'ತೇವ' ಸೋಕಲು ಶಿವನ ಹಣೆಯ ಸುಡುವ ಕಣ್ಣಿನ ಬೆಂಕಿ ಮಾಯವಾಗಿ ಅದು ಆರತಿಯಾಗುತ್ತದೆ. ಆ ಕಣ್ಣಿನ ರತಿ ಎತ್ತಿ ಎತ್ತಿ ಜೀವವನ್ನು ಬರಿಸುತ್ತದೆ. ಆಗ ಅನಂಗನ ಹುಟ್ಟು. ಗಂಡು - ಹೆಣ್ಣು ಒಂದಾಗುವ ಮದುವೆಯಲ್ಲಿ ಮದುಮಕ್ಕಳಿಗೆ ಎತ್ತುವ ಆರತಿ ಎಲ್ಲರ ಸಮ್ಮುಖದ ವಿಧ್ಯುಕ್ತ ಆಚರಣೆ. ಆದರೆ ಮೂಲರತಿಯ ತೇವವೇ ಜೀವ ಸಂಸ್ಕಾರಗೊಂಡಾಗ ಕಣ್ಣನಾರತಿ ಸೌಂದರ್ಯವನ್ನು ಬೆಳಗುತ್ತದೆ. ಕಾಮ,ಪ್ರೇಮ, ಪ್ರಕೃತಿ ಸ್ವಭಾವಗಳು ಸೃಷ್ಟಿಯ ಸೌಂದರ್ಯದಲ್ಲಿ ಸತ್ತು ಹುಟ್ಟುವ ಬಗೆ ಇದು. ಸುಟ್ಟು ಹುಟ್ಟುವ ಈ ಪ್ರಕ್ರಿಯೆ ಸಾವನ್ನು ಮರೆಸಿ ಸೌಂದರ್ಯವನ್ನೂ ಸೃಷ್ಟಿಶೀಲತೆಯನ್ನೂ ಸ್ಥಾಪಿಸುತ್ತದೆ. ಸಾವನ್ನು ಮರೆತು ಸಾಗುವ ಸೃಷ್ಟಿಯೇ ನಿರಂತರವಾದ ಜೀವ ಪ್ರವಾಹ. ಸೃಷ್ಟಿಯೇ ಒಂದು ಆಟ (ಲೀಲೆ) ಹಾಗೂ ಪಾಟ (ಹಾಡು ನೀತಿ). ಕವನದ ಮುಂದಿನ ಮೂರು ಸಾಲುಗಳು:

ಎದೆಯ ತೋರಿಸಿ ಕಣ್ಣ ತೆರಿಸಿ ಹೋದ ಮಾಟ ನೋಟ
ಮರಳಿ ಬಂದು ಕಣ್ಣ ಕೊಟ್ಟು ಹೃದಯ ಜೀವ ಕೂಟ
ಸೃಷ್ಟಿಯನ್ನೆ ನಡೆಸುತಿಹುದು ಆಗಿ ಆಟ ಪಾಟ॥

೮. ಸಂಗೀತ ಶಾಸ್ತ್ರದ ಪ್ರಕಾರ 'ನಾ' ಎಂದರೆ ಪ್ರಾಣವಾಯು 'ದ' ಎಂದರೆ ಪ್ರಾಣಾಗ್ನಿ. ಇವುಗಳ ಅವಿಚ್ಛಿನ್ನ ಘರ್ಷಣೆಯಿಂದ ನಾದ ಹುಟ್ಟುತ್ತದೆ. ಹೀಗೆ ಉತ್ಪನ್ನವಾದ ನಾದ ನಾಭಿ, ಹೃದಯ, ಕಂಠ, ನಾಲಗೆ ಮತ್ತು ಶಿರಸ್ಸು ಇವುಗಳ ಮುಖಾಂತರ ಪುಷ್ಟಿಗೊಂಡು ಪ್ರಕಟವಾಗುತ್ತದೆ.

೯. ಒಬ್ಬನ ರಕ್ತದಿಂದ ಒಂದು ಸಲ ನಾನು ಪಡೆದ ಪ್ಲೇಟ್‌ಲೆಟ್ ಕಣಗಳು ಬ್ಲಡ್‌ಬ್ಯಾಂಕಿನಲ್ಲಿ ಹನ್ನೆರಡು ಮಂದಿ ರಕ್ತದಾನಿಗಳ ರಕ್ತದಿಂದ ಪಡೆಯಬಹುದಾದ ಕಣಗಳಿಗೆ ಸಮಾನ. ದಾನಿಯ ದೇಹದ ಮೂರನೇ ಎರಡು ಭಾಗದಷ್ಟು ರಕ್ತವನ್ನು ಡಯಾಲಿಸಿಸ್ ಮಾಡಿದಂತೆ ಒಂದು ಯಂತ್ರದೊಳಗೆ ತುಂಬಿಸಿ, ಅದರಿಂದ ಪ್ಲೇಟ್‌ಲೆಟ್ ಕಣಗಳನ್ನು ಬೇರ್ಪಡಿಸಿ ರಕ್ತವನ್ನು ಪುನಃ ದಾನಿಯ ದೇಹಕ್ಕೆ ತುಂಬಿಸಲು ಕನಿಷ್ಠ ಮೂರು ಗಂಟೆಗಳ ಸಮಯ ಬೇಕು. ಸೈಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಪ್ಲೇಟ್‌ಲೆಟ್ ಕಣತೆಗೆಯುವ ಯಂತ್ರ ಹಾಳಾದ್ದರಿಂದ, ಸ್ವಲ್ಪದೂರದ ತಿಪ್ಪಸಂದ್ರದಲ್ಲಿರುವ ಟಿ.ಟಿ.ಕೆ ಬ್ಲಡ್‌ಬ್ಯಾಂಕಿನ ಯಂತ್ರ ಉಪಯೋಗಿಸಿ ಈ ಕಣಗಳನ್ನು ಬೇರ್ಪಡಿಸಬೇಕಾಯಿತು. ಆದ್ದರಿಂದ ಆತ ಬಂದಾಗ ಸಂಜೆಯಾಗಿತ್ತು. ಹಾಗಾಗಿ ರಾತ್ರಿಯ ನಿದ್ರೆಗೆ ಜಾರಿಕೊಳ್ಳಲು ಬಹಳ ಸಮಯ ಹಿಡಿಯಲಿಲ್ಲ.

೧೦. 'ನಾದಲೀಲೆ' ಸಂಕಲನದ ಮೊದಲ ಮುದ್ರಣದ ಮುಖಪುಟದಲ್ಲಿ ಶಂಖದ ಸಂಕೇತದ



ಒಂದು ಚಿತ್ರ. ಮೊಗಚಿ ಇಟ್ಟ ಶಂಖದಿಂದ ರೆಕ್ಕೆ ಉಳ್ಳ ಪುಟ್ಟ ಮುಗ್ಧ ದೇವರ ಮಕ್ಕಳು ಶಂಖ ಊದುತ್ತಾ ಹಾರಿ ಹೊರಬಂದು ಹಾರಾಡುವ ಶಂಖ ಊದುವ ಚಿತ್ರ. ಪ್ರಖ್ಯಾತ ಕತೆಗಾರರಾದ ದಿವಂಗತ ಎಂ. ಸೀತಾರಾಮ (ಆನಂದ) 'ನಾದಲೀಲೆ' ಕವನ ಸಂಗ್ರಹದ ಮೊದಲ ಮುದ್ರಣಕ್ಕೆ ಶಂಖದ ಸಂಗ್ರಹದ ಈ ಮುಖಚಿತ್ರವನ್ನು ಬರೆದುಕೊಟ್ಟಿದ್ದರು. ೧೯೮೯ರಲ್ಲಿ ಪ್ರಕಟವಾದ ಹನ್ನೊಂದನೇ ಮುದ್ರಣದಲ್ಲೂ ಇದೇ ಚಿತ್ರವನ್ನು ಪುನರ್ ಮುದ್ರಿಸಿದ್ದಾರೆ. ನನ್ನ ಸ್ವಂತದ ಕಾಪಿ ಈ ಮುಖಪುಟ ಚಿತ್ರವುಳ್ಳದ್ದು. ಆದ್ದರಿಂದ ಶಂಖ ಚಿತ್ರದ ಮೂಲಕ ನಾದಲೀಲೆ ಸಂಕಲನದ ಕವರ್‌ಪೇಜ್ ನೆನಪಿಗೆ ಬಂದುದು ಎಂದು ನನ್ನ ಊಹೆ.

೧೧. 'ತಿರುಚೆಂದೂರು' ಬಂಗಾಳಕೊಲ್ಲಿಯ ಕಡಲ ತಡಿಯ ಪಟ್ಟಣ. ಇಲ್ಲಿ ಪ್ರಖ್ಯಾತ 'ವಡಿವೇಲು' ದೇವಸ್ಥಾನವಿದೆ. ಇಲ್ಲಿನ ಕರಾವಳಿ ಕಣ್ಣಿಗೆ ಕಾಣುವಷ್ಟು ದೂರದಲ್ಲಿ ಆದಿತನಾರ್ ಕಾಲೇಜುಗಳ ಸಮೂಹ ಇದೆ. ಒಂದು ಸಂದರ್ಭದಲ್ಲಿ ಕರಾವಳಿಗೆ ತಾಗಿಕೊಂಡಿರುವ ಈ ಕಾಲೇಜು ಹಾಸ್ಟೆಲಿನಲ್ಲಿ ನಾನು ಮೂರುವಾರಗಳ ಕಾಲ ವಾಸವಾಗಿದ್ದೆ. ಅಲ್ಲಿದ್ದಷ್ಟು ದಿನ ಬೆಳೆಗಾತ ಸೂರ್ಯೋದಯದ ವೀಕ್ಷಣೆ ಮತ್ತು ಕಡಲ ಕಿನಾರೆಯ ನಡಿಗೆ. ಪೂರ್ವ ದಿಕ್ಕಾದ್ದರಿಂದ ಬಂಗಾಳಕೊಲ್ಲಿಯ ಸೂರ್ಯೋದಯ ಬಹು ಸುಂದರ. ದೊಡ್ಡ ಬೆಳಗು. ಪೂರ್ವಕರಾವಳಿಯ ಅರುಣೋದಯ ವೈಭವ, ನಾನು ಆ ಕಾಲದಲ್ಲಿ ಉದ್ಯೋಗದಲ್ಲಿದ್ದ ಉಡುಪಿಯ (ಪಶ್ಚಿಮಕರಾವಳಿ) ಸೂರ್ಯೋದಯಕ್ಕಿಂತ ಭಿನ್ನ. ಸೂರ್ಯೋದಯದಲ್ಲಿ ಇನ್ನೂ ಮಹತ್ತಾದ ಸಾಗರ ವೈಶಾಲ್ಯದ ಹರಹನ್ನು ಕನ್ಯಾಕುಮಾರಿಯಲ್ಲಿ ಕಾಣಬಹುದು.

೧೨. 'ಹೃದಯ ಸಮುದ್ರ' (ಪ್ರಥಮ ಮುದ್ರಣ ಜುಲಾಯಿ ೧೯೫೬) ಸಂಕಲನದಲ್ಲಿ ''ನನ್ನ ಕಣ್ಣೇ ಕಿವಿಯು / ಕವಿಯು ನಾನು'' ಎಂದಿದ್ದಾರೆ. (ಕವನಃ 'ಶ್ರೀ ಮಾತೃಶ್ರೀಗೆ') ಈ ಕವನದಲ್ಲಿ ಕಣ್ಣಿಂದಲೆ ಕುಡಿಯುವ / ನುಡಿಯುವ ಅನುಭವ.

೧೩. ಕುರ್ತಕೋಟಿಯವರು ಕಾವ್ಯ ಲೈಫ್ ಸೇವರ್ ಆಗುತ್ತದೆ ಎಂದಾಗ ಬಹಳಹಿಂದೆ (ಸುಮಾರು ೨೫ ವರುಷಗಳ ಹಿಂದೆ, ಮೈಸೂರಿನ ಮಾನಸ ಗಂಗೋತ್ರಿ ಲೈಬ್ರರಿಯಲ್ಲಿ) ಓದಿದ ಜಾನ್ ಸ್ಟುವರ್ಟ್ ಮಿಲ್‌ನ ಒಂದು ಬರಹ ನೆನಪಾಯಿತು.

ಕಳೆದ ಶತಮಾನದ ಇಂಗ್ಲೆಂಡಿನ ಅರ್ಥಶಾಸ್ತ್ರಜ್ಞ ಜಾನ್ ಸ್ಟುವರ್ಟ್ ಮಿಲ್ ದೊಡ್ಡ ವಿದ್ವಾಂಸರಾಗಿದ್ದ ಆತನ ತಂದೆ ಜೊತೆ ಎಳೆ ಬಾಲ್ಯದಿಂದಲೇ ಕಲಿತು ಬಹುದೊಡ್ಡ ಪಂಡಿತನಾದ. ಆದರೆ, ಬಾಲ್ಯದಲ್ಲಿ ತಂದೆಯೊಡನೆ ಈ ಓದಿನ ಓಘದಲ್ಲಿ ಬಿದ್ದು ತನ್ನ ಸಹಜ ಬಾಲ್ಯವನ್ನು ಕಳೆದುಕೊಂಡ ಅವನು ಯೌವನದಲ್ಲಿ ಒಂದು ರೀತಿಯ ಮಾನಸಿಕ ಖಿನ್ನತೆಗೆ (nervous breakdown) ಒಳಗಾದ. ಕೊನೆಗೆ ಇಂಗ್ಲಿಷ್ ಕವಿ ವರ್ಡ್ಸ್‌ವರ್ತ್‌ನ Tintern Abbey ಪದ್ಯವನ್ನು ಓದುತ್ತಾ ತನ್ನ ಬಾಲ್ಯವನ್ನು ಮರಳಿ ಪಡೆದು ಮಾನಸಿಕ ಖಿನ್ನತೆಯಿಂದ ಹೇಗೆ ಪಾರಾದೆ ಎಂಬುದನ್ನು ಬರೆದಿದ್ದಾನೆ.

೧೪ ಧಾರವಾಡದ ಸಮಾಜ ಪುಸ್ತಕಾಲಯ ಪ್ರಕಟಿಸಿದ ಬೇಂದ್ರೆಯವರ 'ಸಾಹಿತ್ಯದ ವಿರಾಟ್ ಸ್ವರೂಪ' ಗ್ರಂಥದ ಅನುಬಂಧ - ೪ ರಲ್ಲಿ, ಶ್ರೀಮತಿ ಶಾಂತಾ ಗಲಗಲಿ ಅವರು ೧೯೪೭ರ ವಾಹಿನಿ ವಿಶೇಷ ಸಂಚಿಕೆಯಲ್ಲಿ 'ನಾದಲೀಲೆ' ಬಗ್ಗೆ ಒಂದು ಲೇಖನ ಪ್ರಕಟಿಸಿದ್ದಾರೆ ಎಂದು ತಿಳಿಯುತ್ತಿದೆ ಎಂದಿದ್ದಾರೆ. ಆ ಲೇಖನ ಓದಲು ನನಗೆ ಇನ್ನೂ ಸಿಗಲಿಲ್ಲ.

# ನೀನಾಸಮ್ ಸಂಸ್ಕೃತಿ ಶಿಬಿರ ೨೦೦೨
# ಒಂದು ವರದಿ

ಈ ವರ್ಷದ ಸಂಸ್ಕೃತಿ ಶಿಬಿರವು ಅಕ್ಟೋಬರ್ ೧೩ರಿಂದ ೨೦ರವರೆಗೆ ಎಂಟುದಿನಗಳ ಕಾಲ ಸ್ಥೂಲವಾಗಿ 'ಭವಿಷ್ಯ ಚಿಂತನೆ' ಎಂಬ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ನಡೆಯಿತು. ಡಾ. ಯು. ಆರ್. ಅನಂತಮೂರ್ತಿಯವರು ಶಿಬಿರದ ನಿರ್ದೇಶಕರಾಗಿದ್ದರು.

'ಭವಿಷ್ಯ ಚಿಂತನೆ' ಎಂಬ ವಿಷಯದ ಕುರಿತು ಶ್ರೀ ಶಿವ ವಿಶ್ವನಾಥನ್ ಅವರ ಪೀಠಿಕಾ ಭಾಷಣದಿಂದ ಪ್ರಾರಂಭವಾದ ಗೋಷ್ಠಿಗಳು ಭವಿಷ್ಯದ ರಾಜಕೀಯ ಚಿಂತನೆಗಳನ್ನು ಕುರಿತ ಶ್ರೀ ಅಶೋಕ ವಾಜಪೇಯಿ ಅವರ ಸಮಾರೋಪ ಭಾಷಣದೊಂದಿಗೆ ಮುಗಿಯಿತು. ನಡುವಿನ ದಿನಗಳಲ್ಲಿ ನಡೆದ ಉಪನ್ಯಾಸ-ಗೋಷ್ಠಿಗಳು ಇಂತಿವೆ: ವಿಜ್ಞಾನ-ತಂತ್ರಜ್ಞಾನದ ಭವಿಷ್ಯ, ಜೈವಿಕ ತಂತ್ರಜ್ಞಾನ (ಶ್ರೀ ಶಿವವಿಶ್ವನಾಥನ್), ಭಾರತೀಯ ಸಂಗೀತದ ಭವಿಷ್ಯ, ಆಧುನಿಕ ತಂತ್ರಜ್ಞಾನ ಮತ್ತು ಸಂಗೀತ (ಶ್ರೀ ಭಾಸ್ಕರ ಚಂದಾವರ್ಕರ್), ಧರ್ಮ ಮತ್ತು ಸೆಕ್ಯುಲರಿಸಮ್ (ಶ್ರೀ ನರಹರಿ ರಾವ್), ಪರಿಸರದ ಪರಿಸ್ಥಿತಿ (ಶ್ರೀ ಸಂಜಯ್ ಗುಬ್ಬಿ), ಕನ್ನಡ ಕಾವ್ಯದಲ್ಲಿ ಭಾಷೆ ಮತ್ತು ವಾಕ್ಯರಚನೆ, ಕನ್ನಡ ಭಾಷೆ ಮತ್ತು ಭಾಷಾಂತರ (ಪ್ರೊ. ಕೀರ್ತಿನಾಥ ಕುರ್ತಕೋಟಿ), ನನ್ನ ಕಾವ್ಯಭಾಷೆ (ಡಾ. ಚಂದ್ರಶೇಖರ ಕಂಬಾರ), ಸಮಕಾಲೀನ ನೃತ್ಯ-ಪ್ರಾತ್ಯಕ್ಷಿಕೆ (ಭರತ್ ಶರ್ಮ ಮತ್ತು ತ್ರಿಪುರಾ ಕಶ್ಯಪ್), ಒಡಿಸ್ಸಿ ನೃತ್ಯ ಪ್ರಾತ್ಯಕ್ಷಿಕೆ (ಸುರೂಪಾ ಸೇನ್ ಮತ್ತು ಬಿಜಯನಿ ಸತ್ಪಥಿ), 'ದ್ವೀಪ' ಚಲನಚಿತ್ರ ಪ್ರದರ್ಶನ ಮತ್ತು ಸಂವಾದ (ಶ್ರೀ ಗಿರೀಶ್ ಕಾಸರವಳ್ಳಿ), ಕೀಸ್ಲೋವ್‌ಸ್ಕಿಯ ಚಲನಚಿತ್ರಗಳಲ್ಲಿ ಬಣ್ಣ ಮತ್ತು ಕಾಲಕಲ್ಪನೆ (ಸಮೀಕ್ ಬಂದೋಪಾಧ್ಯಾಯ ಮತ್ತು ಸುದೇಷ್ಣಾ ಬ್ಯಾನರ್ಜಿ), ಅಲ್ಲಮನಲ್ಲಿ ಕಾಲತತ್ವ (ಕಿ.ರಂ. ನಾಗರಾಜ್), ದೇಶೀವಾದದ ನೆಲೆಗಳು (ಮೊಗಳ್ಳಿ ಗಣೇಶ್), ಕೃಷಿ ಮತ್ತು ಅಡಕೆಯ ಭವಿಷ್ಯ (ಯಶವಂತ ಡೋಂಗ್ರೆ).

ಪ್ರತಿದಿನ ಸಂಜೆ ಸಾರ್ವಜನಿಕರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಮೊದಲ ಮೂರು ದಿನಗಳಲ್ಲಿ ನೀನಾಸಮ್ ತಿರುಗಾಟ ೨೦೦೨ರ



ಮೂರು ನಾಟಕಗಳ ಪ್ರಥಮ ಪ್ರದರ್ಶನಗಳು ನಡೆದವು – 'ಸಂಸಾರದಲ್ಲಿ ಸನಿದಪ' (ದಾರಿಯೋ ಫೋ ನ 'ವರ್ಚುವಸ್ ಬರ್ಗ್‌ಲರ್' ಮರುರೂಪ, ರಚನೆ -ನಿರ್ದೇಶನ: ಅಕ್ಷರ ಕೆ.ವಿ) , 'ಮಂತ್ರಶಕ್ತಿ' (ಸಂಸರ ನಾಟಕ, ನಿರ್ದೇಶನ: ಚನ್ನಕೇಶವ), 'ಚೋರ ಚರಣದಾಸ' (ಹಬೀಬ್ ತನ್ವೀರ್ ನಾಟಕ, ಅನುವಾದ: ಸಿದ್ಧಲಿಂಗ ಪಟ್ಟಣಶೆಟ್ಟಿ, ನಿರ್ದೇಶನ: ಸುರೇಶ್ ಆನಗಳ್ಳಿ), ಶ್ರೀ ಶ್ರೀಪಾದ ಹೆಗಡೆ ಅವರಿಂದ ಹಿಂದೂಸ್ತಾನಿ ಗಾಯನ, ಬೆಂಗಳೂರಿನ ನೃತ್ಯಗ್ರಾಮದ ಕಲಾವಿದರಿಂದ ಒಡಿಸ್ಸಿ ನೃತ್ಯ, ಬೆಂಗಳೂರಿನ ಸ್ಟೆಮ್‌ಡಾನ್ಸ್ ಥಿಯೇಟರ್ ತಂಡದವರಿಂದ ಸಮಕಾಲೀನ ನೃತ್ಯ, ಸಂತ ಭದ್ರಗಿರಿ ಅಚ್ಯುತದಾಸಜೀ ಅವರಿಂದ ಹರಿಕಥೆ ಮತ್ತು ಚೆನ್ನೈನ ಮದ್ರಾಸ್ ಸ್ಟ್ರಿಂಗ್ ಕ್ವಾರ್ಟ್ರೆಟ್ ತಂಡದವರಿಂದ ಪ್ರಯೋಗಾತ್ಮಕವಾದ ಭಾರತೀಯ ಮತ್ತು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ. ದಿನಾಂಕ ೧೬ರಂದು ಅಪರಾಹ್ನ ಶಿಬಿರಾರ್ಥಿಗಳಿಗಾಗಿ ನೀನಾಸಮ್ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ 'ನವಿಲು ನಿಂತಾವ' (ಡಾ. ಚಂದ್ರಶೇಖರ ಕಂಬಾರರ ಎರಡು ಕವಿತೆಗಳನ್ನು ಆಧರಿಸಿದ ರಂಗಪ್ರಸ್ತುತಿ, ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ) ಪ್ರದರ್ಶನವು ನಡೆಯಿತು.

ಈ ಎಲ್ಲ ಕಾರ್ಯಕ್ರಮಗಳ ನಡುವೆ ದಿನಾಂಕ ೧೬ರಂದು ಯುವ ಕವಯಿತ್ರಿ ಶ್ರೀಮತಿ ಲಲಿತಾ ಸಿದ್ಧಬಸವಯ್ಯ ಅವರ 'ಮೊದಲ ಸಿರಿ' ಎಂಬ ಕವನ ಸಂಕಲನಕ್ಕೆ – ಈ ವರ್ಷದ 'ಬಿ.ಎಂ. ಶ್ರೀ ಕಾವ್ಯಪ್ರಶಸ್ತಿ'ಯನ್ನು ನೀಡಲಾಯಿತು. ಶ್ರೀ ಕಿ.ರಂ. ನಾಗರಾಜ್ ಹಾಗೂ ಯು.ಆರ್. ಅನಂತಮೂರ್ತಿಯವರು ಮಾತನಾಡಿ ಕವಯಿತ್ರಿಗೆ ಶುಭ ಹಾರೈಸಿದರು. ಹೊಸ ಬರಹಗಾರರೊಬ್ಬರ ಮೊದಲ ಕವನಸಂಕಲನಕ್ಕೆ ಮೀಸಲಾದ ಬಿ.ಎಂ.ಶ್ರೀ ಕಾವ್ಯಪ್ರಶಸ್ತಿಯನ್ನು ಶಾ.ಬಾಲುರಾವ್ ದಂಪತಿಗಳು ಸ್ಥಾಪಿಸಿದ್ದು, ಅವರ ಅಪೇಕ್ಷೆಯಂತೆ ಅಕ್ಷರ ಪ್ರಕಾಶನವು ಅದರ ನಿರ್ವಹಣೆಯ ಕೆಲಸಗಳನ್ನು ಮಾಡುತ್ತದೆ.

ಇದೇ ಸಂದರ್ಭದಲ್ಲಿ – ಹೊಸ ರಂಗಾಭಿವ್ಯಕ್ತಿಯ ಹುಡುಕಾಟಕ್ಕಾಗಿ – ನೀನಾಸಮ್ ರಂಗಶಿಕ್ಷಣ ಕೇಂದ್ರದ ಪ್ರಾಂಶುಪಾಲರಾದ ಶ್ರೀ ಚಿದಂಬರರಾವ್ ಜಂಬೆಯವರಿಗೆ 'ರುಜುವಾತು ಫೆಲೋಶಿಪ್' ನೀಡಿ ಗೌರವಿಸಲಾಯಿತು. ಯು.ಆರ್. ಅನಂತಮೂರ್ತಿ ಯವರು ಸ್ಥಾಪಿಸಿದ ರುಜುವಾತು ಪ್ರತಿಷ್ಠಾನವು ಅಭಿವ್ಯಕ್ತಿಯ ಹೊಸ ಶೋಧನೆಗಳಿಗಾಗಿ ಈ ಫೆಲೋಶಿಪ್‌ನ್ನು ನೀಡುತ್ತಿದೆ.

## ಮಾತುಕತೆ ೬೪

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮-೩೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

**ನವೆಂಬರ್ ೨೦೦೨ ವರ್ಷ ಹದಿನಾರು ಸಂಚಿಕೆ ನಾಲ್ಕು**



೧. ಶಾಪಗ್ರಸ್ತ ಗಂಧರ್ವ – ಬಿ.ವಿ. ಕಾರಂತ ಸಂಸ್ಮರಣೆ
ಕೀರ್ತಿನಾಥ ಕುರ್ತಕೋಟಿ — ಪುಟ ೨

೨. ಜಾಗತೀಕರಣ ಮತ್ತು ಭಾರತ: ಸೈದ್ಧಾಂತಿಕ ನೆಲೆಗಳು
ಹಾಗೂ ಐತಿಹಾಸಿಕ ವಿಪರ್ಯಾಸಗಳು
ಎನ್. ಮನು ಚಕ್ರವರ್ತಿ — ಪುಟ ೭

೩. ಜಾಗತೀಕರಣ: ಪರ್ಯಾಯ ಸಾಧ್ಯತೆಗಳು
ಡಾ। ನಿ. ಮುರಾರಿ ಬಲ್ಲಾಳ — ಪುಟ ೩೧

೪. ಸಾವ ಸಮ್ಮುಖದಲ್ಲಿ ಜೀವನಾದ
ಬೇಂದ್ರೆಯವರ 'ನಾದಲೀಲೆ' : ಒಂದು ಅನುಭವ
ಎಸ್.ಆರ್. ವಿಜಯಶಂಕರ — ಪುಟ ೫೫

೫. ನೀನಾಸಮ್ ಸಂಸ್ಕೃತಿ ಶಿಬಿರ ೨೦೦೨ - ವರದಿ — ಪುಟ ೭೯


second cover ←


**MAATHUKATHE** NOV. 2002 (YEAR 16 ISSUE 4)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**


→ third cover


## ಅಕ್ಷರ ಪ್ರಕಾಶನ

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **ಕವಿರಾಜಮಾರ್ಗ ಮತ್ತು ಕನ್ನಡಜಗತ್ತು** (ಕೆ.ವಿ.ಸುಬ್ಬಣ್ಣ) | ರೂ. ೭೦ |
| **ಭವ** (ಕಾದಂಬರಿ-ಮರುಮುದ್ರಣ- ಯು.ಆರ್. ಅನಂತಮೂರ್ತಿ) | ರೂ. ೬೦ |
| **ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ** (ನಾಟಕ - ಕೆ.ವಿ. ಅಕ್ಷರ) | ರೂ. ೪೫ |
| **ಯು.ಆರ್. ಅನಂತಮೂರ್ತಿ: ಒಂದು ಅಧ್ಯಯನ** (ಟಿ.ಪಿ. ಅಶೋಕ) | ರೂ. ೫೦ |
| **ಮಾಮಾಮೋಶಿ** (ಮೋಲಿಯೆರ್ ಅನುವಾದ - ಕೆ.ವಿ. ಸುಬ್ಬಣ್ಣ) | ರೂ. ೪೫ |
| **ಜತೆಗಿರುವನು ಚಂದಿರ** (ನಾಟಕ - ಜಯಂತ ಕಾಯ್ಕಿಣಿ) | ರೂ. ೫೦ |
| **ಇನ್ನೂ ಒಂದು** (ಕಾದಂಬರಿ - ವಿವೇಕ ಶಾನಭಾಗ) | ರೂ. ೪೫ |
| **ದಿವ್ಯ** (ಕಾದಂಬರಿ-ಮರುಮುದ್ರಣ - ಯು.ಆರ್.ಅನಂತಮೂರ್ತಿ) | ರೂ. ೮೫ |
| **ಸಂಸ್ಕಾರ** (ಕಾದಂಬರಿ-ಮರುಮುದ್ರಣ - ಯು.ಆರ್.ಅನಂತಮೂರ್ತಿ) | ರೂ. ೭೦ |
| **ಭಾರತೀಪುರ** (ಕಾದಂಬರಿ-ಮರುಮುದ್ರಣ - ಯು.ಆರ್.ಅನಂತಮೂರ್ತಿ) | ರೂ. ೧೧೦ |
| **ಅನಂತಮೂರ್ತಿ ಕಥಾವಾಚಿಕೆ** (ಯು.ಆರ್.ಅನಂತಮೂರ್ತಿ) | ರೂ. ೧೨೦ |
| **ಐದು ದಶಕದ ಕಥೆಗಳು** (ಯು.ಆರ್.ಅನಂತಮೂರ್ತಿ - ಸಮಗ್ರ ಕಥೆಗಳು) | ರೂ. ೨೩೦ |
| **ಕುಮಾರಿಲಭಟ್ಟ** (ಅಕ್ಷರ ಚಿಂತನ ಮಾಲೆ - ಪರಿಚಯ ಮತ್ತು ಅನುವಾದಗಳು - ಪ್ರಭಾಕರ ಜೋಷಿ, ಎಂ.ಎಂ. ಹೆಗಡೆ ಸಿದ್ದಾಪುರ) | ರೂ. ೫೦ |
| **ಸಾಹೇಬರು ಬರುತ್ತಾರೆ** (ಗೊಗೋಲ್ ನಾಟಕ ರೂಪಾಂತರ - ಕೆ.ವಿ. ಸುಬ್ಬಣ್ಣ ಮತ್ತು ಅಕ್ಷರ ಕೆ.ವಿ.) | ರೂ. ೪೫ |
| **ರಿಕ್ತ ರಂಗಭೂಮಿ** (ಗ್ರೊಟೋವ್‌ಸ್ಕಿ ಪರಿಚಯ ಮತ್ತು ಅನುವಾದಗಳು - ಟಿ.ಪಿ. ಅಶೋಕ) | ರೂ. ೪೦ |
| **ಈವರೆಗಿನ ಹೇಳತೇನ ಕೇಳ** (ಚಂದ್ರಶೇಖರ ಕಂಬಾರ – ಸಮಗ್ರ ಕಾವ್ಯ) | ರೂ.೧೫೦ |
| **ಮಾವಿನಮರದಲ್ಲಿ ಬಾಳೆಯ ಹಣ್ಣು** (ನಾಟಕ-ರಂಗಭೂಮಿ ಕುರಿತ ಬರಹಗಳು - ಮರುಮುದ್ರಣ - ಅಕ್ಷರ ಕೆ.ವಿ.) | ರೂ.೧೦೦ |
| **ಶಕ್ತಿಶಾರದೆಯ ಮೇಳ** (ಆಧುನಿಕ ಕನ್ನಡಕಾವ್ಯದ ಅಧ್ಯಯನ- ಡಿ.ಆರ್. ನಾಗರಾಜ್ - ಮರುಮುದ್ರಣ) | ರೂ.೧೫೦ |
| **ಸಂಸಾರದಲ್ಲಿ ಸನಿದಪ** (ದಾರಿಯೋ ಫೋ ನಾಟಕ ಮರುರೂಪ - ಅಕ್ಷರ ಕೆ.ವಿ.) | ರೂ. ೪೫ |
| **ಸಮ್ಮುಖದಲ್ಲಿ ಸ್ವಗತ** (ಸಮಾಜ-ಸಂಸ್ಕೃತಿ ಕುರಿತ ಕಿರು ಬರಹಗಳು - ಉದಯವಾಣಿಯ ಅಂಕಣಗಳ ಸಂಕಲನ - ಅಕ್ಷರ ಕೆ.ವಿ.) | ರೂ. ೮೫ |
| **ಹಸುಬೆ** (ಜಾನಪದ ಅಧ್ಯಯನ - ಡಾ. ಶಾಲಿನಿ ರಘುನಾಥ) | ರೂ. ೮೦ |

fourth cover


# MSIL
## a versatile marketing force

**Started three and half decades ago to provide marketing support to Karnataka's products, MSIL has evolved today as a multi-faceted, multi-product organisation far beyond the dimensions of its original vision. With a nation-wide sales network, keen business acumen and a professional approach; building credibility and winning consumer confidence.**

- *Serving the student community by offering high quality notebooks and school bags at reasonable prices.*
- *Marketing the tickets of Karnataka State Lottery - India's most trusted lottery.*
- *Streamiling the distribution of liquor, contributing substantially to the revenues of the State.*
- *Warehousing and professional handling of air cargo at the Bangalore Air Cargo Complex.*
- *Managing a cold storage for the export of flowers.*
- *Meeting the travel needs of the Government Officials through the Tours & Travels Division.*
- *Bringing home the latest consumer durables within easy reach of the consumers with MSIL Homaker hire purchase scheme.*
- *Commitment to energy conservation by popularising and marketing highly efficient solar, thermal and photovoltaic equipment.*
- *Introduced Karnataka's products to the world through export activities.*

**MSIL has done it all.**

**Mysore Sales International Limited**

**MSIL House, 36, Cunningham Road, Bangalore 560 052**

Phone: 226410-28, Fax: 2250168, Email: msilho@vsnl.com, www.msilonline.com. Branch Offices at: Bangalore (Tel. 2215893, 2211468), Mumbai (Tel. 4946262, 4951304), Chennai (Tel. 4330302, 4343611), New Delhi (Tel.3363836, 3340862)

**Concern for the Consumer**